

# ಲಂಕೇಶ್

ಸೆಪ್ಟೆಂಬರ್ 15, 2010 ರೂ. 12/-

## ದಲಿತರಿಗೆ ಪೇಜಾವರರ ವೈಷ್ಣವ ಜೈಲು





## ಕೋಟಿ ಸೂಲಿ ಂಚು

## ಬಗರ್‌ಹುಕುಂ
## ಜೀವರಾಜ್ ನುಂಗಿದ್ದೆಷ್ಟು?

## ಪಚುನಾವಣೆ: ಜೆಡಿಎಸ್ ಮಿಂಚು

ದಗಿರಿ: ಡಿನ ಜಕಾರಣಕ್ಕೆ ತ್ತೊಂದು ಬಲಿ

ಮಂಡ್ಯ: ಸಾರಾಯಿ ಕಿಂಗ್ ರಂಗಸ್ವಾಮಿ ಜೈಲಿಗೆ

ಹುಬ್ಬಳ್ಳಿ: ಮೂವರಿಗೆ ಗುಂಡಿಟ್ಟ ಸೈನಿಕ

ಬಿಜೆಪಿ ವಿರುದ್ಧ ಮಲ್ಲೇಶ್ವರ ಬ್ರಾಹ್ಮಣರು

## ಲೆಮಹದೇಶ್ವರದಲ್ಲಿ ಬ್ರಾಹ್ಮಣೀಕರಣ



## ಲಂಕೇಶ್ ವಿರುದ್ಧ ಕರವೇ ಸಂಚು

# "ಗೋಹತ್ಯೆ, ಸುಪ್ರೀಂ ಕೋರ್ಟು ಮತ್ತು ಸಂವಿಧಾನ"
## ಬಿಜೆಪಿ ಹೇಳುತ್ತಿರುವ ಹಸಿಸುಳ್ಳುಗಳು ಮತ್ತು ಅರ್ಧ ಸತ್ಯಗಳು

ಭಾಗ 2

ಇತ್ತೀಚೆಗೆ ಮುಖ್ಯಮಂತ್ರಿ ಯಡಿಯೂರಪ್ಪನವರು ರೈತರಿಗೆ ಗೋವುಗಳನ್ನು ಸಾಕುವುದು ಕಷ್ಟವಾದರೆ ಅವರಿಗೆ ಶೇ.6ರ ಬಡ್ಡಿಯಲ್ಲಿ 70,000 ರೂ. ಸಾಲವನ್ನು ನೀಡುವುದಾಗಿ ಹೇಳಿದ್ದಾರೆ. ಆದರೆ ಇದು ರೈತರನ್ನು ಇನ್ನಷ್ಟು ಸಾಲಗಾರರನ್ನಾಗಿ ಮಾಡುವ ಹುನ್ನಾರವೇ ಹೊರತು ಬಚಾವು ಮಾಡುವ ಉಪಾಯವಲ್ಲ. ಏಕೆಂದರೆ ಯಾವುದೇ ರೀತಿಯಿಂದಲೂ ರೈತನ ಆದಾಯವನ್ನು ಹೆಚ್ಚಿಸದೆ ಅವರ ವೆಚ್ಚವನ್ನು ಮಾತ್ರ ಹೆಚ್ಚಿಸುವ ಅನುಪಯುಕ್ತ ಹಸು ಅಥವಾ ದನಗಳನ್ನು ಸಾಕಲು ಸಾಲ ಮಾಡುವುದರಿಂದ ರೈತನ ಸಾಲ ಮತ್ತು ಬವಣೆ ಇನ್ನಷ್ಟು ಹೆಚ್ಚಾಗುತ್ತದೆಯೇ ವಿನಃ ಕಡಿಮೆಯಾಗುವುದಿಲ್ಲ.

ಇದೇ ಬಗೆಯ ಕಾಯಿದೆ ಗುಜರಾತ್, ಮಧ್ಯಪ್ರದೇಶ, ಛತ್ತೀಸ್‌ಘಡ್ ಇತ್ಯಾದಿ ಏಳು ರಾಜ್ಯಗಳಲ್ಲಿ ಅಸ್ತಿತ್ವದಲ್ಲಿದೆಯೆಂಬ ಅರ್ಧ ಸತ್ಯ. ಈ ರಾಜ್ಯಗಳಲ್ಲಿ ಇರುವುದು ಸಂಪೂರ್ಣ "ಗೋ ಸಂತತಿ" ಹತ್ಯಾ ನಿಷೇಧದ ಕಾಯಿದೆಯೇ ವಿನಃ ಎಮ್ಮೆ, ಕೋಣಗಳನ್ನೂ ಒಳಗೊಂಡಂತೆ "ಸಕಲ ಜಾನುವಾರು" ಹತ್ಯಾ ನಿಷೇಧ ಕಾಯಿದೆಯಲ್ಲ.

ಹಾಗೆಯೇ ಗುಜರಾತಿನಲ್ಲಿ ಜಾರಿಗೆ ಬಂದಿರುವ ಇದೇ ಬಗೆಯ ಕಾಯಿದೆಯನ್ನು ಸುಪ್ರೀಂಕೋರ್ಟಿನ ಏಳು ಸದಸ್ಯರ ಸಾಂವಿಧಾನಿಕ ಪೀಠ ಎತ್ತಿಹಿಡಿದಿದೆ ಎನ್ನುವ ಅಪಪ್ರಚಾರ. ವಾಸ್ತವ ಇದಕ್ಕೆ ತದ್ವಿರುದ್ಧವಾದದ್ದು. 1994ರಲ್ಲಿ ಆಗಿನ ಗುಜರಾತ್ ಸರ್ಕಾರವೇ ಆವರೆಗೆ ಅಸ್ತಿತ್ವದಲ್ಲಿದ್ದ "Bombay Animal Preservation Act" ಗೆ ತಿದ್ದುಪಡಿ ತರಲು Bombay Animal Preservation (Gujarat Amendment) Act, 1994 ಕಾಯಿದೆಯನ್ನು ಜಾರಿಗೆ ತಂದಿತು. ಅದರಲ್ಲಿನ ಸೆಕ್ಷನ್ 2ರಲ್ಲಿ ಆವರಗೆ ಹಸುವಿನ ಹತ್ಯೆಯ ಸಂಪೂರ್ಣ ನಿಷೇಧ ಎಂಬ ಕಡೆ ದನ, ಗೂಳಿಗಳನ್ನು ಸೇರಿಸಿತ್ತು, ಅಂದರೆ ಸಾರಾಂಶದಲ್ಲಿ ಅದು ಸಂಪೂರ್ಣ "ಗೋ ಸಂತತಿ" ಹತ್ಯಾ ನಿಷೇಧದ ಆಶಯವನ್ನೂ ಹೊಂದಿತ್ತೇ ವಿನಃ ಎಮ್ಮೆ, ಕೋಣಗಳನ್ನೂ ಒಳಗೊಂಡಂತ ಸಕಲ ಜಾನುವಾರುಗಳ ಹತ್ಯಾ ನಿಷೇಧವನ್ನು ಅದು ಆಶಯದಲ್ಲೂ ಹೊಂದಿರಲಿಲ್ಲ.

ಆದರೆ ಈ ಕಾಯಿದೆಯೂ ಹಲವಾರು ಸಂವಿಧಾನ ವಿರೋಧಿ ಅಂಶಗಳನ್ನು ಒಳಗೊಂಡಿತ್ತು. ಆ ಕಾರಣದಿಂದಲೇ ಖುರೇಷಿ ಸಮುದಾಯದವರು ಹೈಕೋರ್ಟಿನಲ್ಲಿ ಇದರ ವಿರುದ್ಧ ಹಾಕಿದ್ದ ಅಪೀಲನ್ನು ಎತ್ತಿಹಿಡಿದ ಗುಜರಾತ್ ಹೈಕೋರ್ಟು ಈ ಮಸೂದೆ ಸಂವಿಧಾನ ವಿರೋಧಿ ಎಂದು ಆ ಕಾಯಿದೆಯನ್ನು ರದ್ದುಗೊಳಿಸಿತ್ತು. ಆನಂತರ ನರೇಂದ್ರ ಮೋದಿ ಆಡಳಿತದಲ್ಲಿ ಕೆಲವು ಚಡ್ಡಿ ಸಂಘಟನೆಗಳು ಈ ಪ್ರಕರಣವನ್ನು 2002ರಲ್ಲಿ ಸುಪ್ರೀಂ ಕೋರ್ಟಿಗೆ ಕೊಂಡೊಯ್ದರು. ಈ ಪ್ರಕರಣದಲ್ಲಿ ಹಲವಾರು ಸಂವಿಧಾನಾತ್ಮಕ ಅಂಶಗಳಿದ್ದರಿಂದ ಇದನ್ನು ಏಳು ನ್ಯಾಯಾಧೀಶರ ಬೆಂಚಿಗೆ ವರ್ಗಾಯಿಸಲಾಯಿತು.

ಅಂತಿಮವಾಗಿ ಸುಪ್ರೀಂಕೋರ್ಟಿನ ಏಳು ಜನರ ಪೀಠದಲ್ಲಿ ಆರು ನ್ಯಾಯಾಧೀಶರು 1994ರ "ಗುಜರಾತ್ ಕಾಯಿದೆ"ಯನ್ನು ಎತ್ತಿ ಹಿಡಿದದ್ದು ನಿಜ. ಆದರೆ ಅದು "ಗೋ ಸಂತತಿ ಹತ್ಯಾ ನಿಷೇಧ"ವನ್ನೇ ವಿನಃ "ಸಂಪೂರ್ಣ ಜಾನುವಾರು ಹತ್ಯೆ ನಿಷೇಧ"ವನ್ನಲ್ಲ. ಏಕೆಂದರೆ ಗುಜರಾತ್ ಕಾಯಿದೆಯಲ್ಲೇ ಸಂಪೂರ್ಣ ಜಾನುವಾರು ಹತ್ಯಾ ನಿಷೇಧದ ಪ್ರಸ್ತಾಪವಿರಲಿಲ್ಲ. ಅಷ್ಟು ಮಾತ್ರವಲ್ಲ, ಈ ಮಸೂದೆಯಲ್ಲಿ ಎಮ್ಮೆ ಮತ್ತು ಕೋಣಗಳನ್ನು ಕಡಿಯುವುದರ ಬಗ್ಗೆ ನಿಷೇಧವಿಲ್ಲದಿದ್ದರಿಂದಲೇ "ಸಂಪೂರ್ಣ ಗೋ ಸಂತತಿ ಹತ್ಯಾ ನಿಷೇಧ"ಕ್ಕೆ ಸುಪ್ರೀಂ ಕೋರ್ಟು ಅನುಮತಿ ನೀಡಿದೆ. ತಾನು ಈ ನಿರ್ಣಯಕ್ಕೆ ಬರಲು ಕಾರಣವೇನೆಂದು ಸ್ಪಷ್ಟಪಡಿಸುತ್ತಾ ಸಾಂವಿಧಾನಿಕ ಪೀಠದ ಮುಖ್ಯಸ್ಥ ಮುಖ್ಯ ನ್ಯಾಯಾಧೀಶರಾದ ನ್ಯಾಯಮೂರ್ತಿ ಲಹೋಟಿಯವರು:

"In the present case, we find the issue relates to a total prohibition imposed on the slaughter of cow and her progeny. The ban is total with regard to the slaughter of one particular class of cattle. The ban is not on the total activity of butchers (kasais); they are left free to slaughter cattle other than those specified in the Act. It is not that the writ petitioner respondents survive only by slaughtering cow progeny. They can slaughter animals other than cow progeny and carry on their business activity." ((2005) 8 SCC 534) ಎಂದು ಸ್ಪಷ್ಟವಾಗಿ ತಮ್ಮ ನಿರ್ಣಯದಲ್ಲಿ ಉಲ್ಲೇಖಿಸಿದ್ದಾರೆ.

ಅಂದರೆ:

"ಗುಜರಾತಿನ ಕಾಯಿದೆಯು ಜಾನುವಾರುಗಳಲ್ಲಿ ಗೋ-ಸಂತತಿಯೆಂಬ ಒಂದು ವಿಭಾಗದ ಹತ್ಯೆಯನ್ನು ಮಾತ್ರ ನಿಷೇಧಿಸುತ್ತದೆಯೇ ಹೊರತು ಸಂಪೂರ್ಣ ಜಾನುವಾರು ಹತ್ಯೆಯನ್ನಲ್ಲ. ಇದು ಕಸಾಯಿಗಳ ವೃತ್ತಿಯ ಮೇಲೆ ಸಂಪೂರ್ಣ ನಿಷೇಧವನ್ನೇನೂ ಹೇರುವುದಿಲ್ಲ. ಅವರು ಈ ಮಸೂದೆಯಲ್ಲಿ ಉಲ್ಲೇಖಿತವಲ್ಲದ ಇತರೆ ಜಾನುವಾರುಗಳ ಹತ್ಯೆಯನ್ನು ಮುಂದುವರೆಸಬಹುದು. ಏಕೆಂದರೆ ಅವರು ಗೋಸಂತತಿಯ ಹತ್ಯೆಯನ್ನು ಮಾಡುವುದರಿಂದ ಮಾತ್ರ ತಮ್ಮ ವ್ಯಾಪಾರ-ವಹಿವಾಟನ್ನು ಮಾಡಬೇಕೆಂದಿಲ್ಲ. ಗೋ-ಸಂತತಿಯಲ್ಲದ ಇತರ ಜಾನುವಾರುಗಳನ್ನು ಹತ್ಯೆ ಮಾಡುವ ಮೂಲಕ ಅವರು ತಮ್ಮ ವ್ಯಾಪಾರವನ್ನು ಮುಂದುವರೆಸಬಹುದು."

ಅಲ್ಲದೆ ಈ ಬಹುಸಂಖ್ಯಾತ ನಿರ್ಣಯಕ್ಕೆ ವಿರೋಧ ವ್ಯಕ್ತಪಡಿಸಿದ ಏಳನೇ ನ್ಯಾಯಾಧೀಶರಾದ ಜಸ್ಟೀಸ್ ಮಾಥುರ್‌ರವರು ಗೋ ಹತ್ಯೆ ನಿಷೇಧದ ಮಸೂದೆಯಲ್ಲಿ ದನ ಮತ್ತು ಗೂಳಿಗಳ ಹತ್ಯೆಯ ನಿಷೇಧವನ್ನೂ ಸೇರಿಸಿದ್ದಕ್ಕೆ ತೀವ್ರ ವಿರೋಧವನ್ನು ವ್ಯಕ್ತಪಡಿಸಿ ತಮ್ಮ ಪ್ರತ್ಯೇಕ ನಿರ್ಣಯ ನೀಡಿದ್ದರು. ಹೀಗಾಗಿ ಸುಪ್ರೀಂ ಕೋರ್ಟಿನ ಸಾಂವಿಧಾನಿಕ ಪೀಠದ ನಿರ್ಣಯ "ಸಂಪೂರ್ಣ ಗೋ ಸಂತತಿ ಹತ್ಯಾ ನಿಷೇಧ"ವನ್ನು ಎತ್ತಿ ಹಿಡಿದಿದೆಯೇ ವಿನಃ "ಸಂಪೂರ್ಣ ಜಾನುವಾರು ಹತ್ಯಾ ನಿಷೇಧ"ವನ್ನಲ್ಲ. ಸುಪ್ರೀಂಕೋರ್ಟಿನ ಸಾಂವಿಧಾನಿಕ ಪೀಠ ತಾವು ತಂದಿರುವ ಮಸೂದೆಯ ಪರವಾದ ತೀರ್ಮಾನವನ್ನು ನೀಡಿದೆ ಎಂಬುದು ಶುದ್ಧಸುಳ್ಳು.

ಅದೇ ತೀರ್ಮಾನದಲ್ಲಿ ಸಾಂವಿಧಾನಿಕ ಪೀಠ ಸತ್ತ ದನಗಳ ಚರ್ಮ ಮತ್ತಿತ್ಯಾದಿಗಳನ್ನು ಬಳಸಿಕೊಳ್ಳಲು ಸಂಪೂರ್ಣ ಪರವಾನಗಿ ನೀಡಿದೆ:

"In so far as trade in hides, skins and other allied things (which are derived from the body of dead animal) are concerned, it is not necessary that the animal must be slaughtered to avail these things. The animal, whose slaughter has been prohibited, would die a natural death even otherwise and in that case their hides, skins and other parts of body would be available for trade and industrial activity based thereon."

ಅಂದರೆ: "ದನದ ಚರ್ಮ ಹಾಗು ದೇಹದ ಇತರ ಭಾಗಗಳ ವ್ಯಾಪಾರವನ್ನು ಕುರಿತಂತೆ ಹೇಳುವುದಾದರೆ ಇವುಗಳ ವ್ಯಾಪಾರ ನಡೆಸಬೇಕೆಂದರೆ ಅವುಗಳನ್ನು ಹತ್ಯೆ ಮಾಡಲೇ ಬೇಕೆಂದೇನೂ ಇಲ್ಲ. ಹೇಗಿದ್ದರೂ ಅವು ಸಹಜ ಸಾವನ್ನಪ್ಪುವುದರಿಂದ ಅವುಗಳ ಚರ್ಮ ಮತ್ತು ದೇಹದ ಇತರ ಭಾಗಗಳ ವ್ಯಾಪಾರ ಹಾಗೂ ಕೈಗಾರಿಕಾ ಚಟುವಟಿಕೆಗಳಿಗೆ ಏನೂ ಬಾಧಕವಾಗುವುದಿಲ್ಲ."


ಆದರೆ ಕರ್ನಾಟಕದ ಬಿಜೆಪಿ ಸರ್ಕಾರದ ಮಸೂದೆಯ ಸೆಕ್ಷನ್ 5 ದನದ ಮಾಂಸವನ್ನು ವ್ಯಾಪಾರ ಮಾಡುವುದಿರಲಿ ಅದನ್ನು ಇಟ್ಟುಕೊಳ್ಳುವುದನ್ನೇ ಶಿಕ್ಷಾರ್ಹ ಅಪರಾಧವನ್ನಾಗಿ ಮಾಡುತ್ತದೆ. ಹೀಗಾಗಿ ಈ ಕಾರಣಕ್ಕೂ ಬಿಜೆಪಿ ಮಸೂದೆಗೆ ಸುಪ್ರೀಂಕೋರ್ಟಿನ ಬೆಂಬಲವಿಲ್ಲ.




ಅಂಬೇಡ್ಕರ್ ಮತ್ತು ಅವರ ಅಧ್ಯಕ್ಷತೆಯಲ್ಲಿ ರಚಿಸಿದ ಸಂವಿಧಾನವೂ ಸಹ ಸಂಪೂರ್ಣ ಗೋಹತ್ಯಾ ನಿಷೇಧದ ಪರವಾಗಿದೆ ಎಂಬ ಬಿಜೆಪಿ ಹೇಳುತ್ತಿರುವುದೂ ಮತ್ತೊಂದು ಸುಳ್ಳು.

ಸಂವಿಧಾನದ ರಚನಾ ಸಭೆಯಲ್ಲಿ ಸಂಪೂರ್ಣ ಗೋಹತ್ಯಾ ನಿಷೇಧವನ್ನು ಮೂಲಭೂತ ಹಕ್ಕನ್ನಾಗಿಯೇ ಮಾಡಬೇಕೆಂಬ ಒತ್ತಾಯವನ್ನು ಕೆಲವು ಹಿಂದೂ ಮಹಾಸಭ ಮತ್ತು ಕಾಂಗ್ರೆಸ್ ಸದಸ್ಯರು ಮಾಡಿದ್ದು ನಿಜ. ಆದರೆ ಅಂಬೇಡ್ಕರ್‌ರವರ ಸತತ ವಾದ ಮತ್ತು ಪರಿಶ್ರಮದಿಂದಾಗಿ ಈ ಉಗ್ರವಾದಿಗಳು ತಮ್ಮ ನಿಲುವಿನಿಂದ






ಕೊನೆಗೂ ಹಿಂದೆ ಸರಿದದ್ದು ಈಗ ಇತಿಹಾಸ. ಇದಲ್ಲದೆ ಅಂಬೇಡ್ಕರ್‌ರವರು ತಮ್ಮ ಬರಹದ ಉದ್ದಕ್ಕೂ ದನದ ಮಾಂಸ ಭಕ್ಷಣೆಯನ್ನು ಕೀಳಾಗಿ ಚಿತ್ರಿಸಿದ ಬ್ರಾಹ್ಮಣ್ಯದ ಕುತಂತ್ರವನ್ನು ಬಯಲುಗೊಳಿಸುತ್ತಲೇ ಇದ್ದರು. ಇಂಥಾ ಜನನಾಯಕ, ಮಹಾನ್ ದಾರ್ಶನಿಕ ಬುದ್ಧವಾದಿ ಅಂಬೇಡ್ಕರ್‌ರನ್ನು ಈ ಹಿಂದೂತ್ವವಾದಿಗಳು ತಮ್ಮ ಗೋವು ಪವಿತ್ರ ಎಂಬ ಪ್ರಚಾರಕ್ಕೆ ಬಳಸಿಕೊಳ್ಳುತ್ತಿರುವುದೇ ಅವರ ಕೀಳು ಮನಸ್ಸಿಗೆ ಒಂದು ನಿದರ್ಶನ.

ಈ ಎಲ್ಲಾ ಚರ್ಚೆಗಳ ಹಿನ್ನೆಲೆಯಲ್ಲಿ ಗೋ ಸಂರಕ್ಷಣೆ ಮತ್ತು ಹತ್ಯಾ ನಿಷೇಧದ ಬಗ್ಗೆ ಸಂವಿಧಾನದಲ್ಲಿ 48ನೇ ಕಲಮನ್ನು ಸೇರಿಸಲಾಯಿತು. ಅದು ಹೇಳುವುದಿಷ್ಟು:

"The State shall endeavour to organise agriculture and animal husbandry on modern and scientific lines and shall, in particular, take steps for preserving and improving the breeds, and prohibiting the slaughter, of cows and calves and other milch and draught cattle."

ಅಂದರೆ: "ದೇಶದ ಕೃಷಿಕ್ಷೇತ್ರ ಮತ್ತು ಪಶುಸಂಗೋಪನೆಯನ್ನು ಆಧುನಿಕ ಮತ್ತು ವೈಜ್ಞಾನಿಕ ನೆಲೆಯಲ್ಲಿ ಪುನರ್‌ಸಂಘಟಿಸಬೇಕು ಹಾಗೂ ಪ್ರಭುತ್ವವು ಗೋವು ಮತ್ತು ಇತರ ಹಾಲು ಕರೆಯುವ ಮತ್ತು ಕೃಷಿ ಉಪಯೋಗಿ ಜಾನುವಾರುಗಳ ಹತ್ಯೆಯನ್ನು ತಡೆಗಟ್ಟಲು ಕಾನೂನನ್ನು ರಚಿಸಬೇಕು." ಇಲ್ಲಿ ಸ್ಪಷ್ಟವಾಗಿ ಕಾಣುವಂತೆ ಈ ಕಲಮಿನಲ್ಲಿ ಹಾಲು ಕರೆಯುವ ಹ... ಮತ್ತು ಕೃಷಿಗೆ ಉಪಯೋಗಕಾರಿ ಜಾನುವಾರುಗಳನ್ನು ರಕ್ಷಿಸಬೆ... ಆಶಯವಿದೆಯೇ ವಿನಃ ರೈತರಿಗೆ ಉಪಯೋಗಕ್ಕೆ ಬರದ ಗೋವನ... ಇತರ ಜಾನುವಾರುಗಳನ್ನಾಗಲೀ ಪವಿತ್ರವೆಂಬ ಅಥವಾ ಅನು... ದೃಷ್ಟಿಯಿಂದ ಸಾಕಲೇಬೇಕೆಂಬ ಆದೇಶವಿಲ್ಲ.

ಇದರ ಬಗ್ಗೆಯೂ ಸುಪ್ರೀಂಕೋರ್ಟು ಸ್ಪಷ್ಟವಾದ ವ್ಯಾಖ್ಯಾನ ... 1959ರ ಮೊಹಮ್ಮದ್ ಹನೀಫ್ ಖುರೇಷಿ ಮತ್ತು ಬಿಹಾರ್ ... (ಎಐಆರ್ 1959 ಎಸ್‌ಸಿ 629) ಪ್ರಕರಣದಲ್ಲಿ ನಿರ್ಣಯವನ್ನು ನೀಡ... ವರಿಷ್ಠ ನ್ಯಾಯಾಲಯವು ಈ ಬಗ್ಗೆ ಹೀಗೆ ಹೇಳಿದೆ:

"(i) that a total ban on the slaughter of cows of al... and calves of cows and calves of she-buffaloes, male or fe... was quite reasonable and valid and is in consonance wi... Directive Principles laid down in Article 48; (ii) that a... ban on the slaughter of she-buffaloes or breeding bu... working bullocks (cattle as well as buffaloes) as long as... are capable of being used as milch or draught cattle wa... reasonable and valid; and (iii) that a total ban on slaugh... she-buffaloes, bulls and bullocks (cattle or buffalo) after... ceased to be capable of yielding milk or of breeding or wo... as draught animals could not be supported as reasona... the interests of the general public and was invalid."

ಪ್ರಸ್ತುತ ಆರ್ಥಿಕ ಸಂದರ್ಭದಲ್ಲಿ ಉಪಯೋಗಕ್ಕೆ ಬಾರದ ಜಾನುವಾ... ಸಮಾಜಕ್ಕೆ ಒಂದು ಹೊರೆಯಾಗುವುದರಿಂದ ಅದು ಸಾರ್ವಜನಿಕ ಹಿ... ವಿರುದ್ಧವಾಗಿದೆ. ಹೀಗಾಗಿ ಸಂಪೂರ್ಣ ಜಾನುವಾರು ಹತ್ಯಾ ನಿಷೇಧ ಸಾ... ಎಂಬ ತಮ್ಮ ನಿಲುವನ್ನು ಸ್ಪಷ್ಟಪಡಿಸುತ್ತಾ ಮುಖ್ಯ ನ್ಯಾಯಮೂರ್ತಿ ... ದಾಸ್‌ರವರು ಮೂರು ಮುಖ್ಯಾಂಶಗಳನ್ನು ಪ್ರಸ್ತಾಪಿಸಿದ್ದರು.

"1. ಎಲ್ಲಾ ವಯಸ್ಸಿನ ಹಸುಗಳ ಮತ್ತು... ಕರುಗಳ ಹತ್ಯೆಯ ಮೇಲಿನ ನಿಷೇಧ ಸಿಂಧುವಾ... 2. ಹಾಲು ನೀಡುವ ಎಮ್ಮೆಗಳ ಮತ್ತು ... ಯೋಗ್ಯ ಎತ್ತುಗಳ ಹತ್ಯೆಯ ಮೇಲಿನ ನಿಷೇ... ಸರಿಯಾದದ್ದೇ. 3. ಆದರೆ ಹಾಲು ನೀಡದ ಎ... ಮತ್ತು ಉಳುಮೆಗೆ ಸಹಕಾರಿಯಾಗದ ಎತ್ತು... ದನಗಳ ಹತ್ಯೆಯ ಮೇಲಿನ ನಿಷೇಧವೂ ಸಾವ... ಹಿತಾಸಕ್ತಿಯ ದೃಷ್ಟಿಯಿಂದ ಸರಿಯಾದದ್ದಲ್ಲ."

ಇದರ ಬಗ್ಗೆ 2005ರಲ್ಲಿ ಏಳು ಸ... ಸಾಂವಿಧಾನಿಕ ಪೀಠ ತನ್ನ ಅಭಿಪ್ರಾಯವನ್ನು... ಲಾಯಿಸಿದ್ದು ನಿಜ. ಆದರೆ ಅದಕ್ಕೆ ಕಾರಣ ಗುಜ... ಸರ್ಕಾರ ಒದಗಿಸಿದ ಸುಳ್ಳುಪೊಳ್ಳು ಅಂಕಿಅಂ... ಗುಜರಾತ್ ಸರ್ಕಾರ ತನ್ನ ವಾದದಲ್ಲಿ "ದನ ಮತ್ತು ಹಸುಗಳು ಸಾ... ತನಕ ಗಂಜಲ ಮತ್ತು ಸಗಣಿ ಹಾಕುತ್ತವೆ. ಪ್ರತಿ ಹಸು ಮತ್ತು ದನ... ಸಾಕಲು ದಿನಕ್ಕೆ 25 ರೂ. ಖರ್ಚಾದರೆ ಈ ಸಗಣಿ ಮತ್ತು ಗ... ಮಾರಿದರೆ 35 ರೂ. ದುಡ್ಡು ಸಿಗುತ್ತದೆ. ಆದ್ದರಿಂದ ಹಸು ಮತ್ತು ದನ... ಉಪಯುಕ್ತ ಮತ್ತು ಅನುಪಯುಕ್ತ ಎಂದು ವಿಭಾಗೀಕರಿಸುವುದೇ ... ಎಂದು ಹೇಳಿತ್ತು. ಅಲ್ಲದೇ ಪ್ರತಿ ದನವು 16 ವರ್ಷಕ್ಕೆ ಮುಂಚೆ... ಅಶ್ವಶಕ್ತಿಯಷ್ಟು ಶಕ್ತಿ ಹೊಂದಿದ್ದರೆ 16 ವರ್ಷದ ನಂತರವು ಸಾಯುವ... 0.6 ಅಶ್ವಶಕ್ತಿಯನ್ನು ಹೊಂದಿರುತ್ತಾದ್ದರಿಂದ ಅವು ಸಾಯುವ ತನಕ ಉಪಯು... ಎಂದೆಲ್ಲ ಮೋದಿ ರಾಜ್ಯದ ಪಶುಸಂಗೋಪನಾ ಇಲಾಖೆ ಕಾಗಕ್ಕ ಗು... ಕಥೆ ಕಟ್ಟಿತ್ತು.

ಸುಪ್ರೀಂಕೋರ್ಟಿನ ಎದುರು ಇದನ್ನು ವಿರೋಧಿಸಲು ರೈತ ಸಂ... ಯಾಗಲೀ, ಮಾನವ ಹಕ್ಕು ಸಂಘಟನೆಯಾಗಲೀ ಪ್ರತಿವಾದಿಗಳಾಗಿ... ಹೀಗಾಗಿ ಸುಪ್ರೀಂಕೋರ್ಟು ಸಾಯುವ ತನಕವೂ ಎಲ್ಲಾ ಹಸು... ಹಾಗೂ ಗೂಳಿಗಳು ರೈತನಿಗೆ ಉಪಕಾರಿಯೇ ಆಗಿರುತ್ತವಾದ್ದರಿಂದ... ಮತ್ತು ಗೂಳಿಗಳನ್ನು 16 ವರ್ಷದ ನಂತರ ಹತ್ಯೆ ಮಾಡುವುದಕ್ಕೆ ... ಹೇರಿರುವುದು ಸೂಕ್ತವೆಂದು ಅಭಿಪ್ರಾಯ ಪಟ್ಟಿತು. ಆದರೆ ಒಂದು ದ... ಸಾಕಲು ತಗಲುವ ವೆಚ್ಚ 100 ರೂ. ಅನ್ನು ಮೀರುತ್ತಿರುವ ಈ ಹೊ... ಹಾಲು ಕರೆಯದ ಮತ್ತು ಉಳುಮೆಗೆ ಬಾರದ ಜಾನುವಾರು... ಸಾಕುವುದರಿಂದ ರೈತನಿಗೆ ಎಷ್ಟು ನಷ್ಟವಾಗುತ್ತದೆ ಎಂಬುದು ಎಲ್ಲ... ಗೊತ್ತಿರುವ ವಿಷಯ. ಹೀಗಾಗಿ ಸುಪ್ರೀಂಕೋರ್ಟಿನ ಈ ನಿರ್ಧಾರದ ಬ... ಬಿಜೆಪಿಯ ವಾದಕ್ಕೆ ವ್ಯತಿರಿಕ್ತವಾಗಿಯೇ ಇದೆ ಎನ್ನುವುದು ವಾಸ್ತವ. ಏ... ಇಲ್ಲಿ ಕೋರ್ಟು ಸಂಪೂರ್ಣ ಗೋ ಸಂತತಿ ನಿಷೇಧ ಸರಿಯಾದದ್ದು ... ಅಭಿಪ್ರಾಯಕ್ಕೆ ಬರಲು ಕಾರಣ ಅದು ಸಾಯುವ ತನಕ ರೈತನಿಗೆ ಸ... ಎಂಬ ಕಾರಣಕ್ಕೆ ಹೊರತು ಗೋವು ಪವಿತ್ರ ಅಥವಾ ಗೋವು ಮಾತ್ರ ... ಎಂಬ ಕಾರಣಕ್ಕಾಗಿಯಲ್ಲ. ಒಂದು ವೇಳೆ ಮುದಿ ದನ ಮತ್ತು ಹಸ... ರೈತನಿಗೆ ಸಹಕಾರಿಯಲ್ಲ ಎಂದು ಕೋರ್ಟಿಗೆ ಸಾಬೀತಾದರೆ ಮುದಿ ... ಕೋಣಗಳ ಹತ್ಯೆಯ ಜೊತೆಗೆ ಮುದಿ ಹಸು ಮತ್ತು ಎತ್ತುಗಳ ಹ... ಸಮ್ಮತಿ ನೀಡುವುದು ಖಚಿತ.

ಹೀಗೆ ಬಿಜೆಪಿ ಸರ್ಕಾರದ ಮಸೂದೆಗೆ ಸಂವಿಧಾನದ, ನ್ಯಾಯಾಲ... ಮತ್ತು ಕಾನೂನಿನ ಸಮರ್ಥನೆಯಿಲ್ಲ. ಬಿಜೆಪಿ ಸರ್ಕಾರ ಹಸಿಸುಳ್ಳು... ಹೇಳುವ ಮೂಲಕ ಜನರನ್ನು ದಾರಿತಪ್ಪಿಸುತ್ತಿದೆ.

ರೈತರ ಹಿತದೃಷ್ಟಿಯಿಂದಲೂ, ಸಂವಿಧಾನದ ಆಶಯದ ದೃಷ್ಟಿಯಿಂ... ಸುಪ್ರೀಂ ಕೋರ್ಟಿನ ಸಾಂವಿಧಾನಿಕ ಪೀಠದ ನಿರ್ದೇಶನದ ದೃಷ್ಟಿಯಿಂ... ಬಿಜೆಪಿ ಸರ್ಕಾರದ ಈ ಮಸೂದೆ ತಿರಸ್ಕಾರಕ್ಕೆ ಯೋಗ್ಯವಾಗಿದೆ.

# ಗೂಂಡಾಗಳ ಬೆದರಿಕೆ ಮತ್ತು 'ಲಂಕೇಶ್' ನಿಲುವು



## ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ನಾವು ಯಾವುದಕ್ಕೂ ಹೆದರುವುದಿಲ್ಲ ಎಂದು ರಿಸಿ ಘೋಷಿಸಿಕೊಳ್ಳುವುದು ಸರಿಯೂ ಅಲ್ಲ, ಗದು ಇಷ್ಟವೂ ಆಗುವುದಿಲ್ಲ. ಕೋದ್ಯಮದಲ್ಲಿರುವವರಿಗೆ ಹೊಗಳಿಕೆ, ನೆಗಳು ಬರುವಂತೆಯೇ ಆಕ್ಷೇಪಣೆ, ಬೆದರಿಕೆ, ಳಗಳೂ ಇದ್ದೇ ಇರುತ್ತವೆ.

ಳೆದ ಒಂದು ವಾರದಿಂದ 'ಲಂಕೇಶ್' ಪತ್ರಿಕೆಯನ್ನು ಹಾಗೂ ನಮ್ಮ ತಂಡದವರನ್ನು ಮಾಡಿಕೊಂಡು ಬೆದರಿಸುವ ಒಂದು ಹೀನ ತ್ನ ನಡೆದಿದೆ.

ಇದನ್ನು ನಡೆಸುತ್ತಿರುವುದು ನಾರಾಯಣ ಗೌಡ! ಈತ ಕರ್ನಾಟಕ ರಕ್ಷಣಾ ವೇದಿಕೆಯ ಒಂದು ಣದ ಮುಖಂಡ.


ಲಂಕೇಶ್ ಬಳಗದ ಹಿರಿಯ ವರದಿಗಾರ ತೀಶರ ವಿರುದ್ಧ ಬೆಂಗಳೂರಿನ ಹೈಗ್ರೌಂಡ್ಸ್ ಲೀಸ್ ಠಾಣೆಯಲ್ಲಿ ತಮ್ಮ ಚೇಲಾ ಒಬ್ಬನ ಲಕ ನಾರಾಯಣ ಗೌಡ ಒಂದು ದೂರು ಸಿದ್ದಾರೆ. ಆ ದೂರಿನ ಸಾರಾಂಶ ಏನೆಂದರೆ: ಪಾರ್ವತೀಶ ಕರವೇ ಪತ್ರಿಕೆಯ ಒಬ್ಬಾತನಿಗೆ ನ್ ಮಾಡಿ 50 ಲಕ್ಷ ರೂ.ಕೊಡಬೇಕೆಂತಲೂ ದ್ದರೆ ನಾರಾಯಣ ಗೌಡ ಹಾಗೂ ಕರವೇ ದ್ಧ ಮಾನಹಾನಿಯಾಗುವಂತಹ ಪ್ರಕಟಿಸುವುದಾಗಿಯೂ ರಿಸಿದ್ದಾರೆ' ಎಂದು.

ಳೆದ ಐದು ವರ್ಷಗಳಿಂದ ೇಶ್'ನ ನಿಲುವು ಹಾಗೂ ರ ಕಾಳಜಿಗಳನ್ನು ತಿಳಿದವರಿಗೆ ಪಾರ್ವತೀಶರ ವ್ಯಕ್ತಿತ್ವ ವರಿಗೆ ಈ ದೂರು ಒಂದು ರಿ ಎಂಬ ಬಗ್ಗೆ ವಿಶೇಷವಾಗಿ ಬೇಕಿಲ್ಲ. ಆದರೆ ಹಾಲಿ ಬಿಜೆಪಿ ರ ಹಾಗೂ ಪೊಲೀಸರು ಈ ನ್ನೇ ಒಂದು ನೆಪವಾಗಿ ಕೊಂಡು ನಮ್ಮನ್ನು ಬೆದರಿಸಲು ಪ್ರಯತ್ನಿಸುತ್ತಿದ್ದಾರೆಂಬುದನ್ನು ದಾಖಲಿಸಬೇಕಿದೆ.

ೀವೆಲ್ಲಾ ಗಮನಿಸಿರುವಂತೆ ಕಳೆದ ವಾರದ ೇಶ್'ನಲ್ಲಿ ರಕ್ಷಣಾ ವೇದಿಕೆಯ ನಾಯಕನ ಹಾರಗಳ ಕುರಿತ ಒಂದು ತನಿಖಾ ವರದಿ ಾಯಿತು. ಪತ್ರಿಕೆ ಮಾರುಕಟ್ಟೆಗೆ ಬಂದ ಗಂಟೆಗಳಲ್ಲಿ ನಮ್ಮ ಏಜೆಂಟರು ಇನ್ನೂ ಪ್ರತಿಗಳು ಬೇಕೆಂದು ಡಿಮ್ಯಾಂಡ್ ಮಾಡತೊಡಗಿದರು. ರಾಜ್ಯದ ನಾನಾ ಭಾಗಗಳಿಂದ 'ಲಂಕೇಶ್' ಕೇಳುತ್ತಿದ್ದ ಏಜೆಂಟರಿಗೆ ಪ್ರತಿಗಳನ್ನು ಪೂರೈಸುವಷ್ಟರಲ್ಲಿ ನಮ್ಮ ಮ್ಯಾನೇಜರ್ ರಾಜು ಸುಸ್ತಾಗಿ ಹೋಗಿದ್ದರು. ಕುತೂಹಲಗೊಂಡ ನಾವುಗಳು ಏನು ನಡೆಯುತ್ತಿದೆ ಎಂದು ವಿಚಾರಿಸಿದಾಗ ಗೊತ್ತಾಗಿದ್ದೇನೆಂದರೆ ಬೆಂಗಳೂರು, ಮಂಡ್ಯ, ಮೈಸೂರು, ತುಮಕೂರು, ಚಿತ್ರದುರ್ಗ, ಬಳ್ಳಾರಿ, ರಾಯಚೂರು, ಗುಲ್ಬರ್ಗಾ, ಧಾರವಾಡ ಹೀಗೆ ಅನೇಕ ಕಡೆ ಕರವೇ ಸಂಘಟನೆಯ ಹಲವು ಗೂಂಡಾಗಳು ಅಂಗಡಿಗಳಿಗೆ ಹೋಗಿ ಇದ್ದಬದ್ದ ಲಂಕೇಶ್ ಪ್ರತಿಗಳನ್ನೆಲ್ಲಾ ತಾವೇ ಕೊಂಡು ಹೊತ್ತುಕೊಂಡು ಹೋಗಿದ್ದರು. ಶಿವಮೊಗ್ಗದಲ್ಲಂತೂ ಗೂಂಡಾಗಳಂತೆ ಕಾಣುತ್ತಿದ್ದ ಕೆಲವರು 'ಲಂಕೇಶ್' ಮಾರದಂತೆ ಅಂಗಡಿಗಳವರಿಗೆ ಬೆದರಿಸಿದ ಘಟನೆಗಳೂ ಆಗಿಹೋದವು. ಇವರ ಉದ್ದೇಶವಿಷ್ಟೆ:



ನಾರಾಯಣ ಗೌಡ



ಪಾರ್ವತೀಶ

'ಲಂಕೇಶ್'ನಲ್ಲಿ ಪ್ರಕಟವಾಗಿದ್ದ 'ಕಪ್ಪ ಪಡೆದು ತೆಪ್ಪಗಾದವನ ಓರಾಟ ಗಾಥೆ' ಎಂಬ ವರದಿಯಲ್ಲಿದ್ದ ನಿಜಾಂಶಗಳು ಜನಸಾಮಾನ್ಯರಿಗೆ ಗೊತ್ತಾಗಬಾರದೆಂಬುದು. ಆದರೆ ನಮ್ಮ ಹತ್ತಿಪ್ಪತ್ತು ವರ್ಷಗಳ ಪತ್ರಿಕೋದ್ಯಮದಲ್ಲಿ ಇಂಥ ಘಟಿಂಗರ ಅನೇಕ ತರದ ತರಲೆ ಕಳ್ಳಾಟಗಳನ್ನು ನೋಡಿದ್ದೇವೆ. ನಮಗಿಂತಹವನ್ನು ಹೇಗೆ ನಿಭಾಯಿಸಬೇಕೆಂಬುದು ಗೊತ್ತಿದೆ.

ಇದು ಪತ್ರಿಕೆಗೆ ಮಾರುಕಟ್ಟೆಯಲ್ಲಿ ಉಂಟಾದ ಕಿರುಕುಳ. ಆದರೂ ನಾವದನ್ನು ನಿಭಾಯಿಸಿ ಸಂಚಿಕೆಯನ್ನು ಓದುಗರಿಗೆ ತಲುಪಿಸುವಲ್ಲಿ ಯಶಸ್ವಿಯಾದೆವು.

ಅಷ್ಟರಲ್ಲಿ ಪೊಲೀಸರನ್ನು ಛೂಬಿಟ್ಟು ನಮ್ಮನ್ನು ಬೆದರಿಸುವ ಕೆಲಸವೂ ಚಾಲೂ ಆಗಿತ್ತು. ನಾರಾಯಣ ಗೌಡರ ಹಿಂಬಾಲಕನೊಬ್ಬ ಯಾವುದೋ ಲ್ಯಾಂಡ್ ಲೈನ್ ನಂಬರಿನಿಂದ ತನ್ನ ಮೊಬೈಲಿಗೆ ಬೆದರಿಕೆ ಹಾಗೂ ಹಣ ವಸೂಲಿಯ ಕರೆ ಬಂತೆಂದು ಪಾರ್ವತೀಶ್ ವಿರುದ್ಧ ಸಂಜೆ 5 ಗಂಟೆಗೆ ದೂರು ನೀಡಿದರೆ ಪೊಲೀಸರು ಒಂದು ಪ್ರಶ್ನೆಯನ್ನೂ ಕೇಳದೆ, ವಿಚಾರಣೆಯನ್ನೂ ನಡೆಸದೆ ಅದಾದ ಅರ್ಧಗಂಟೆಯಲ್ಲೇ ಎಫ್‌ಐಆರ್ ಅನ್ನು ದಾಖಲಿಸಿಬಿಟ್ಟರು. ಹೈಗ್ರೌಂಡ್ಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಹರಿಯಪ್ಪ ಪ್ರದರ್ಶಿಸಿರುವ 'ದಕ್ಷತೆ' ಇದು! ಹರಿಯಪ್ಪನವರು ಎಫ್‌ಐಆರ್‌ನಲ್ಲಿ ದಾಖಲಿಸಿರುವ ಸೆಕ್ಷನ್‌ಗಳು ಐಪಿಸಿ 384 ಹಾಗು 511.

**Extortion** ಕೇಸ್ ಇದು!

ಅಂದರೆ ದಾವೂದ್ ಇಬ್ರಾಹಿಂ, ಚೋಟಾ ರಾಜನ್ ತರದ ಭೂಗತ ಮಾಫಿಯಾಗಳ ಮೇಲೆ ಹಾಕುವಂತಹ ಸೆಕ್ಷನ್‌ಗಳನ್ನು ಪಾರ್ವತೀಶರ ವಿರುದ್ಧ ದಾಖಲಿಸಿ ಅವರನ್ನು ಅರೆಸ್ಟ್ ಮಾಡಿಸುವ ಪಿತೂರಿ ನಡೆದಿದೆ.

ನಾವಿದನ್ನು ಎದುರಿಸಲು ಸಿದ್ಧರಿದ್ದೇವೆ. ನಾವು ಗಳಿಸುವ ಪ್ರತಿ ರೂಪಾಯಿಯೂ ಕಷ್ಟಪಟ್ಟು ದುಡಿದದ್ದು. ನಮ್ಮ ಇಡೀ ತಂಡ ಈಗಲೂ **hand to mouth** ರೀತಿಯೇ ಬದುಕುತ್ತಿದೆ. ಅದರ ಬಗ್ಗೆ ನಮಗೆ ಹೆಮ್ಮೆಯೇ ಹೊರತು ಕಿಂಚಿತ್ತೂ ಪಶ್ಚಾತ್ತಾಪವಿಲ್ಲ.

ಅಂದಹಾಗೆ ನಮ್ಮ ವಿರುದ್ಧ ಬೆದರಿಕೆಯ ಹಣ ವಸೂಲಿ ಎಂಬ ಸುಳ್ಳು ದೂರನ್ನು ಕೊಡಿಸಿರುವ ಕರವೇಯ ಒಂದು ತುಂಡಿನ ನಾಯಕ ನಾರಾಯಣ ಗೌಡರಿಗೆ ನಮ್ಮ ಕಳೆದ ಸಂಚಿಕೆಯಲ್ಲಿ ನಾವು ಕೇಳಿದ್ದು ಒಂದು ಪ್ರಶ್ನೆಯನ್ನು.

ಅದೇನೆಂದರೆ: ಬೆಳಗಾವಿ ಗಡಿ ಹೋರಾಟ, ಹೊಗೇನಕಲ್ ಗಡಿ ವಿವಾದದ ಬಗ್ಗೆ ಅಷ್ಟೆಲ್ಲಾ ಮಾತನಾಡುವ ನೀವು ಕರ್ನಾಟಕ-ಆಂಧ್ರ ಗಡಿ ಕಲ್ಲು ಕಿತ್ತು, ಒತ್ತುವರಿ ಮಾಡಿ ಅಕ್ರಮ ಗಣಿಗಾರಿಕೆ ನಡೆಸುತ್ತಾ ಸಾವಿರಾರು ಕೋಟಿ ರೂಪಾಯಿಗಳ ಕರ್ನಾಟಕ ರಾಜ್ಯದ ಸಂಪತ್ತನ್ನು ಲೂಟಿ ಮಾಡಿರುವ ಬಳ್ಳಾರಿಯ ರೆಡ್ಡಿಗಳ ವಿರುದ್ಧ ಯಾಕೆ ನೀವು ಒಂದೇ ಒಂದು ಪ್ರತಿಭಟನೆ ನಡೆಸಲಿಲ್ಲ?

ಕನಿಷ್ಠ ಪಕ್ಷ ಪತ್ರಿಕಾ ಹೇಳಿಕೆಯನ್ನೂ ಕೊಡಲಿಲ್ಲ ಯಾಕೆ?

ಹೀಗೆ ಮಾಡುವ ಬದಲಾಗಿ ನಾರಾಯಣ ಗೌಡ ರೆಡ್ಡಿಗಳನ್ನೇ ಪಕ್ಕ ಕೂರಿಸಿಕೊಂಡು ಬಳ್ಳಾರಿಯಲ್ಲೇ ಕರವೇ ಸಮಾವೇಶ ಮಾಡಿದ್ದು ಏಕೆ?

ಏನಿದರ ಅರ್ಥ?

ಈ ಪ್ರಶ್ನೆಗಳನ್ನು ಕೇವಲ 'ಲಂಕೇಶ್' ಮಾತ್ರವಲ್ಲ, ಕರ್ನಾಟಕ ರಕ್ಷಣಾ ವೇದಿಕೆಯ ನೂರಾರು ನಿಷ್ಠಾವಂತ ಕಾರ್ಯಕರ್ತರೂ ಕೇಳುತ್ತಿದ್ದಾರೆ.

'ಲಂಕೇಶ್' ಬರೆದದ್ದು ಇದೇ ವಿಷಯ. ಆದರೆ ನಾರಾಯಣ ಗೌಡ ಜನರ ಈ ನೇರ ಪ್ರಶ್ನೆಗಳಿಗೆ ಉತ್ತರ ಕೊಡುವ ಬದಲಾಗಿ ಪ್ರಶ್ನೆ ಕೇಳಿದ 'ಲಂಕೇಶ್' ವಿರುದ್ಧ ಸುಳ್ಳು ಕೇಸನ್ನು ದಾಖಲಿಸುವ ಮೂಲಕ ತನ್ನ ದೌರ್ಬಲ್ಯಗಳನ್ನು ಮುಚ್ಚಿ ಹಾಕಲು ಪ್ರಯತ್ನಿಸಿದ್ದಾರೆ. 'ಲಂಕೇಶ್' ವಾರಪತ್ರಿಕೆಯ ವಿರುದ್ಧ ಅತ್ಯಂತ ಕೀಳುಮಟ್ಟದ ಅಪಪ್ರಚಾರ ನಡೆಸಲು ಹೊರಟಿದ್ದಾರೆ.

ಈಗ ಪಾರ್ವತೀಶ್ ವಿರುದ್ಧ ನೀಡಿರುವ ಕಂಪ್ಲೇಂಟ್ ಕೂಡ ಈ ಪಿತೂರಿಯ ಒಂದು ಭಾಗವಾಗಿದೆ. ಲಂಕೇಶ್ ವಾರ ಪತ್ರಿಕೆಯ ಬಳಗ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿದೆ. ಕೋಮುವಾದಿಗಳು ಹಾಗೂ ಕನ್ನಡ ರಕ್ಷಣೆಯ ಹೆಸರಿನಲ್ಲಿ ಕನ್ನಡಿಗರಿಗೇ ದ್ರೋಹ ಮಾಡುತ್ತಿರುವ ಕೆಲ ಭ್ರಷ್ಟ ನಾಯಕರು ಒಟ್ಟಾಗಿ ನಮ್ಮ ವಿರುದ್ಧ ನಡೆಸಿರುವ ಈ ದಾಳಿಯನ್ನು ನಾವು ದಿಟ್ಟತನದಿಂದ ಎದುರಿಸುತ್ತೇವೆ.

ನಮಗೆ ನಿಮ್ಮ ಬೆಂಬಲ ಬೇಕು.

# ಪೇಜಾವರ ಪ್ಲಾನ್ ದಲಿತರಿಗೆ ಹೊಸ ಶ್ರೀವೈಷ್ಣವ ಜೈಲು



ಕರ್ನಾಟಕದ ದಲಿತ ಸಮುದಾಯದ ಸೋದರರಿಗೆ ಉಡುಪಿಯ ಮಾಧ್ವ ಬ್ರಾಹ್ಮಣ ಮಠಾಧೀಶ ಪೇಜಾವರ ಸ್ವಾಮಿಯು ಹೊಸ ಜೈಲೊಂದನ್ನು ಸೃಷ್ಟಿಸಲು ಬಯಸಿದ್ದಾರೆ.

ಅದನ್ನು ಶ್ರೀವೈಷ್ಣವ ಜೈಲು ಅಂತಂದುಕೊಳ್ಳಬಹುದು.

ಕಳೆದ ವಾರದಿಂದ ಮಾನ್ಯ ಪೇಜಾವರರು ಮೈಸೂರಿನಲ್ಲಿ ಠಿಕಾಣಿ ಹೂಡಿದ್ದಾರೆ. 72ನೇ ಚಾತುರ್ಮಾಸ್ಯ ಆಚರಣೆಯಂತೆ. ನಮ್ಮ ದಲಿತ ಶೂದ್ರರಿಗೆ ಮಾಂಸ ಗೊತ್ತಿದೆಯಾಗಲಿ ಈ ಚಾತುರ್ಮಾಸ್ಯ ಇತ್ಯಾದಿ ಗೊತ್ತಿರಲು ಸಾಧ್ಯವಿಲ್ಲ ಬಿಡಿ. ಕಳೆದ ಆಗಸ್ಟ್ 27ರಂದು ಮೈಸೂರಿನ ದೇವರಾಜ್ ಅರಸು ಕಾಲೋನಿಯಲ್ಲಿ ವಾಸವಿರುವ ದಲಿತ ಪೌರಕಾರ್ಮಿಕರ ಮನೆಗಳಿಗೆ ನುಗ್ಗಿದ ಪೇಜಾವರ ಅವರಿಗೆಲ್ಲಾ 'ವೈಷ್ಣವ ಧರ್ಮ ದೀಕ್ಷೆ' ನೀಡುವುದಾಗಿ ಘೋಷಿಸಿಬಿಟ್ಟರು. ಆದರೆ ಕಂಡೀಷನ್ ಏನೆಂದರೆ ದಲಿತರೆಲ್ಲಾ ಮಾಂಸಾಹಾರ ಮತ್ತು ಮದ್ಯಸೇವನೆ ತ್ಯಜಿಸಬೇಕೆಂಬುದು.

ಇದೇನೋ ಸರಿ. ಪೇಜಾವರರಿಗೆ ಇಲ್ಲೊಂದು ಕುಚೋದ್ಯದ ಪ್ರಶ್ನೆ ಕೇಳಬೇಕೆಂದರೆ ಈಗಾಗಲೇ ವೈಷ್ಣವ ಧರ್ಮೀಯರಾಗಿರುವ ಬ್ರಾಹ್ಮಣರಲ್ಲೂ ಅನೇಕರು ಮದ್ಯಮಾಂಸ ಸೇವನೆಯ ಸದ್ಗುಣಗಳನ್ನು ಕಲಿತಿದ್ದಾರಲ್ಲ! ಅಂತವರನ್ನು ಮೊದಲು ವೈಷ್ಣವ ಧರ್ಮದಿಂದ ಹೊರಹಾಕಿದ ಮೇಲೆ ತಾನೆ ದಲಿತರು ಮಾಂಸ ತಿನ್ನಬಾರದೆಂಬ ಷರತ್ತು ವಿಧಿಸಬೇಕು?

ಪೇಜಾವರರ ಹತ್ತಿರ ಯಾವ ದಲಿತರೂ ತಮ್ಮನ್ನು ವೈಷ್ಣವ ಧರ್ಮಕ್ಕೆ ಸೇರಿಸಿಕೊಳ್ಳಬೇಕೆಂದು ಅರ್ಜಿ ಕೊಟ್ಟಿರದಿದ್ದರೂ ಪೇಜಾವರ ಸಡನ್ನಾಗಿ ಈ ನಾಟಕವಾಡಲು ಕೆಲ ರಾಜಕೀಯ ಕಾರಣಗಳಿವೆ. ಆಗಸ್ಟ್ ತಿಂಗಳ ಕೊನೆಯ 2 ದಿನ ಮೈಸೂರಿನಲ್ಲಿ ರಾಜ್ಯ ಬಿಜೆಪಿ ದಲಿತ ಮೋರ್ಚಾದ ಸಮಾವೇಶ ನಡೆಯಿತು. ಈ ಸಭೆಗೆ ಪೂರ್ವಭಾವಿಯಾಗಿ ಒಂದಿಷ್ಟು ದಲಿತ ಪರ ಕಾಳಜಿಯ ನಾಟಕವಾಡಲು ಬಿಜೆಪಿಗಳು ಪೇಜಾವರರನ್ನು ಬಳಸಿಕೊಂಡರು. ಅವರ ನಿರೀಕ್ಷೆಯಂತೆಯೇ ಪೇಜಾವರರ ದಲಿತರ ಕೇರಿಯ ಭೇಟಿಗೆ ಒಂದಷ್ಟು ಮೀಡಿಯಾ ಪ್ರಚಾರವೂ ಸಿಕ್ಕಿತು.

ನಂತರ ನಡೆದ ಸಮಾವೇಶದಲ್ಲಿ ಬಿಜೆಪಿಗಳು ಕೋಮುವಾದಿ ಅಜೆಂಡಾದೊಳಗೆ ದಲಿತರನ್ನು ಒಳಗೊಳ್ಳುವ ಭೀಕರ ಭಾಷಣಗಳನ್ನು ಮಾಡಿದರು. ಬಿಜೆಪಿ ಎಸ್‌ಸಿ ಮೋರ್ಚಾದ ಉಪಾಧ್ಯಕ್ಷ ನಾಗರಾಜ್ ಮೊಲ್ಲಾಡಿ ಎಂಬಾತ 'ಅಂಬೇಡ್ಕರ್ ಆರೆಸ್ಸೆಸ್ ವಿರೋಧಿಯಾಗಿರಲಿಲ್ಲ, ಬದಲಾಗಿ ಕಾಂಗ್ರೆಸ್ ವಿರೋಧಿಯಾಗಿದ್ದರು.' ಎಂದು ಹಸೀ ಸುಳ್ಳು ಹೇಳಿಬಿಟ್ಟ. ಈಶ್ವರಪ್ಪ ಎಂದಿನಂತೆ ತಮ್ಮ ರಕ್ತಪಿಪಾಸು ಭಾಷಣ ಮಾಡಿ 'ರಂಗನಾಥ ಮಿಶ್ರ ವರದಿ ಜಾರಿ ಮಾಡಿದರೆ ರಕ್ತಪಾತವಾಗಲಿದೆ' ಎಂದರು. ಈ ವರದಿ ಮತಾಂತರಗೊಂಡ ದಲಿತರಿಗೂ ಮೀಸಲಾತಿ ಸೌಲಭ್ಯ ನೀಡಬೇಕೆಂದು ಶಿಫಾರಸ್ಸು ಮಾಡಿದೆ. ಸದ್ಯಕ್ಕೆ ನಿರುದ್ಯೋಗಿಯಾಗಿರುವ ಸಂತೇ ಮರಳ್ಳಿಯ ಮಾಜಿ ಶಾಸಕ ಎ.ಆರ್.ಕೃಷ್ಣಮೂರ್ತಿ ಹೆಗಲಿಗೆ ದಲಿತರನ್ನೂ ಬಿಜೆಪಿಗೆ ಕರೆತರುವ ಈ ಬಿಜೆಪಿಗಳ ದುಷ್ಟ ಅಜೆಂಡಾವನ್ನು ಹೊರಿಸಲಾಗಿದೆ.


ಅಂದಹಾಗೆ ಪೇಜಾವರರಿಗೆ ಮೈಸೂರಿನ ದಲಿತ ಚಳವಳಿಯ ನಾಯಕರು ಕೆಲ ಪ್ರಶ್ನೆ ಹಾಕಿದ್ದಾರೆ.

ಸವಣೂರಿನಲ್ಲಿ ದಲಿತರು ಮಲಸ್ನಾನದ ಪ್ರತಿಭಟನೆ ಮಾಡಿದರು. ಬೆಂಗಳೂರಿನ ಬೆಗ್ಗರ್ಸ್ ಕಾಲೋನಿಯಲ್ಲಿ ನೂರಾರು ದಲಿತರನ್ನು ಬಿಜೆಪಿ ಸರ್ಕಾರವೇ ಕೊಂದಿದೆ. ನೆರೆ ಪರಿಹಾರದಲ್ಲೂ ದಲಿತರಿಗೆ ಅನ್ಯಾಯವಾಗುತ್ತಿವೆ.

ಹಿಂದೂ ಧರ್ಮ ರಕ್ಷಕರಾದ ಬಿಜೆಪಿ ಸರ್ಕಾರವೇ ಈ ಅನ್ಯಾಯ ಮಾಡುತ್ತಿದ್ದರೂ ಪೇಜಾವರ ಅದನ್ಯಾಕೆ ಪ್ರಶ್ನಿಸಲಿಲ್ಲ?

ಉಡುಪಿಯ 'ಕನಕನ ಕಿಂಡಿ'ಯನ್ನು 'ನವಗ್ರಹ ಕಿಂಡಿ' ಎಂದು ಬದಲಾಯಿಸಿ ಶೂದ್ರ ಕನಕನ ನೆನಪನ್ನೇ ಅಳಿಸಿಹಾಕುತ್ತಿದ್ದಾರೆ ಪೇಜಾವರ. ಇಂತಹ ವಂಚಕರು ಇವತ್ತು ಎಚ್ಚೆತ್ತ ದಲಿತರ ಬಳಿ ಹೋಗಿ 'ಹಿಂದೂ ಧರ್ಮದಲ್ಲೇ ಉಳಿಯಿರಿ ವೈಷ್ಣವ ಧರ್ಮ ಸೇರಿ' ಎಂದರೆ ಯಾವನು ಕೇಳುತ್ತಾನೆ. ವೈಷ್ಣವ ದೀಕ್ಷೆ ಇತ್ಯಾದಿಗಳನ್ನು ನಿರ್ಲಕ್ಷಿಸಿ ಬೌದ್ಧ ದೀಕ್ಷೆಯತ್ತ ಸಾಗುತ್ತಿರುವ ಅಸಂಖ್ಯಾತ ದಲಿತ, ದಮನಿತರ ನಡೆ ಪೇಜಾವರರಂತ ಹಿಂದೂ ಧರ್ಮದ ಕರ್ಮಠ ಮಠಾಧೀಶರಿಗೆ ಗಾಬರಿ ತರಿಸಿದೆ. ಹಾಗಾಗಿ ಈ ಮತಾಂತರ ಆಮಿಷ ಒಡ್ಡಿ ದಲಿತರನ್ನು ವೈಷ್ಣವ ಜೈಲಿಗೆ ದೂಡಲು ಪೇಜಾವರ ಬಯಸುತ್ತಿರುವಂತಿದೆ.


# ಬಿಜೆಪಿ ವಿರುದ್ಧ ರೊಚ್ಚಿಗೆದ್ದ ಮಲ್ಲೇಶ್ವರಂ ಬ್ರಾಹ್ಮಣರು


ಅಶ್ವತ್ಥ ನಾರಾಯಣ

ಬೆಂಗಳೂರಿನ ಮಿಕ್ಕೆಲ್ಲಾ ಬಿಜೆಪಿ ಶಾಸಕರು ಭೋಗಸ್ ಬಿಲ್ಲು, ಬೇನಾಮಿ ಟೆಂಡರು ಮತ್ತು ಸೈಟು ಪೈಟು ಇತ್ಯಾದಿಯಲ್ಲೇ ಟೈಂಪಾಸ್ ಮಾಡುತ್ತಿದ್ದರೆ; ಮಲ್ಲೇಶ್ವರದ ಎಮ್ಮೆಲ್ಲೇ ಅಶ್ವತ್ಥನಾರಾಯಣ ಮಾತ್ರ ಬಿಜೆಪಿಯ ಹುಟ್ಟು ಬುದ್ಧಿಗೇ ವ್ಯತಿರಿಕ್ತವಾದ ಕೆಲಸವೊಂದಕ್ಕೆ ಕೈ ಹಾಕಿದ್ದಾರೆ.

ಅದು ಬ್ರಾಹ್ಮಣ ಮರ್ದನ!

ಸದ್ಯಕ್ಕದು ಜಾತಿ ವ್ಯಾಮೋಹ ಅಥವಾ ಸ್ವಜನಪಕ್ಷಪಾತದ ರೂಪದಲ್ಲಿದ್ದರೂ ಪರಿಣಾಮ ಮಾತ್ರ ಬ್ರಾಹ್ಮಣರ ಧಮನವಾಗೇ ಚಾಲ್ತಿಯಲ್ಲಿದೆ. ಬ್ರಾಹ್ಮಣರ್‍ಯಾರೂ ಪಾಲಿಕೆಗೆ ಗೆದ್ದು ಬರಬಾರದು, ತನ್ನ ಸಂಬಂಧಿಕರು-ಚೇಲಾಗಳೇ ಕೌನ್ಸಿಲರ್‌ಗಳಾಗಿರಬೇಕು, ಪೊಲೀಸ್ ಠಾಣೆಗಳಿಂದ ಹಿಡಿದು ಪಾಲಿಕೆ ಇಂಜಿನಿಯರ್‌ಗಳ ತನಕ ಒಕ್ಕಲಿಗರೇ ತುಂಬಿರಬೇಕು, ಅದರಲ್ಲಿ ಮಾಗಡಿ-ಕುಣಿಗಲ್ ಕಡೆಯ ಒಕ್ಕಲಿಗರೇ ಬೇಕು, ದೈತ್ಯ ಕಾಮಗಾರಿಗಳಿಂದ ಹಿಡಿದು ಸಣ್ಣಪುಟ್ಟ ಪೀಸ್ ವರ್ಕ್‌ಗಳ ತನಕ ಒಕ್ಕಲಿಗರೇ ಕಂಟ್ರಾಕ್ಟರುಗಳಾಗಿರಬೇಕು, ಕೊನೆಗೆ ಬಿಜೆಪಿಯ ಲೋಕಲ್ ಪದಾಧಿಕಾರಿಗಳಾಗ್ಯೂ ಒಕ್ಕಲಿಗರೇ ತುಂಬಿರಬೇಕೆಂದರೆ ಬ್ರಾಹ್ಮಣರ ಹೊಟ್ಟೆಯೊಳಗೆ ಖಾರ ಕಿವುಚಿದಂತಾಗದೆ ಇನ್ನೇನು?


ಸರ್ವೋತ್ತಮ ಪೈ

ಮಲ್ಲೇಶ್ವರ ಹೇಳಿಕೇಳಿ ಪಕ್ಕಾ ಬ್ರಾಹ್ಮಣ ಕ್ಷೇತ್ರ. ಹಿಂದಿದ್ದ ಸೀತಾರಾಮ್ ಜಾತಿಯಲ್ಲಿ ಬಳಜಿಗರಾದರೂ ಈಗಿರುವ ಅಶ್ವತ್ಥ ನಾರಾಯಣ ಒಕ್ಕಲಿಗರಾದರೂ ಸೂತ್ರಧಾರ ರಾಗಿ ಬ್ರಾಹ್ಮಣರಿದ್ದೇ ಇರುತ್ತಿದ್ದರು. ಅದರಲ್ಲೂ ಬಿಜೆಪಿ ವಿಷಯಕ್ಕೆ ಬಂದರೆ ಇಲ್ಲಿ ಸರ್ವಂ ಜನಿವಾರಮಯಂ! ಇವತ್ತಲ್ಲಾ ನಾಳೆ ಬಿಜೆಪಿ ಟಿಕೆಟ್ಟು ಗಿಟ್ಟಿಸಿ ಮಲ್ಲೇಶ್ವರದ ಶಾಸಕರಾಗಲು ಚಡಪಡಿಸುತ್ತಿದ್ದ ಭದ್ರಗಿರಿ ಸರ್ವೋತ್ತಮ ಪೈ ಅವರನ್ನು ಬದಿಗಿಕ್ಕಿ ತಾನು ಎಮ್ಮೆಲ್ಲೇಯಾಗಬೇಕೆಂದು ಮಾಜಿ ಕೌನ್ಸಿಲರ್ ಚಿದಂಬರ, ಇವರಿಬ್ಬರಿಗಿಂತಲೂ ತಾನೇ ಅಪ್ರತಿಮನೆಂದು ಬ್ರಾಹ್ಮಣ ಮಹಾಸಭಾದ ನಾಯಕ ವೈ.ಎಸ್. ಶರ್ಮ, ಆಕಾಲದಿಂದಲೂ ಚೆಡ್ಡಿ ತೊಟ್ಟು ಬಿಜೆಪಿ ಕಟ್ಟಿದ ಶ್ರೀನಾಥ್ ಅಯ್ಯಂಗಾರ್, ಮಲ್ಲೇಶ್ವರಂ ಸೊಸೈಟಿಯ ಮಾಜಿ ಅಧ್ಯಕ್ಷ ಅನಂತನ್, ಎಮ್ಮೆಲ್ಲೇ ಟಿಕೆಟ್ಟು ಸಿಗದಿದ್ದರೆ ಕನಿಷ್ಠ ಕೌನ್ಸಿಲರಾದರೂ ಆಗಲೇಬೇಕೆಂದು ಆರೆಸ್ಸೆಸ್ ಕುಮಾರ, ಹಳೇ ಆರೆಸ್ಸೆಸ್ ಕಟ್ಟಾಳು ಅನಂತಕೃಷ್ಣ, ಮಂಡಳ ಬಿಜೆಪಿ ಕಾರ್ಯದರ್ಶಿ ಜಗನ್ನಾಥ, ಮೀಡಿಯಾ ನಿಭಾಯಿಸಿಕೊಂಡೇ ನಾಯಕಪಟ್ಟಕ್ಕೆ ಬಂದ ರಾಘವೇಂದ್ರ; ಹೀಗೆ ಜುಟ್ಟು ಜನಿವಾರ ಸಮೇತ ಬಿಜೆಪಿ ಬಾವುಟ ಎತ್ತಾಡಿಸಿದ ವಿಪ್ರರ ಹಿಂದೇ ಬಿಜೆಪಿಯ ಆಸ್ತಿಯಂತಿತ್ತು.


ಶುರುವಿನಲ್ಲಿ ಜನತಾಪಕ್ಷದ ಭದ್ರಕೋಟೆಯಂತಿದ್ದ ಮಲ್ಲೇಶ್ವರ ಕ್ರಮೇಣ ಕಾಂಗ್ರೆಸ್ ಪಾಲಾಯಿತಾದರೂ ಇಲ್ಲಿನ ಬ್ರಾಹ್ಮಣ ನಿಷ್ಠೆ ಮಾತ್ರ ಬಿಜೆಪಿಗೇ ಅಂಟಿಕೊಂಡಿತ್ತು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಒಕ್ಕಲಿಗ ಅಶ್ವತ್ಥನಾರಾಯಣ ರಿಗೆ ಬಿಜೆಪಿ ಟಿಕೆಟ್ಟು ಘೋಷಿಸಿದ್ದೇ ತಡ ಒಂದು ಹಿಂಡು ಬ್ರಾಹ್ಮಣರಿಗೆ ಬುಡಸುಟ್ಟಂತಾಗಿತ್ತು. ಎಮ್ಮೆಲ್ಲೇ ಟಿಕೆಟ್ಟಾಗಿ ಮುಂಚೂಣಿಯಲ್ಲಿದ್ದ ಸರ್ವೋತ್ತಮ ಪೈ ಬಂಡೆದ್ದು ಜೆಡಿಎಸ್ ಅಭ್ಯರ್ಥಿಯಾದದ್ದು ಬಿಜೆಪಿಗಾದ ಮೊದಲ ಮುಖಭಂಗ ವಾಗಿತ್ತು.

ಹಾಗಿದ್ದೂ ಬಹುತೇಕ ಬ್ರಾಹ್ಮಣರೆಲ್ಲ ಬಿಜೆಪಿ ಬೆಂಬಲಕ್ಕೇ ನಿಂತು ಅಶ್ವತ್ಥನಾರಾಯಣರನ್ನು ಗೆಲ್ಲಿಸಿದ್ದರು. ಎಷ್ಟೆಂದರೂ ಅಶ್ವತ್ಥನಾರಾಯಣ ರಾಷ್ಟ್ರನಾಯಕ ಅನಂತ್‌ಕುಮಾರ್ ಶಿಷ್ಯ. ಗೆದ್ದ ನಂತರ ಬ್ರಾಹ್ಮಣರನ್ನಲ್ಲದೇ ಇನ್ನಾರ ಜೀತ ಮಾಡಿಯಾನು? ಮಲ್ಲೇಶ್ವರದ ಬಿಜೆಪಿಯೆಂದರೆ ಅದು ಮತ್ತೊಂದು ವಿಪ್ರವೃಂದವಿದ್ದಂತೆ. ಸ್ಥಳೀಯ ಆರೆಸ್ಸೆಸ್ಸು ಮತ್ತು ಪಕ್ಷಗಳೆರಡೂ ಬ್ರಾಹ್ಮಣರ ಕೈಯಲ್ಲೇ ಇರುವಾಗ ಅಶ್ವತ್ಥ ನಾರಾಯಣ ಎಮ್ಮೆಲ್ಲೇಯಾದರೂ ಬ್ರಾಹ್ಮಣರ ಮರ್ಜಿಗೆ ತಕ್ಕಂತೆ ನಡೆಯಲೇಬೇಕೆಂಬುದು ಇಲ್ಲಿನ ಬ್ರಾಹ್ಮಣರ ನಿರೀಕ್ಷೆಯಾಗಿತ್ತು.

ಆದರೆ ಶಾಸಕರ ಲೆಕ್ಕಾಚಾರವೇ ಬೇರೆಯಾಗಿತ್ತು. ಗೆದ್ದು ಗೆದ್ದಿದ್ದೇ ಮಲ್ಲೇಶ್ವರಂ ಪೊಲೀಸ್ ಠಾಣೆಗೆ ತಮ್ಮದೇ ಜಾತಿಬಂಧು ಶ್ರೀನಿವಾಸ್‌ರನ್ನೂ, ಸುಬ್ರಹ್ಮಣ್ಯನಗರ ಪೊಲೀಸ್ ಠಾಣೆಗೆ ಶ್ರೀಧರ್ ಎಂಬ ಮತ್ತೊಬ್ಬ ಜಾತ್ಯಸ್ಥನನ್ನು ಇನ್ಸ್‌ಪೆಕ್ಟರ್ ಆಗಿ ಹಾಕಿಸಿಕೊಂಡರು. ಇನ್ನು ಕಾಂಟ್ರಾಕ್ಟು, ಟೆಂಡರು, ಬೋಗಸ್ ಬಿಲ್ ದಂಧೆಗೆ ನೆರವಾಗಬೇಕಲ್ಲ; ತನ್ನ ಸ್ವಜಾತಿ ಇಂಜಿನಿಯರ್‌ಗಳನ್ನೇ ತಂದು ಕೂರಿಸಿದ.

ಎ೯೯ ನಂಜಯ್ಯ ಎಂಬ ಮಂಡ್ಯ ಭಾಗದ ಇಂಜಿನಿಯರ್ ಶಾಸಕರ ಜಾತಿವಂತನಾಗೇ ಮಲ್ಲೇಶ್ವರಕ್ಕೆ ವಕ್ಕರಿಸಿದ. ಅಸಿಸ್ಟೆಂಟ್ ಇಂಜಿನಿಯರ್‌ಗಳಾದ ಮಂಜುನಾಥ್ ಪ್ರಸಾದ್, ಹರೀಶ್, ಅಶ್ವತ್ಥನಾರಾಯಣ ಮುಂತಾದವರೆಲ್ಲರೂ ಜಾತಿ ಕಾರಣಕ್ಕಾಗೇ ಮಲ್ಲೇಶ್ವರದ ಪಾಲಿಕೆ ಕಚೇರಿಯಲ್ಲಿ ಪ್ರತಿಷ್ಠಾಪನೆಗೊಂಡರು. ಈಗಾಗಲೇ ಅಭಿವೃದ್ಧಿಗೊಂಡು ಇನ್ನಾವುದೇ ಬೃಹತ್ ಕಾಮಗಾರಿಗೆ ಅವಕಾಶವಿಲ್ಲದಿದ್ದರೂ ಮುಖ್ಯಮಂತ್ರಿಗೆ ಮಸ್ಕಾ ಹೊಡೆದು ಸರಿಸುಮಾರು 300 ಕೋಟಿ ರೂಪಾಯಿಗಳಷ್ಟನ್ನು ಮಲ್ಲೇಶ್ವರಕ್ಕೆ ಮಂಜೂರು ಮಾಡಿಸಿಕೊಂಡ ಎಮ್ಮೆಲ್ಲೇ ಸಾಹೇಬರ ಹಕೀಕತ್ತೇ ಬೇರೆಯಿತ್ತು. ಕೋಟಿ ಮೊತ್ತದ ಕಾಮಗಾರಿಗಳನ್ನೆಲ್ಲ ತಮ್ಮದೇ ದಾಯಾದಿಗಳಾದ ವಿಜಯ್‌ಕುಮಾರ್, ರವಿ ಮತ್ತು ಸುದರ್ಶನ್ ಹೆಸರಲ್ಲಿ ಬೇನಾಮಿಯಾಗಿ ಎಮ್ಮೆಲ್ಲೇಯೇ ಗಿಟ್ಟಿಸಿಕೊಂಡಾಗಿತ್ತು. ಅದರಲ್ಲೂ ಬ್ಯಾಟರಾಯನಪುರದಿಂದ ಯಶವಂತಪುರದವರೆಗಿನ ಸ್ಟ್ರಾರ್ಮ್‌ವಾಟರ್ ಡ್ರೈನ್‌ಗೆಂದು 120 ಕೋಟಿ ರೂಪಾಯಿಗಳ ಮೊತ್ತದ ಭಾರೀ ಟೆಂಡರನ್ನು ತಮ್ಮ ಕಜಿನ್ ವಿಜಯ್‌ಕುಮಾರ್ ಹೆಸರಲ್ಲೇ ಎಮ್ಮೆಲ್ಲೇ ಸಾಹೇಬರು ದಕ್ಕಿಸಿಕೊಂಡರು. ಪಕ್ಕದ ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಕೋಟಿ ಮೊತ್ತದ ಅನೇಕ ಟೆಂಡರುಗಳನ್ನೂ ತಮ್ಮ ಸಂಬಂಧಿಗಳಿಗೇ ಕೊಡಿಸಿಕೊಟ್ಟದ್ದು ಸಾಲದೆಂಬಂತೆ ಸಣ್ಣಪುಟ್ಟ ಪೀಸ್‌ವರ್ಕ್‌ಗಳಿಗೂ ತಮ್ಮದೇ ಜಾತಿಯ ಆನಂದ್, ಚಂದ್ರು, ಹೊನ್ನೇಗೌಡ ಇತ್ಯಾದಿ ಮಾಗಡಿ-ಕುಣಿಗಲ್ ಮೂಲದ ಒಕ್ಕಲಿಗ ಕಂಟ್ರಾಕ್ಟರುಗಳನ್ನು ನೇಮಿಸಿಕೊಂಡರು.

ಹೀಗೆ ಬೇನಾಮಿ ಕಾಂಟ್ರಾಕ್ಟ್ ದಂಧೆಯಲ್ಲೇ ನೂರಾರು ಕೋಟಿ ದೋಚಲಾರಂಭಿಸಿದ ಅಶ್ವತ್ಥನಾರಾಯಣರ ವಿರುದ್ಧ ಮೊದ ಮೊದಲು ನಿರ್ಲಿಪ್ತರಾಗೇ ಇದ್ದ ಮಲ್ಲೇಶ್ವರದ ಬ್ರಾಹ್ಮಣರಿಗೆ ಮೊದಲ ಬಾರಿಗೆ ಬಿಸಿ ಮುಟ್ಟಿದ್ದು ಪಾಲಿಕೆ ಚುನಾವಣೆಯಲ್ಲಿ, ದತ್ತಾತ್ರೇಯ ದೇವಸ್ಥಾನ ವಾರ್ಡಿಗೆ ಚಿದಂಬರ ಟಿಕೆಟ್ ಬಯಸಿದ್ದರು. ಸುಬ್ರಹ್ಮಣ್ಯ ನಗರ ವಾರ್ಡಿಗೆಂದೇ ಹಿರಿಯ ಬಿಜೆಪಿ ನಾಯಕಿ ಸರಸ್ವತಿ, ಡಾಕ್ಟರ್ ಮೀನಾಕ್ಷಿ, ರಾಘವೇಂದ್ರ ಮತ್ತು ಶ್ರೀನಾಥ್ ಅಯ್ಯಂಗಾರ್ ಮುಂತಾದ ಬ್ರಾಹ್ಮಣ ನಾಯಕರು ಪೈಪೋಟಿಗಿಳಿದಿದ್ದರು. ಮಲ್ಲೇಶ್ವರ ವಾರ್ಡಿಗಾಗಿ ಮಂಡಳಿ ಬಿಜೆಪಿ ಕಾರ್ಯದರ್ಶಿ ಜಗನ್ನಾಥ್ ಹಠಕ್ಕೆ ಬಿದ್ದಿದ್ದರು.


ಅನಂತ್‌ಕುಮಾರ್

ಆದರೆ ಅಶ್ವತ್ಥನಾರಾಯಣರ ಷಡ್ಯಂತ್ರವೇ ಬೇರೆಯಾಗಿತ್ತು, ಜನರಲ್ ವಾರ್ಡನ್ನಾಗಿ ಸುಬ್ರಹ್ಮಣ್ಯನಗರವನ್ನು ಪರಿವರ್ತಿಸಿದರೆ ಎಲ್ಲಿ ಬ್ರಾಹ್ಮಣರಿಗೆ ಟಿಕೆಟ್ಟು ಕೊಡಬೇಕಾದೀತೋ ಎಂದು ಹಿಂದುಳಿದ-ಎ ಕ್ಯಾಟಗರಿ ಮಾಡಿಬಿಟ್ಟರು. ತನ್ನದೇ ಜಾತ್ಯಸ್ಥ ಕೃಷ್ಣೇಗೌಡರ ಪತ್ನಿ ಗಾಯಿತ್ರಿಗೆ ಟಿಕೆಟ್ಟು ಕೊಟ್ಟರು. ಕಾಡು ಮಲ್ಲೇಶ್ವರ ವಾರ್ಡಿಗೂ ಮೀಸಲಾತಿ ತಂತ್ರ ಬಳಸಿ ತಮ್ಮ ರಿಯಲ್ ಎಸ್ಟೇಟ್ ದಂಧೆಯ ಪಾರ್ಟ್‌ನರ್ ಮಂಜುನಾಥ್ ರಾಜುವಿಗೆ 'ಬಿ' ಫಾರ್ಮ್ ಕಳಿಸಿಬಿಟ್ಟರು. ಕನಿಷ್ಠ ಅರಮನೆನಗರ ವಾರ್ಡಿಗಾದರೂ ಪ್ರಾಮಾಣಿಕ ಬಿಜೆಪಿ ಕಾರ್ಯಕರ್ತ ಮತ್ತು ಮಾಜಿ ಕೌನ್ಸಿಲರ್ ರಾಜೇಂದ್ರರಿಗೆ ಟಿಕೆಟ್ ಕೊಡುತ್ತಾರೆಂಬ ಬಿಜೆಪಿ ಕಾರ್ಯಕರ್ತರ ನಿರೀಕ್ಷೆಯೇ ತಲೆಕೆಳಗಾಗಿತ್ತು. ತಮ್ಮ ಡಾಕ್ಟರಿಕೆಯ ಪಾಲುದಾರನೆಂಬ ಒಂದೇ ಕಾರಣಕ್ಕೆ ಸ್ಥಳೀಕನಲ್ಲದ, ದೂರದ ಜೆಪಿನಗರದ, ಬಿಜೆಪಿ ಕಾರ್ಯಕರ್ತನೇ ಅಲ್ಲದ ಡಾಕ್ಟರ್ ಶಿವಪ್ರಕಾಶ್‌ರನ್ನು ತಂದು ಹೇರಿಬಿಟ್ಟರು.

ಬಹುಶಃ ಆರೆಸ್ಸೆಸ್ ಕುಮಾರ್ ಪರವಾಗಿ ಜಯನಗರದ ಶಾಸಕ ವಿಜಯ್‌ಕುಮಾರ್ ಹಠಕ್ಕೆ ಬೀಳದೇ ಹೋಗಿದ್ದರೆ ಅದ್ಯಾರೋ ಐಶ್ವರ್ಯ ಎಂಬ ಸುಂದರಾಂಗಿಗೆ ಎಮ್ಮೆಲ್ಲೇ ಸಾಹೇಬರು ಟಿಕೆಟ್ ಕೊಟ್ಟು ಬಿಡುತ್ತಿದ್ದರು. ಆಕೆಗೆಂದೇ ರಾಜಾಮಹಲ್ ಗುಟ್ಟಳ್ಳಿ ವಾರ್ಡನ್ನು ಮಹಿಳಾ ಮೀಸಲಾತಿ ಗೀಡುಮಾಡಿದ್ದು ಕೂಡ ಶಾಸಕರ ಮತ್ತೊಂದು ಕಾರಸ್ಥಾನವಾಗಿತ್ತು. ಮತ್ತಿಕೆರೆ ವಾರ್ಡಿಗೆ ಬಿಜೆಪಿ ಅಭ್ಯರ್ಥಿಯಾದ ಮುನಿಸ್ವಾಮಿಗೌಡ ಹೇಳಿಕೇಳಿ ಶಾಸಕ ಅಶ್ವತ್ಥನಾರಾಯಣರ ದೊಡ್ಡಪ್ಪನ ಮಗ. ಈತನ ಅಳಿಯನೇ ಕಂಟ್ರಾಕ್ಟರ್!

ಸ್ಥಳೀಕರಲ್ಲದ, ಅಸಲಿಗೆ ಬಿಜೆಪಿ ಕಾರ್ಯಕರ್ತರೇ ಅಲ್ಲದ, ತಮ್ಮ ರಿಯಲ್ ಎಸ್ಟೇಟ್ ಪಾರ್ಟನರ್‌ಗಳು, ತಮ್ಮದೇ ಆಸ್ಪತ್ರೆಯ ಡಾಕ್ಟರ್‌ಗಳು, ನೆಂಟರು, ಗೆಳತಿಯರಿಗೆಲ್ಲ ಬಿಜೆಪಿ ಟಿಕೆಟ್ ಕೊಟ್ಟು, ಅವರ ಅನುಕೂಲಕ್ಕಾಗಿ ವಾರ್ಡಿನ ಕ್ಯಾಟಗರಿ ರೂಪಿಸಿಕೊಟ್ಟು ನೆರವಾದ ಶಾಸಕರ ವಿರುದ್ಧ ಮೂಲ ಬಿಜೆಪಿ ಕಾರ್ಯಕರ್ತರಂತಿದ್ದ ಬ್ರಾಹ್ಮಣರಿಗೆ ಹೇಗಾಗಿರಬೇಡ?

ಅರಮನೆ ನಗರ ವಾರ್ಡಿಗೆ ರಾಜೇಂದ್ರ ಬಂಡಾಯ ಬಿಜೆಪಿ ಅಭ್ಯರ್ಥಿಯಾಗಿ ನಿಂತರೆ, ಗಾಯಿತ್ರಿನಗರ ವಾರ್ಡಿಗೆ ಮುಂಚೂಣಿಯಲ್ಲಿದ್ದ ಡಾ. ಮೀನಾಕ್ಷಿ ಬಿಜೆಪಿ ತೊರೆದು ಲೋಕಶಕ್ತಿಯ ಅಭ್ಯರ್ಥಿಯಾದರು. ಸುಬ್ರಹ್ಮಣ್ಯನಗರ ವಾರ್ಡಿಗೆ ಇನ್ನಿಲ್ಲದಂತೆ ಹೆಣಗಾಡಿದ ಸರಸ್ವತಿ ಬಿಜೆಪಿ ಕಚೇರಿಯತ್ತ ತಲೆ ಹಾಕುವುದನ್ನೇ ನಿಲ್ಲಿಸಿಬಿಟ್ಟರು. ಹಿರಿಯ ನಾಯಕರಂತಿದ್ದ ವೈ.ಎಸ್. ಶರ್ಮ ಬಿಜೆಪಿಗೆ ಗುಡ್‌ಬೈ ಹೇಳಿದ್ದೇ ಬಹುಜನ ಸಮಾಜ ಪಕ್ಷ ಸೇರಿಕೊಂಡರು. ಎನ್.ಎ. ಚಿದಂಬರ ಕೂಡ ಪಕ್ಷ ತೊರೆದು ಜೆಡಿಎಸ್ ಟಿಕೆಟ್ ಗಿಟ್ಟಿಸಿ ಪೈಪೋಟಿ ಕೊಟ್ಟರು. ಇಡೀ ಮಲ್ಲೇಶ್ವರಂ ಕ್ಷೇತ್ರದ ಎಂಟು ವಾರ್ಡುಗಳ ಪೈಕಿ ಒಬ್ಬೇ ಒಬ್ಬ ಬ್ರಾಹ್ಮಣನಿಗೆ ಬಿಜೆಪಿ ಟಿಕೆಟ್ಟು ಸಿಕ್ಕಿರಲಿಲ್ಲ. ಕೊನೆಗೆ ನಗರಾಧ್ಯಕ್ಷ ವಿಜಯ್‌ಕುಮಾರ್ ಹಠಕ್ಕೆ ಬಿದ್ದು ಗುಟ್ಟಳ್ಳಿ ವಾರ್ಡಿನಲ್ಲಿ ಆರೆಸ್ಸೆಸ್ ಕುಮಾರನ ಪತ್ನಿಗೆ ಕೊಡಬೇಕಾಯಿತು. ಅದು ಬಿಟ್ಟರೆ ಇಡೀ ಕ್ಷೇತ್ರದ ಬ್ರಾಹ್ಮಣರೆಲ್ಲ ಎದೆಬಡಿದುಕೊಂಡಿದ್ದೊಂದೇ ಬಂತು.


ವೈ.ಎಸ್.ಶರ್ಮಾ

ಮಲ್ಲೇಶ್ವರದುದ್ದಕ್ಕೂ ಹೆಡೆಯೆತ್ತಿದ ಅಸಂಖ್ಯಾತ ಬ್ರಾಹ್ಮಣ ಸಂಘಗಳ ಪೈಕಿ ವೈಷ್ಣವ ಮಹಾಸಭಾ, ಉಭಯ ವೇದಾಂತ ಸಭಾ, ಸನಾತನ ಧರ್ಮ ಸಂಸ್ಥೆ ವಿಪ್ರವೃಂದ, ವಿದ್ಯಾರಣ್ಯ ಬ್ರಾಹ್ಮಣ ಸಂಘ, ಬಡಗನಾಡು ಬ್ರಾಹ್ಮಣ ಸಂಘ, ಮುಲಕನಾಡು ಬ್ರಾಹ್ಮಣ ಸಂಘ, ಮಲ್ಲೇಶ್ವರಂ ಬ್ರಾಹ್ಮಣ ಸಂಘ ಇತ್ಯಾದಿಗಳೆಲ್ಲ ಬಹಿರಂಗವಾಗೇ ಅಶ್ವತ್ಥನಾರಾಯಣರ ವಿರುದ್ಧ ಕಿಡಿಕಾರಿದರೆ, ಇನ್ನೂ ಒಂದು ಹೆಜ್ಜೆ ಮುಂದೆ ಹೋದ ತ್ರಿಮತಸ್ಥ ಬ್ರಾಹ್ಮಣರ ಸಂಘ ಬಿಜೆಪಿ ವಿರುದ್ಧವೇ ಕರಪತ್ರ ಹೊರಡಿಸಿ ಪ್ರಚಾರಕ್ಕಿಳಿಯಿತು. ಬ್ರಾಹ್ಮಣರ್‍ಯಾರೂ ಬೆಳೆಯಲೇಬಾರದೆಂದು ಶಾಸಕರು ಕ್ಯಾಟಗರಿ ರೂಪಿಸಿದ್ದಾರೆಂದೂ ಯಾರೇ ನಿಜ ವೈದಿಕರು ಬಿಜೆಪಿಗೆ ಮತ ನೀಡದೇ ಬೇರೆ ಪಕ್ಷಗಳ ಅಭ್ಯರ್ಥಿಯನ್ನು ಬೆಂಬಲಿಸಬೇಕೆಂದೂ ಕರಪತ್ರದಲ್ಲಿ ಕರೆ ಕೊಡಲಾಗಿತ್ತು.

ಹಾಗಿದ್ದೂ ತಮ್ಮ ಬಹುತೇಕ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳುವಲ್ಲಿ ಅಶ್ವತ್ಥನಾರಾಯಣ ಯಶಸ್ವಿಯಾಗಿದ್ದು ಮ ಬ್ರಾಹ್ಮಣರ ಹೊಟ್ಟೆಯೊಳಗೆ ಖಾರ ಕಲಿಸಿದಂತಾಗಿತ್ತು. ತಲ ವಾರ್ಡಿಗೆ ಕೋಟಿಗಟ್ಟಲೇ ಸುರಿದು ತಮ್ಮ ನೆಂಟರ ಭಟ್ಟಂಗಿಗಳನ್ನು ಗೆಲ್ಲಿಸಿಕೊಂಡಿದ್ದ ಅಶ್ವತ್ಥನಾರಾಯಣ ಅಷ್ಟಕ ಸುಮ್ಮನಾಗದೇ ಮತ್ತೆ ಬ್ರಾಹ್ಮಣರ ಸೊಲ್ಲಡಗಿಸಲ ಮತ್ತೊಂದು ಕಾರ್ಯಾಚರಣೆಗೆ ಕೈಯಿಟ್ಟರು. ಅದ ಮಲ್ಲೇಶ್ವರ ಮಂಡಳ ಬಿಜೆಪಿಗೆ ಬ್ರಾಹ್ಮಣೇತರನೊಬ್ಬನನ ಅಧ್ಯಕ್ಷನನ್ನಾಗಿಸುವುದು!

ಆ ಕಾಲದಿಂದಲೂ ಬಿಜೆಪಿಗಾಗಿ ಜೀ ತೇದ ಶ್ರೀನಾಥ್ ಅಯ್ಯಂಗಾರ್ ಅಥವ ಜಗನ್ನಾಥ್‌ರ ಪೈಕಿ ಯಾರಾದರೂ ಒಬ್ಬರನ ಮಂಡಳ ಬಿಜೆಪಿಗೆ ಅಧ್ಯಕ್ಷರನ್ನಾಗಿಸುವುದ ಇಲ್ಲಿನ ಬ್ರಾಹ್ಮಣರ ಬಯಕೆಯಾಗಿತ್ತು. ಆದ ಅಶ್ವತ್ಥನಾರಾಯಣ ತಮ್ಮ ಚೇಲಾ ಮತ ಅರಮನೆ ನಗರ ವಾರ್ಡಿನ ಕೌನ್ಸಿಲರ ಶಿವಪ್ರಕಾಶ್ ಪರ ಪಟ್ಟು ಹಿಡಿದಿದ್ದಾ ಹೇಗೂ ಬ್ರಾಹ್ಮಣರೆಲ್ಲ ಬಿಜೆಪಿಯನ ಬೆಂಬಲಿಸುತ್ತಾರಾದ್ದರಿಂದ ತೆಲುಗು ಬಳಜಿಗ ಶಿವಪ್ರಕಾಶ್ ಅಧ್ಯಕ್ಷರಾಗುವುದೇ ಪಕ್ಷಕ್ಕೆ ಲಾಭ ಎಂದ ಅಶ್ವತ್ಥನಾರಾಯಣ ಹಠಕ್ಕೆ ಬಿದ್ದಿದ್ದಾರೆ. ಇದಾಗಿದ್ದೇ ಆದ ಪಕ್ಷದ ಮೇಲಿನ ಬ್ರಾಹ್ಮಣರ ಹಿಡಿತ ಶಾಶ್ವತವಾ ನಿಕಾಲಿಗೊಂಡಂತೆಯೇ ಎಂದು ತಲೆಕೆಡಿಸಿಕೊಂ ಬ್ರಾಹ್ಮಣರೆಲ್ಲ ಇಲ್ಲಿಗೆ ತಿಂಗಳ ಹಿಂದಷ್ಟೇ ಮಲ್ಲೇಶ್ವರ ರಾಮಮಂದಿರದಲ್ಲಿ ಸಭೆ ಸೇರಿದ್ದಾರೆ. ಶಾಸಕರನ ಕರೆಸಿಕೊಂಡು ಯಕ್ಕಾಮಕ್ಕಾ ಝಾಡಿಸಿದ್ದಾರೆ.

'ಅಲ್ರೀ.... ಅನಂತ್‌ಕುಮಾರ್ ಮುಖಾ ನೋಡ್ಕೊಂಡ ನಿಮ್ಮನ್ನು ಗೆಲ್ಲಿಸಿದ್ರೆ ಈಗ ಬ್ರಾಹ್ಮಣರನ್ನೇ ಹಾಳು ಮಾಡೋ ನೋಡ್ತಿದ್ದೀರಲ್ಲ; ಕೇವಲ ಒಕ್ಕಲಿಗರ ಓಟನಿಂದ ಮಾತ್ರಾನೆ ಗೆದ್ರಾ? ಮಲ್ಲೇಶ್ವರದಲ್ಲಿ ಐವತ್ತು ಸಾವಿರ ಬ್ರಾಹ್ಮಣರಿದ್ದಾ ಅನ್ನೋದನ್ನ ಮರೀಬೇಡಿ. ಖಂಡಿತಾ ಪಾಠ ಕಲಿಸೇ ತೀರ್‍ತೀ ಗೊತ್ತಾ....?' ಎಂದು ಬ್ರಾಹ್ಮಣರೆಲ್ಲ ದಬಾಯಿಸಿದ್ದಾ ಕೊನೆಗೆ ಅಶ್ವತ್ಥನಾರಾಯಣ ಈ ಬಾರಿ ಪಾಲಿಕೆಗೆ ಒಂದಷ ಬ್ರಾಹ್ಮಣರನ್ನು ಖಂಡಿತಾ ನಾಮಿನೇಷನ್ ಮಾಡಿಸ್ತೀನಿ ಎಂದ ತುಪ್ಪ ಸವರಿ ಬಂದಿದ್ದಾರಂತೆ.

ಬ್ರಾಹ್ಮಣರ ಸಿಟ್ಟಿಗೆ ಪುಡಿ ಪಾಲಿಕೆ ನಾಮಿನೇಷನ ಯಾವ ಲೆಕ್ಕ? ಭೋಗಸ್ ಬಿಲ್ ಹಗರಣದಲ್ಲಿ ನೂರಾರ ಕೋಟಿ ತಿಂದವನಿಗೆ ಬಡಬ್ರಾಹ್ಮಣರನ್ನು ಸಂಭಾಳಿಸುವುದ ಯಾವ ಮಹಾ? ಮಲೇಶ್ವರದ ಬ್ರಾಹ್ಮಣರು ಮತ ಶಾಸಕರ ಕಾಳಗದಲ್ಲಿ ಯಾರು ಉಳಿದು ಯಾರ ನಾಶವಾಗುತ್ತಾರೆಂಬುದಷ್ಟೇ ಉಳಿದಿರುವ ಪ್ರಶ್ನೆ.

• ರಾ. ಸೋಮನಾಥ್
ra.somanath2010@gmail.com

## ಬ್ರಾಹ್ಮಣ ದ್ವೇಷಕ್ಕೆ ಪ್ರಕಾಶ್ ಬಲಿ?


ಶಾಸಕ ಅಶ್ವತ್ಥನಾರಾಯಣರ ಬ್ರಾಹ್ಮಣ ದ್ವೇಷಕ್ಕೆ ಉರುಳಿದ ದೊಡ್ಡ ತಲೆಯೆಂದರೆ; ಆತ ಸದ್ಯ ರಾಜ್ಯ ಬಿಜೆಪಿ ಮಾಧ್ಯಮ ಕಾರ್ಯದರ್ಶಿಯಾಗಿರುವ ಎಸ್. ಪ್ರಕಾಶ್!

ಕಳೆದ ಪಾಲಿಕೆ ಚುನಾವಣೆಯಲ್ಲಿ ದತ್ತಾತ್ರೇಯ ದೇವಸ್ಥಾನ ವಾರ್ಡಿನಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಪ್ರಕಾಶ್ ನಿರಾಯಾಸವಾಗಿ ಗೆಲ್ಲಬೇಕಿತ್ತು, ಅವರ ವಿರುದ್ಧ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಸತ್ಯನಾರಾಯಣರ ವಿರುದ್ಧ ಕಾಂಗ್ರೆಸ್ಸಿಗರೇ ತಿರುಗಿಬಿದ್ದಿದ್ದರು. ಆದರೆ ಪ್ರಕಾಶ್ ಬಗ್ಗೆ ಶಾಸಕರಿಗೆ ಅದೇನೋ ಹೊಟ್ಟೆಕಿಚ್ಚು, ಗೆದ್ದರೆ ಮುಂದೊಮ್ಮೆ ಶಾಸಕ ಸ್ಥಾನಕ್ಕೇ ಅಡ್ಡಗಾಲಿಟ್ಟಾನು ಎಂಬ ಭೀತಿ ಬೇರೆ. ಬೆಳಿಗ್ಗೆಯಾದರೆ ಪ್ರಕಾಶ್ ಜೊತೆ ಪ್ರಚಾರ ಮಾಡುತ್ತಿದ್ದ ಅಶ್ವತ್ಥನಾರಾಯಣ ರಾತ್ರಿಯಾಗುತ್ತಿದ್ದಂತೆ ಉಲ್ಟಾ ಕಾರ್ಯಾಚರಣೆಗಿಳಿದರು.

ಪೈಪ್‌ಲೈನ್, ಲಿಂಕ್ ರೋಡ್ ಸುತ್ತಮುತ್ತ ಗಣನೀಯವಾಗಿರುವ ಒಕ್ಕಲಿಗರನ್ನೆಲ್ಲ ರಾತ್ರೋರಾತ್ರಿ ಕಲೆ ಹಾಕಿದ್ದೇ ಯಾವುದೇ ಕಾರಣಕ್ಕೂ ಪ್ರಕಾಶ್ ಗೆಲ್ಲಕೂಡದೆಂದು ಫರ್ಮಾನು ಹೊರಡಿಸಿಬಿಟ್ಟರು. ಕಳೆದ ಎಮ್ಮೆಲ್ಲೇ ಚುನಾವಣೆಯಲ್ಲಿ ಅಶ್ವತ್ಥನಾರಾಯಣರನ್ನು ಬೆಂಬಲಿಸಿ ಓಟು ಹಾಕಿದ್ದ ಪೈಪ್‌ಲೈನ್ ಒಕ್ಕಲಿಗರೆಲ್ಲ ಪ್ರಕಾಶ್‌ಗೆ ಕೈಕೊಟ್ಟು ಕಾಂಗ್ರೆಸ್‌ನ ಸತ್ತಿಯನ್ನು ಗೆಲ್ಲಿಸಿಬಿಟ್ಟರು. ಪಾಪ ಪ್ರಕಾಶ್ ದುಡ್ಡು ಕಳಕೊಂಡಿದ್ದೇ ಬಂತು. ಅಶ್ವತ್ಥನಾರಾಯಣರ ಬ್ರಾಹ್ಮಣ ದ್ವೇಷಕ್ಕೆ ಸೋತ ಪ್ರಕಾಶ್ ಇವತ್ತಿಗೂ ತಲೆ ಚಚ್ಚಿಕೊಳ್ಳುತ್ತಿದ್ದಾರೆ.

# ಕರವೇ ಹಾಗೂ ಕೋಮುವಾದಿ ಸರ್ಕಾರದ
# ಜಂಟಿ ಸಂಚು

ನ್ನೊಳಗೆ ಇಷ್ಟೆಲ್ಲಾ
ಳುಕುಗಳನ್ನಿಟ್ಟುಕೊಂಡಿರುವ
ರಾಯಣ ಗೌಡ ತನ್ನ ವ್ಯಕ್ತಿತ್ವದ
ಳಕನ್ನು ಇತರರಿಗೂ ಆರೋಪಿಸಿ
ಚಾವಾಗಲೆತ್ನಿಸುತ್ತಿರುವುದೀಗ
ರಂಗ ಸತ್ಯ. ಒಂದು ಸುಳ್ಳು ಕೇಸು
ಡಿದಾಕ್ಷಣ ಹೆದರಿ ಕಂಗಾಲಾಗುತ್ತಾರೆ.
ಮುಚ್ಚಿ ಹೋಗುತ್ತದೆಂದು
ಂಡಿದ್ದರೆ ಅದು ನಾರಾಯಣ ಗೌಡನ
ೂರ್ಖತನವಷ್ಟೆ.
ಡಪರ ಹೋರಾಟಗಳನ್ನೇ
ಧೆಯಾಗಿಸಿಕೊಂಡಿರುವ ಈ
ಾಕೋರನಿಗೆ ತಕ್ಕುದಾಗೊಂದು ಪಾಠ
ಸದಿದ್ದರೆ, ಸತ್ಯ ಬರೆವ ಪತ್ರಕರ್ತರ
ಲೇರಿ ಹೋಗುವ ದುಷ್ಟತನಕ್ಕೊಂದು
ಕ್ ಹಾಕದಿದ್ದರೆ ಈತ ಕನ್ನಡನಾಡಿಗೆ
ತೆಯಂತೆ ಅಂಟಿಕೊಳ್ಳುವುದು ನಿಶ್ಚಿತ.



ರ್ನಾಟಕ ರಕ್ಷಣಾ ವೇದಿಕೆಯ ಒಂದು ತುಂಡಿನ ಕ್ಷ ನಾರಾಯಣಗೌಡನಿಗ್ಯಾಕೋ ಹೆದರಿಕೆಯಾದಂತಿದೆ.

ಸಂಚಿಕೆಯಲ್ಲಿ ಗಣಿ ರೆಡ್ಡಿಗಳೊಂದಿಗೆ ಈತ ಕೊಂಡ ಡೀಲುಗಳ ಬಗ್ಗೆ ಪ್ರಶ್ನಿಸಿ ವಿಸ್ತೃತ ಯೊಂದನ್ನು ಪ್ರಕಟಿಸಲಾಗಿತ್ತಲ್ಲಾ? ಇದನ್ನು ಕಂಡು ಾದ ಗೌಡ ರಾಜ್ಯಾದ್ಯಂತ ತಮ್ಮ ಚೇಲಾಗಳನ್ನು ಪತ್ರಿಕೆಗಳನ್ನು ಖರೀದಿಸಿದ. ಏಜೆಂಟರುಗಳಿಗೆ ಬೆದರಿಕೆ ದರು. ಪತ್ರಿಕಾ ಕಚೇರಿಗೂ ಬೆದರಿಕೆ ಕರೆಗಳನ್ನು ಸಿ ಹತಾಶರಾಗಿ ಪತ್ರಿಕೆಯ ಮೇಲೆ ಬ್ಲಾಕ್‌ಮೇಲ್ ಪವನ್ನು ಹೊರಿಸುವ ಹಂತಕ್ಕೂ ಈಗ ಹೋಗಿದ್ದಾನೆ. ಾಸ್ತವವೆಂದರೆ ಈತ ಅದೆಷ್ಟೆ ಪ್ರಯತ್ನ ಪಟ್ಟರೂ ಯನ್ನು ಜನರ ಕಣ್ಣಿಂದ ತಪ್ಪಿಸಲಾಗಲಿಲ್ಲ ಮತ್ತು ಾದ ಸಂಗತಿಯೆಂದರೆ, ಖುದ್ದು ರಕ್ಷಣಾವೇದಿಕೆ ರ್ಯಕರ್ತರೇ ಮುಗಿಬಿದ್ದು ಓದಿದರು!

ಂಕೇಶ್' ಆರಂಭದಿಂದಲೂ ಇಂಥ ಸಂಚುಗಳನ್ನು ಮಗೊಳ್ಳುತ್ತಾ ಬಂದಿದೆ. ಇಂಥ ನೂರಾರು ತ್ತುಗಳನ್ನು ದಾಟಿಕೊಂಡು, ಅಡೆತಡೆಗಳನ್ನು ಕೊಂಡು ಸತ್ಯದ ಹಾದಿಯಲ್ಲಿ ಮುಂದುವರೆದ ಸ ಪತ್ರಿಕೆಗಿದೆ. ಇಂದಿಗೂ ನಮ್ಮ ಬಳಗದ ಹೆಜ್ಜೆ ಥದಲ್ಲೇ ಮುಂದುವರೆಯುತ್ತಿದೆ. ಇದೆಲ್ಲ ನಿಮಗೆ ುವ ವಿಚಾರವೇ. ಒಂದು ವಿಚಾರವಂತೂ ಸತ್ಯ, ಗೊಡ್ಡು ಬೆದರಿಕೆ ಸಂಚುಗಳಿಂದ ಸತ್ಯದ ುಚ್ಚಿಸಲಾಗುವುದಿಲ್ಲ. ನಾರಾಯಣ ಗೌಡ ತನ್ನ ರಗಳನ್ನು ಬಚ್ಚಿಟ್ಟುಕೊಳ್ಳುವುದೂ ಸಾಧ್ಯವಿಲ್ಲ.

ಯಾಕೆಂದರೆ, ನಾರಾಯಣ ಗೌಡ ಇಂತಹುದೊಂದು ಹೀನ ಸಂಚಿನ ಮೂಲಕ ಬಚಾವಾದೆ ಅಂತ ಭಾವಿಸಿರ ಬಹುದು. ಕರ್ನಾಟಕದ ಜನತೆಗೆ ತನ್ನ ದುಷ್ಕೃತನಗಳು ತಿಳಿದಿಲ್ಲ ಅಂತಲೂ ಭಾವಿಸಿರಬಹುದು. ಆದರೆ ಜನರೆಷ್ಟು ಸೂಕ್ಷ್ಮಜ್ಞರಿದ್ದಾರೆಂಬ ಅಂಶ ಕಳೆದ ಸಂಚಿಕೆ ಮಾರುಕಟ್ಟೆಗೆ ಬಂದ ದಿನದೊಪ್ಪತ್ತಲ್ಲೇ ಮನವರಿಕೆಯಾಗಿತ್ತು. ರಾಜ್ಯದ ನಾನಾ ಭಾಗಗಳಿಂದ ಕರೆಮಾಡಿದ ಮಂದಿ ನಾರಾಯಣ ಗೌಡನ ಹಿಕಮತ್ತುಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರೆ, ಮತ್ತೆ ಕೆಲವರದ್ದು 'ಆ ವಂಚಕನನ್ನು ಇನ್ನಷ್ಟು ಬೆತ್ತಲಾಗಿಸಿ' ಎಂಬಂಥ ಆಗ್ರಹ, ಪತ್ರಿಕೆಗೆ ಬ್ಲಾಕ್‌ಮೇಲ್ ಪಟ್ಟಕಟ್ಟಿದ್ದ ನೀಚತನದ ಬಗೆಗಿನ ಆಕ್ರೋಶಗಳು ವ್ಯಕ್ತಗೊಂಡವು.

ನಾರಾಯಣ ಗೌಡನ ದಗಲ್ಬಾಜಿಗಳು ಅದೆಂತಹುದಿ ವೆಯೋ ನೋಡಿ, ಪತ್ರಿಕೆ ಮಾರುಕಟ್ಟೆ ತಲುಪುತ್ತಿದ್ದಂತೆಯೇ ನಾಡಿನ ನಾನಾ ಭಾಗಗಳಲ್ಲಿ ತನ್ನ ಚೇಲಾಗಳನ್ನು ಛೂಬಿಟ್ಟಿದ್ದ. ಶಿವಮೊಗ್ಗ ಮುಂತಾದೆಡೆಗಳಲ್ಲಿ ಸ್ಟಾಲ್‌ಗಳಿಗೆ ನುಗ್ಗಿದ ನಾರಾಯಣನ ಗೂಂಡಾ ಪಡೆ ಪತ್ರಿಕೆ ಮಾರದಂತೆ ಏಜೆಂಟರುಗಳಿಗೆ ಬೆದರಿಕೆ ಹಾಕಿತು. ಬಹುತೇಕ ಕಡೆಗಳಲ್ಲಿ ಸಾವಿರಾರು ಪ್ರತಿಗಳನ್ನು ಹಣತೆತ್ತು ಖರೀದಿಸಲಾಗಿತ್ತು. ಈ ಬಗ್ಗೆ ನಾನಾ ಕಡೆಗಳಿಂದ ಮಾಹಿತಿ ಬಂದದ್ದೇ ನಮ್ಮ ಬಳಗ ಎರಡುಮೂರು ಸಲ ಮರುಮುದ್ರಣ ಮಾಡಿ ಪ್ರತಿಗಳನ್ನು ಜನರಿಗೆ ತಲುಪಿಸುವಲ್ಲಿ ಯಶಸ್ವಿಯಾಯಿತು.

ಇದು ನಾರಾಯಣ ಗೌಡ ಆರ್ಥಿಕವಾಗಿ ಕೊಬ್ಬಿರುವ ಪ್ರಮಾದಕ್ಕೆ ಸಾಕ್ಷಿಯೂ ಹೌದು. ಈತ ರಾಜ್ಯಾದ್ಯಂತ ಸಾವಿರಾರು ಪತ್ರಿಕೆಗಳನ್ನು ಖರೀದಿಸಿ ಮುಚ್ಚಿಡುತ್ತಾನೆಂದರೆ ಹಡಬೆ ಹಣದ ಪ್ರಮಾಣ ಎಷ್ಟಿರಬಹುದು? ಯೋಚಿಸಿ ನೋಡಿ. ಇದರ ಹಿಂದಿರುವ ಸತ್ಯಕ್ಕೆ ಸಮಾಧಿ ತೋಡುವ ಸರ್ವಾಧಿಕಾರಿ ಮನೋಭಾವವೂ ಸಹ ಗಮನೀಯ. ಸದ್ಯ ಇದು ನಾರಾಯಣ ಗೌಡ ತನ್ನ ವಿರುದ್ಧದ ದನಿ ಅಡಗಿಸಲು ಉಪಯೋಗಿಸುತ್ತಿರುವ ಅಸ್ತ್ರವೂ ಹೌದು.

ಅಷ್ಟಕ್ಕೂ ಪತ್ರಿಕೆ ಎತ್ತಿರುವ ಪ್ರಶ್ನೆಗಳು ಕನ್ನಡಿಗರ ಮನದಿಂಗಿತದ ಪ್ರತೀಕದಂತಿದೆ. ಅದು ಪತ್ರಿಕಾ ಧರ್ಮದ ಪರಿಧಿಯಲ್ಲಿ ನಿಂತು ಅನ್ಯಾಯವನ್ನು ಪ್ರಶ್ನಿಸುವುದರ ಪ್ರತೀಕ. ಕಾವೇರಿ ವಿವಾದದ ಸಂದರ್ಭದಲ್ಲಿ, ಹೊಗೇನಕಲ್ , ಬೆಳಗಾವಿ ಮುಂತಾದ ಗಡಿ ವಿವಾದಗಳ ಸಂದರ್ಭದಲ್ಲಿ 'ಹೋರಾಡಿ'ದ ನಾರಾಯಣ ಗೌಡ, ರೆಡ್ಡಿಗಳ ಅಕ್ರಮಗಳ ಬಗೆಗೇಕೆ ತೆಪ್ಪಗಿದ್ದಾನೆಂಬುದು ನಮ್ಮ ಪ್ರಶ್ನೆಯಾಗಿತ್ತು. ಕನ್ನಡಿಗರೆಲ್ಲರಿಗೆ ಉತ್ತರಿಸುವ ದರ್ದು, ಜವಾಬ್ದಾರಿಗಳನ್ನೆಲ್ಲ ತಿಪ್ಪೆಗೆಸೆದ ನಾರಾಯಣಗೌಡ ಬ್ಲಾಕ್‌ಮೇಲ್ ತಂತ್ರಗಾರಿಕೆ ಉಪಯೋಗಿಸಿ ಪ್ರಶ್ನೆಗಳನ್ನೇ ಹತ್ತಿಕ್ಕುವ ಪ್ರಯತ್ನ ನಡೆಸಿ ನಗೆಪಾಟಲಿಗೀಡಾಗಿದ್ದಾನೆ.

ಇನ್ನು ಈತ ಕನ್ನಡ ಪರ ಹೋರಾಟದ ಹೆಸರಲ್ಲಿ ಮಾಡಿಕೊಂಡಿರುವ ಇಡುಗಂಟಿನ ವಿಚಾರಕ್ಕೆ ಬಂದರೆ, ಇವನ ದಂಧೆ-ದಗಲ್ಬಾಜಿಗಳು ಹಾಗೂ ಬೇನಾಮಿ ಆಸ್ತಿಗಳೆಲ್ಲದರ ಬಗ್ಗೆ ದಂಡಿದಂಡಿ ದಾಖಲೆಗಳಿವೆ. ಇರುವ ದಾಖಲೆಗಳನ್ನೆಲ್ಲಾ ಹರಡಿಕೊಂಡು ಅದರ ಪ್ರಮಾಣ ನೋಡಿ ದಂಗಾಗುವ ಹೊತ್ತಿಗಾಗಲೇ ನಾಡಿನ ನಾನಾ ಭಾಗಗಳಿಂದ ಕೆಲಮಂದಿ ಇನ್ನಷ್ಟು ದಾಖಲೆ-ಮಾಹಿತಿಗಳನ್ನು ರವಾನಿಸು ತ್ತಿದ್ದಾರೆ.

ಇಲ್ಲಿ ಗಮನಿಸಲೇಬೇಕಾದ ಅಂಶವೊಂದಿದೆ. 'ಪತ್ರಿಕೆ'ಯಲ್ಲಿ ಈತನ ಜಾತಕದ ಹೀನ ಸುಳಿಗಳು ಬಚ್ಚಿಕೊಳ್ಳುತ್ತಲೇ ನಾರಾಯಣ ಗೌಡ ತಲೆಕೆಡಿಸಿಕೊಂಡಿದ್ದು ಕನ್ನಡಿಗರೆದುರು ಬೆತ್ತಲಾಗಬೇಕಾಯ್ತಲ್ಲ ಅಂತಲ್ಲ, ಬದಲಾಗಿ ತನ್ನದೇ ಕಾರ್ಯ ಕರ್ತರಿಗೆ ನಿಜ ಗೊತ್ತಾದರೆ ಏನು ಗತಿಯೆಂಬ ಧಾವಂತದಿಂದ!

ಇದರರ್ಥ ಈ ಎತ್ತುವಳಿ ವೀರ ನಾರಾಯಣ ಗೌಡ ಕನ್ನಡಿಗರನ್ನಷ್ಟೇ ಯಾಮಾರಿಸುತ್ತಿಲ್ಲ, ತನ್ನದೇ ಕಾರ್ಯಕರ್ತರನ್ನೂ ವಂಚಿಸುತ್ತಿದ್ದಾನೆ. ಇಂದಿಗೂ ಈತನ 'ಓರಾಟ'ಗಳ ಹೊಡೆತಕ್ಕೆ ಸಿಕ್ಕ ಅನೇಕ ಮುಗ್ಧ ಕಾರ್ಯಕರ್ತರು ಕಂಬಿ ಹಿಂದಿದ್ದಾರೆ. ಈ ಗೌಡ ಅದೆಂಥಾ ಕಿಲಾಡಿಯೆಂದರೆ, 'ನಾರಾಯಣ ಗೌಡ ಕಾರ್ಯಕರ್ತರನ್ನು ಜೈಲಿಗೆ ಕಳಿಸಿ ತಾನು ಬಚಾವಾಗ್ತಾನೆ' ಎಂಬಂಥ ಆರೋಪ ಬಂದಾಗಲೆಲ್ಲಾ 'ನಾನೂ ಒಳಿಕ್ಕೋದ್ರೆ ಅವ್ರುನ ಬಿಡಿಸೋರ್‍ಯಾರು' ಅಂತ ಆಪತ್ಬಾಂಧವನ ಪೋಸು ಕೊಡುತ್ತಾನೆ! ಈತ ಖಂಡಿತ ವಾಗಿಯೂ ಕಾರ್ಯಕರ್ತರನ್ನು ಎತ್ತುವಳಿಯ ಅಸ್ತ್ರದಂತೆಯೇ ಬಳಸಿಕೊಳ್ಳುತ್ತಾ ಬಂದಿದ್ದಾನೆ. ದುರಂತವೆಂದರೆ ಬಹುತೇಕ ಕಾರ್ಯಕರ್ತಗಿದು ಅರ್ಥವಾಗುತ್ತಿಲ್ಲ.

ತನ್ನೊಳಗೆ ಇಷ್ಟೆಲ್ಲಾ ಹುಳುಕುಗಳನ್ನಿಟ್ಟುಕೊಂಡಿರುವ ನಾರಾಯಣ ಗೌಡ ತನ್ನ ವ್ಯಕ್ತಿತ್ವದ ಕೊಳಕನ್ನು ಇತರರಿಗೂ ಆರೋಪಿಸಿ ಬಚಾವಾಗಲೆತ್ನಿಸುತ್ತಿರುವುದೀಗ ಬಹಿರಂಗ ಸತ್ಯ. ಒಂದು ಸುಳ್ಳು ಕೇಸು ಜಡಿದಾಕ್ಷಣ ಹೆದರಿ ಕಂಗಾಲಾಗುತ್ತಾರೆ, ಸತ್ಯ ಮುಚ್ಚಿ ಹೋಗುತ್ತದೆಂದುಕೊಂಡಿದ್ದರೆ ಅದು ನಾರಾಯಣಗೌಡನ ಮೂರ್ಖತನವಷ್ಟೆ.

ಕನ್ನಡಪರ ಹೋರಾಟಗಳನ್ನೇ ದಂಧೆಯಾಗಿಸಿಕೊಂಡಿರುವ ಈ ದಗಾಕೋರನಿಗೆ ತಕ್ಕುದಾದೊಂದು ಪಾಠ ಕಲಿಸದಿದ್ದರೆ, ಸತ್ಯ ಬರೆವ ಪತ್ರಕರ್ತರ ಮೇಲೇರಿ ಹೋಗುವ ದುಷ್ಟತನಕ್ಕೊಂದು ಬ್ರೇಕ್ ಹಾಕದಿದ್ದರೆ ಈತ ಕನ್ನಡನಾಡಿಗೆ ಪೀಡೆಯಂತೆ ಅಂಟಿಕೊಳ್ಳುವುದು ನಿಶ್ಚಿತ.

ಪತ್ರಕರ್ತ ಮಿತ್ರರು, ಸಾಹಿತಿಗಳು ಹಾಗೂ ಜನ ಸಾಮಾನ್ಯರು ಈ ಬಗ್ಗೆ ಇನ್ನಷ್ಟು ಗಮನಹರಿಸಬೇಕಿದೆ. ●

**ಕರ್ನಾಟಕ ರಕ್ಷಣಾ ವೇದಿಕೆಯ ಒಂದು ತುಂಡಿನ ನಾಯಕ ನಾರಾಯಣ ಗೌಡ 'ಲಂಕೇಶ್' ಬಳಗದ ಮೇಲೆ ವೃಥಾ 'ಬ್ಲಾಕ್‌ಮೇಲ್' ಆರೋಪ ಮಾಡಿ ದೂರು ನೀಡಿರುವುದರ ಬಗ್ಗೆ ವಿವಿಧ ವಲಯಗಳ ಗಣ್ಯರು ವ್ಯಕ್ತಪಡಿಸಿದ ಅಭಿಪ್ರಾಯಗಳು ಇಲ್ಲಿವೆ.**



"ನಾರಾಯಣ ಗೌಡನ ದುಷ್ಕೃತನಗಳ ವಿರುದ್ಧ ಬಹುತೇಕರು ಸೊಲ್ಲೆತ್ತಲು ಹೆದರುತ್ತಿದ್ದರು. ಆದರೆ 'ಲಂಕೇಶ್' ದಿಟ್ಟತನದಿಂದ ಅನ್ಯಾಯವನ್ನು ಪ್ರಶ್ನಿಸುವ ಕೆಲಸ ಮಾಡಿದೆ. ಇದಕ್ಕೆ ಬ್ಲಾಕ್‌ಮೇಲ್‌ನಂಥ ಸುಳ್ಳು ಆರೋಪ ಹೊರಿಸಿ ಸತ್ಯದ ದನಿ ಹತ್ತಿಕ್ಕಹೊರಡುವುದು ಖಂಡಿತಾ ತಪ್ಪು. ನಾರಾಯಣ ಗೌಡ ಒಬ್ಬ ಕ್ರಿಮಿನಲ್. ಪತ್ರಿಕೆಯ ವಿರುದ್ಧದ ಸುಳ್ಳು ಕಂಪ್ಲೇಂಟ್‌ಗೆ ಮಾನ್ಯತೆ ನೀಡುವ ಪೊಲೀಸರು ನಾರಾಯಣ ಗೌಡನ ವಿರುದ್ಧವಿರುವ ದೂರಗಳತ್ತ ಗಮನಹರಿಸಬೇಕಿದೆ."

-ಪ್ರವೀಣ್ ಶೆಟ್ಟಿ,
ಕರ್ನಾಟಕ ರಕ್ಷಣಾ ವೇದಿಕೆ

"ಇದು ಆಘಾತಕಾರಿ ಬೆಳವಣಿಗೆ. ಪತ್ರಿಕೆಗಳು ಬರೆದಿದ್ದರಲ್ಲಿ ಸತ್ಯವನ್ನು ಒಪ್ಪಿಕೊಂಡು, ಸುಳ್ಳಿದ್ದದ್ದೇ ಆದಲ್ಲಿ ಕಾನೂನು ಕ್ರಮ ತೆಗೆದುಕೊಳ್ಳಬೇಕಾದದ್ದು ಸಭ್ಯತೆ. ಆದರೆ ಸತ್ಯದ ವಿರುದ್ಧವೇ ಸಂಚು ನಡೆಸಿ ಪೊಲೀಸ್ ಕೇಸ್ ಹಾಕುವುದೆಲ್ಲಾ ಖಂಡಿತಾ ತಪ್ಪು"

-ವೆಂಕಟಸ್ವಾಮಿ, ಸಮತಾ ಸೈನಿಕ ದಳ

"ರಕ್ಷಣಾ ವೇದಿಕೆಯ ನಾರಾಯಣಗೌಡನ ಪ್ರವರಗಳೇನೂ ಹೊಸತಲ್ಲ, ಈ ಸಂಘಟನೆಯ ಪದಾಧಿಕಾರಿಗಳೆಲ್ಲ ರೋಲ್‌ಕಾಲ್ ದಂಧೆಯಲ್ಲೇ ಮುಳುಗಿದವರೇ. ಮೊನ್ನೆ ಮಂಡ್ಯದಲ್ಲಿ ಇಂಥಾದ್ದೇ ಕಸುಬು ಕರವೇ ಕಡೆಯಿಂದ ನಡೆದಿದೆ. ಇದೆಲ್ಲದರಿಂದ ಹೇಗಾಗಿದೆಯೆಂದರೆ ಕನ್ನಡಪರ ಸಂಘಟನೆಗಳೆಲ್ಲ ಇದೇ ತರಹ ಎಂಬ ಮನೋಭಾವ ಬೆಳೆಯುತ್ತಿದೆ. ಆದರೆ ಕರವೇಯದ್ದು ಕನ್ನಡಪರ ಹೋರಾಟ ಅಲ್ಲವೇ ಅಲ್ಲ, ಇದನ್ನ ಅರ್ಥೈಸಿಕೊಂಡು ಕನ್ನಡಿಗರು ಈ ಸಂಘಟನೆಯನ್ನು ದೂರ ಇಡಬೇಕಿದೆ. 'ಪತ್ರಿಕೆ'ಯ ಜೊತೆಗೆ ನಾವಿದ್ದೇವೆ."



-ಡಾ.ಎಚ್.ವಿ.ವಾಸು,
ಕರ್ನಾಟಕ ಜನಪರ ವೇದಿಕೆ

"ನಾರಾಯಣಗೌಡನ ಬಗ್ಗೆ ಈ ಹಿಂದೆಯೂ ಬೇರೆ ಬೇರೆ ಪತ್ರಿಕೆಗಳೂ ಸತ್ಯ ಬರೆದಿವೆ. ಇದೀಗ ಆ ಕೆಲಸವನ್ನು 'ಲಂಕೇಶ್' ಕೂಡಾ ಮಾಡಿದೆ. ಆದರೆ ನಾರಾಯಣ ಗೌಡ ಸತ್ಯದಿಂದ ತಪ್ಪಿಸಿಕೊಳ್ಳಲು ಸುಳ್ಳು ದೂರು ನೀಡಿ ನಾಟಕವಾಡುತ್ತಿದ್ದಾನೆ. ಇದರಲ್ಲಿ ಎಳ್ಳಷ್ಟು ಸತ್ಯವಿಲ್ಲವೆಂಬುದು ಎಲ್ಲರಿಗೂ ಮನವರಿಕೆಯಾಗಿದೆ. ಈ ರೀತಿ ಪತ್ರಿಕಾ ಸ್ವಾತಂತ್ರ್ಯ ಹತ್ತಿಕ್ಕಿ ಸತ್ಯ ಮುಚ್ಚಿಡುವ ಪ್ರಯತ್ನ ಖಂಡನೀಯ."

-ಶಿವರಾಮೇಗೌಡ,
ಕರ್ನಾಟಕ ರಕ್ಷಣಾ ವೇದಿಕೆ

## ಪೊಲೀಸರ ಪಡಪೋಶಿ ಕ್ರಮ

ಪತ್ರಿಕೆ'ಯ ಹಿರಿಯ ವರದಿಗಾರ ಪಾರ್ವತೀಶ್‌ರ ಮೇಲೆ ಕರವೇ ಂದ ದೂರು ದಾಖಲಾಯಿತಲ್ಲಾ? ಇದರ ಸುತ್ತಲ ಘಟನಾವಳಿಗಳು ಂಡ್ಸ್ ಠಾಣೆಯ ಪೊಲೀಸರ ಬಗ್ಗೆ ಹಲವಾರು ಪ್ರಶ್ನೆಗಳನ್ನು ಸೃಷ್ಟಿಸಿದೆ. ರವೇ ಕಡೆಯಿಂದ ಅದ್ಯಾರೋ ದೂರು ಕೊಟ್ಟಾಕ್ಷಣ ಹಿಂದುಮುಂದು ದ ಖಾಕಿ ಪಡೆ ಎಫ್‌ಐಆರ್ ಬರೆದು ಬಿಸಾಡಿ ಬಿಟ್ಟಿದೆ. ಯಾರಾದರೂ ನೀಡಿದ ಸಂದರ್ಭದಲ್ಲಿ ಯಾರು ಯಾರ ಮೇಲೆ ಆಪಾದನೆ ಮಾಡಿದ್ದಾರೆ, ಸ್ಥಾನಿಕವಿದೆಯಾ ಮುಂತಾದವುಗಳ ಬಗೆಗೆ ಪರಾಮರ್ಶಿಸಬೇಕಾಗುತ್ತದೆ. ಗೆ ಆರೋಪಿ ಸ್ಥಾನದಲ್ಲಿರುವವರೊಂದಿಗೂ ಮಾತನಾಡಿ ಸತ್ಯಾಸತ್ಯತೆ ಕೊಳ್ಳಬೇಕಾಗುತ್ತದೆ. ಯಾಕೆಂದರೆ ಈ ಅವಧಿಯಲ್ಲಿ ಪ್ರಕರಣದ ಸತ್ಯಾಸತ್ಯತೆ, ಗಂಭೀರತೆ ಅರ್ಥವಾಗಿ ಎಫ್‌ಐಆರ್ ಹಂತಕ್ಕೆ ಹೋಗಬೇಕೇ ಇಲ್ಲವೇ ಎಂಬುದರ ಬಗ್ಗೆ ನಿರ್ಧರಿಸಬಹುದಾಗಿದೆ.

ಆದರೆ ಈ ಪ್ರಕರಣದಲ್ಲಿ ಪೊಲೀಸರು ಇಂಥ ಯಾವುದೇ ನಡಾವಳಿಗಳನ್ನು ಪಾಲಿಸಿಲ್ಲ, ಯಾವುದೋ ಒತ್ತಡಕ್ಕೆ ಸಿಲುಕಿದ ಧಾವಂತದಲ್ಲಿ ಎಲ್ಲವನ್ನೂ ಮಾಡಿ ಮುಗಿಸಿದ್ದಾರೆ.


ಇದು ಪತ್ರಿಕಾ ಸ್ವಾತಂತ್ರ್ಯವನ್ನು ಹತ್ತಿಕ್ಕಿದಂತಾಗಿಲ್ಲವೆ? ಅಷ್ಟಕ್ಕೂ ಬರೆದ ಮಾಹಿತಿಯಲ್ಲಿ ವ್ಯತ್ಯಾಸವಿದ್ದರೆ, ಬೇರಾವುದಾದರೂ ಅವಘಡಗಳಾಗಿದ್ದರೆ ಕಾನೂನು ಕ್ರಮ ಜರುಗಿಸಲು ಬೇಕಾದಷ್ಟು ದಾರಿಗಳಿವೆ. ಆದರೆ ಸತ್ಯ ಬರೆದಾಗ ವಿನಾಕಾರಣ ಬ್ಲಾಕ್‌ಮೇಲ್‌ನಂಥ ಆರೋಪ ಹೊರಿಸುವುದು ಸತ್ಯದ ಕತ್ತು ಹಿಸುಕುವ ಹುನ್ನಾರವಲ್ಲವೇ?

ಬಲಾಢ್ಯರ ವಿರುದ್ಧ ಸತ್ಯದ ಪರಿಧಿಯಲ್ಲೇ ಒಂದು ದೂರು ಕೊಟ್ಟರೂ ಬಹುತೇಕ ಠಾಣೆಗಳವರು ಮುಟ್ಟಲೂ ಹಿಂದುಮುಂದು ನೋಡುತ್ತಾರೆ. ಆದರೆ ಪತ್ರಿಕೆಯೊಂದರ ವಿರುದ್ಧ ನಡೆದ ಸಂಚಿನ ಬಗೆಗೇಕೆ ಪೊಲೀಸರು ಗಮನಹರಿಸಿಲ್ಲ?

ಇದಿಷ್ಟು ಆಯುಕ್ತ ಶಂಕರ್ ಬಿದರಿಯವರು ಉತ್ತರಿಸುವ ತುರ್ತಿರುವ ಪ್ರಶ್ನೆಗಳು. ಅವರು ಈ ಪ್ರಕರಣದ ಹಿಂದಿರುವ ದುರುದ್ದೇಶ ಅರ್ಥೈಸಿಕೊಂಡು ಇಲ್ಲಿಗೇ ಕೊನೆಗಾಣಿಸಿದರೆ ಒಳಿತು. ಇಲ್ಲದಿದ್ದರೆ ಪತ್ರಿಕಾ ಮಾಧ್ಯಮದ ದನಿ ಉಡುಗಿಸುವ ದುಷ್ಕಾರ್ಯದಲ್ಲಿ ಅವರೂ ಪಾಲುದಾರರಾದಂತಾಗುತ್ತದೆ.

ಅಷ್ಟಕ್ಕೂ ಪೊಲೀಸರ ಈ ದುಡುಕಿನ ಕ್ರಮ ಯಾವ ಕೋನದಲ್ಲಾದರೂ ಸರಿ ಅನ್ನಿಸುತ್ತದೆಯೇ?


# ಉತ್ತರ ಕನ್ನಡ
# ಜನಪರ ಜಿಲ್ಲಾಧಿಕಾರಿ ಎತ್ತಂಗಡಿಗೆ ಎಡವಟ್ಟು ಮಂತ್ರಿದ್ವಯರ ಮಸಲತ್ತು


ಅಮರನಾರಾಯಣ್

ಉತ್ತರ ಕನ್ನಡವೆಂಬ ನತದೃಷ್ಟ ಜಿಲ್ಲೆಗೆ ಅದು ಹೆತ್ತಿರುವ ಬುರ್ನಾಸ್ ಮಂತ್ರಿದ್ವಯರೇ ಶಾಪವಾಗಿದ್ದಾರೆ! ಕರ್ಮಗೇಡಿತನ, ಕುಬ್ಜತೆಗಳೇ ಮೈವೆತ್ತಂತಿರುವ ಕಾಗೇರಿ ಮಾಣಿ ಮತ್ತು ಅಸ್ನೋಟಿಕರ್ ಪೋರನ ಹಸೀ ಸುಳ್ಳು ಮತ್ತು ಹಪಾಹಪಿಗಳು ಜಿಲ್ಲೆಗೆ ಮಾರಕವಾಗಿ ಪರಿಣಮಿಸಿದೆ!! ಆಳುವವರ ನಿರಂತರ ಉಪೇಕ್ಷೆಗೆ ತುತ್ತಾಗುತ್ತಾ ಬಂದ ಉತ್ತರ ಕನ್ನಡಕ್ಕೆ ಈ ಅನಿಷ್ಟ ಮಂತ್ರಿಗಳಿಂದ ಒಳ್ಳೆಯದಾಗುವುದಿರಲಿ, ಒಂದರ ಹಿಂದೊಂದರಂತೆ ಕೆಟ್ಟದ್ದೇ ಆಗುತ್ತಿದೆ. ರಣಹಸಿವಿನ ಚೆಡ್ಡಿಗಳ ಪರ್ವದಲ್ಲಂತೂ ಉತ್ತರ ಕನ್ನಡವೆಂಬುದು ಬಿರುಗಾಳಿಗೆ ಸಿಲುಕಿದ ದೋಣಿಯಂತಾಗಿ ಹೊಯ್ದಾಡುತ್ತಿದೆ!


ಜಿಲ್ಲಾ ಉಸ್ತುವಾರಿ ಮಂತ್ರಿ ವಿಶ್ವೇಶ್ವರ ಹೆಗಡೆ ಕಾಗೇರಿ ಮತ್ತು ಕಾರವಾರದ ಆನಂದ್ ಅಸ್ನೋಟಿಕರ್ ಬದ್ಧವೈರಿಗಳು. ಆದರೆ ತಮ್ಮ ಟೊಳ್ಳುತನ-ಢೋಂಗಿತನ ಬಯಲಾಗುವ ಸಮಯ ಬಂದರೆ ಅದ್ಹೆಷ್ಟೊತ್ತಿಗಾದರೂ ಈ ಮಾನಗೇಡಿಗಳು ಅನೈತಿಕ ಮೈತ್ರಿ ಕುದುರಿಸಿಕೊಂಡು ಬಿಡಬಲ್ಲರು! ಪಕ್ಕಾ ಗುಳ್ಳೆನರಿಯಂಥ ಕಾಗೇರಿಗೆ ಸ್ವಕ್ಷೇತ್ರ ಶಿರಸಿ-ಸಿದ್ದಾಪುರವೇ ಇಡೀ ಉತ್ತರ ಕನ್ನಡವಾದರೆ, ಭಾನ್ಗಡಿ ಭೂಪ ಆನಂದ್ ಅಸ್ನೋಟಿಕರ್‌ಗೆ ಕಾರವಾರ-ಅಂಕೋಲಾ ಬಿಟ್ಟರೆ ಉಳಿದ ತಾಲ್ಲೂಕುಗಳ ಹೆಸರೂ ಸಹ ಗೊತ್ತಿಲ್ಲ, ಈ ಹೇತ್ಲಾಂಡಿಗಳು ಸ್ವಜೀರ್ಣೋದ್ಧಾರಕ್ಕೆ ಏನೇನು ಬೇಕೋ ಅದೆಲ್ಲ ಮಂತ್ರಿಗಿರಿ ಬಲದಿಂದ ಸಾಧಿಸುತ್ತಿದ್ದಾರೆಯೇ ವಿನಃ ಜಿಲ್ಲೆಯ ಸಮಸ್ಯೆ-ಸಂಕಟ, ಆಗು-ಹೋಗುಗಳ ಬಗ್ಗೆಯಂತೂ ತಲೆಕೆಡಿಸಿಕೊಂಡಿದ್ದಿಲ್ಲ, ಅದವರಿಗೆ ಬೇಕಾಗಿಯೂ ಇಲ್ಲ, ಬಿಡಿ.


ಈ ಪರಮ ಶತ್ರುಗಳು ಅಪರೂಪಕ್ಕೆ ನೈಚ್ಯಾನುಸಂಧಾನ ಮಾಡಿಕೊಂಡಿದ್ದಾರೆ. ಈ ದೋಸ್ತಿ ಜಿಲ್ಲೆಯ ಉದ್ಧಾರಕ್ಕಂತೂ ಅಲ್ಲ; ಜಿಲ್ಲೆಯನ್ನು ಕದಡಿದ ಕೊಳದಂತಾಗಿಸಿ "ಮೀನು" ಹಿಡಿಯಲು ಈ ಅನೈತಿಕ ಮೈತ್ರಿ ಮಾಡಿಕೊಂಡಿದ್ದಾರೆ. ಬರೀ ಮೂರು ತಿಂಗಳ ಹಿಂದಷ್ಟೇ ಜಿಲ್ಲೆಗೆ ಬಂದಿರುವ ಸರಳ-ಕರ್ತವ್ಯ ನಿಷ್ಠ-ಎಂಜಲು ಕಾಸಿಗೆ ಕೈಯೊಡ್ಡದ ಜಿಲ್ಲಾಧಿಕಾರಿ ಕೆ. ಅಮರನಾರಾಯಣರನ್ನು ವರ್ಗಾಯಿಸುವ ಸ್ಕೆಚ್ ಹಾಕಿಕೊಂಡು ಕಾಗೇರಿ-ಅಸ್ನೋಟಿಕರ್ ಕುಟಿಲ ಕಾರ್ಯಾಚರಣೆಗೆ ಇಳಿದಿದ್ದಾರೆ. ಈ ಡಿಸಿ ಜಿಲ್ಲೆಯಲ್ಲಿದ್ದರೆ ತಮ್ಮ ಬೇಳೆ ಬೇಯುವುದಿಲ್ಲ, ಜತೆಗೆ ಅಳಿದುಳಿದ ಇಮೇಜೂ ಮಣ್ಣು ಪಾಲಾಗುತ್ತದೆಂಬ ಆತಂಕದಿಂದ ಈ ಮಂತ್ರಿಗಳು ಅವರನ್ನು ಎತ್ತಂಗಡಿ ಮಾಡಿಸುವ ಆಟ ಆರಂಭಿಸಿಕೊಂಡಿದ್ದಾರೆ.



ತಮಾಷೆಯೆಂದರೆ ಶೋಮ್ಯಾನ್‌ಗಳಾದ ಕಾಗೇರಿ-ಅಸ್ನೋಟಿಕರ್ ತಮ್ಮಲ್ಲಿರುವ ತೆವಲು-ತರಲೆಗಳನ್ನೇ ಡಿಸಿ ಅಮರನಾರಾಯಣರ ಮೇಲೆ ಆರೋಪಿಸಿ ಓಡಿಸುವ ಮಸಲತ್ತು ಮಾಡುತ್ತಿದ್ದಾರೆ. ವಿಪರೀತ ಪ್ರಚಾರ ಹುಚ್ಚಿರುವುದು ಕಾಗೇರಿ-ಅಸ್ನೋಟಿಕರ್‌ಗೆ! ಆದರೆ ಐಎಎಸ್ ಠೇಂಕಾರ, ಆಡಂಬರಗಳಿಲ್ಲದ ಡಿಸಿಯ ಕರ್ಮಚಾರಿ ಗುಣ, ದಕ್ಷತೆಗಳನ್ನೇ ಈ ಮಂತ್ರಿಗಳಿಬ್ಬರು ಆತನ ಪ್ರಚಾರದ ಗಿಮಿಕ್ ಎಂದು ಪರಿಗಣಿಸಿದ್ದಾರೆ. ಇದನ್ನೇ ಆತನ ವರ್ಗಾವಣೆಗೆ ಕುಂಟು ನೆಪವಾಗಿಸಿಕೊಂಡು ಅಟ್ಟಹಾಸ ಗೈಯ್ಯುತ್ತಿದ್ದಾರೆ.

ಕಾಗೇರಿ-ಅಸ್ನೋಟಿಕರ್‌ಗಳ ಸುದ್ದಿ ಶೂರತ್ವ ಒಂದೆರಡು ಥರವಲ್ಲ. ಈ ಕಳ್ಳಾಟದ ಸಚಿವ ಶಿಖಾಮಣಿಗಳು ದಿನಕ್ಕೊಂದರಂತೆ ಹಸಿ-ಹಸೀ ಸುಳ್ಳುಗಳ ಜಾಹೀರಾತುಗಳನ್ನು ತರಹೇವಾರಿ ಲೈಫ್ ಸೈಜಿನ ಸ್ವಫೋಟೋಗಳ ಸಮೇತ ಪತ್ರಿಕೆಗಳಿಗೆ ಕೊಡುತ್ತಿರುವುದು ಮತ್ತು ಸ್ವರತಿಯ ಭಾಷಣ ಕುಟ್ಟುತ್ತಿರುವುದು ಇಡೀ ಜಿಲ್ಲೆಯಲ್ಲಿ ಅಸಹ್ಯ ಮೂಡಿಸಿಬಿಟ್ಟಿದೆ! ಇವರೆಂಥ ಕೊಳಕರೆಂದರೆ, ಪ್ರಕೃತಿ ವಿಕೋಪದಲ್ಲಿ ಸತ್ತವರ ಮನೆಗ್ಹೋಗಿ ಸರ್ಕಾರಿ ಪರಿಹಾರದ ಚೆಕ್ ಕೊಡುವಾಗ ಹಲ್ಲು ಕಿರಿದು ಫೋಟೋ ಹೊಡೆಸಿಕೊಂಡು ಪೇಪರ್, ಟಿವಿಗಳಲ್ಲಿ ಹಾಕಿಸಿಕೊಂಡು ಸಂಭ್ರಮಿಸುತ್ತಿದ್ದಾರೆ. ಸರ್ಕಾರಿ ಅನುದಾನ ತಮ್ಮ ಪರ್ಸೆಂಟೇಜು ದಂಧೆಗೆ ಅನುಕೂಲವಾಗುವಂಥ ಕಾಮಗಾರಿಗೆ ಬಿಡುಗಡೆ ಮಾಡಿ, ಆ ದುಡ್ಡು ತಮ್ಮಪ್ಪನ ಮನೆಯಿಂದ ಕೊಟ್ಟಂತೆ ಭಾಸವಾಗುವ ಜಾಹೀರಾತುಗಳನ್ನು ವಂಧಿಮಾಗಧರಿಂದ ಕೊಡಿಸುತ್ತಿದ್ದಾರೆ. ಮುನ್ಸಿಪಾಲಿಟಿ, ಗ್ರಾಮ ಪಂಚಾಯ್ತಿಗಳ ಕಕ್ಕಸು-ಗಟಾರ ಉದ್ಘಾಟನೆಗೂ ಅತ್ತೂ ಕರೆದೂ ಕರೆಸಿಕೊಂಡು ಅಭಿವೃದ್ಧಿ ಹರಿಕಾರರಂತೆ ಬೀಗುತ್ತಿದ್ದಾರೆ.


ಅಸ್ನೋಟಿಕರ್


ಕಾಗೇ[illegible]

ಇಂಥ ಕೀಳುಮಟ್ಟದ ಹಾರಾಟಗಾರ ಕಾಗೇರಿ-ಅಸ್ನೋಟಿಕರ್‌ಗೆ ಜಿಲ್ಲಾಧಿಕಾರಿ ಅಮರನಾರಾಯಣ ಮಳೆಯಲ್ಲಿ ಕಂಬಳಿ ಕೊಪ್ಪೆ ಹಾಕಿಕೊಂಡು ಅರಲು ಗದ್ದೆಗಿಳಿದು ನಾಟಿ ಮಾಡಿ ರೈತಾಪಿಯಿಂದ ವಿಮುಖರಾಗುತ್ತಿರುವ ಮಂದಿಗೆ ಕೃಷಿಯತ್ತ ಸೆಳೆಯಲು ಮಾಡಿದ ಪ್ರಯತ್ನ ಪ್ರಚಾರದ ಗೀಳಾಗಿ ಕಂಡಿದೆ. ಕಾರವಾರದ ಮಿನಿ ವಿಧಾನಸೌಧದ ಕಸ-ಕೊಳೆ ಸ್ವತಃ ಕಸಬರಿಗೆ ಹಿಡಿದು ಗುಡಿಸಿ ಸ್ವಚ್ಛ ಮಾಡಿದ ಸರಳತೆ ಕಾಮಾಲೆ ಕಣ್ಣಿನ ಮಂತ್ರಿಗಳಿಗೆ ತಮ್ಮನ್ನು ಓವರ್‌ಟೇಕ್ ಮಾಡಿದ ಪ್ರಮಾದದಂತೆ ಮುಖಕ್ಕೆ ರಾಚಿದೆ! ಅಷ್ಟಕ್ಕೂ ಇದೆಲ್ಲ ಅಮರನಾರಾಯಣ ಕಾಗೇರಿ-ಅಸ್ನೋಟಿಕರ್‌ರಂತೆ ಮೊದಲೇ ತಿಳಿಸಿ ಮಾಡಿದ ನಾಟಕವಲ್ಲ, ಈ ಕೆಲಸಗಳೆಲ್ಲ ಮುಗಿದ ನಂತರ ಮಾಧ್ಯಮದವರು ಸುದ್ದಿ ಮಾಡಿದ್ದಾರಷ್ಟೇ.

ಡಿಸಿ ಅಮರನಾರಾಯಣರ ಈ 'ಅಪರಾಧ'ಗಳ ಜೊತೆ ಆತ ಪ್ರಸ್ನಾತೀತ ಮಂತ್ರಿಗಳ ಕೇರ್ ಮಾಡದ 'ಉದ್ಧಟ'ನೆಂಬ ಹುಸಿ ಅಪವಾದ ಹೊರಿಸಿ ಕಾಗೇರಿ-ಅಸ್ನೋಟಿಕರ್ ಹಿತ್ತಾಳೆ ಕಿವಿಯ ಸಿಎಂ ಯೆಡ್ಡಿ ಮಹಾತ್ಮನಿಗೆ ಚಾಡಿ ಹೇಳಿದ್ದಾರೆ. "ಸರ್, ಈ ಡಿಸಿ ಜಿಲ್ಲೆಯಲ್ಲಿದ್ದರೆ ಸರ್ಕಾರ-ಸಚಿವರಿಗಿಂತ ಆತನೇ ಫೇಮಸ್ ಆಗ್ತಾನೆ... ಜನರಿಗೆ ನಮ್ಮ ಬಂಡವಾಳ ಗೊತ್ತಾಗುತ್ತದೆ...." ಅಂತ ಮಂತ್ರಿಯಾಗುವ ಕ್ಯಾಲಿಬರ್ ಇಲ್ಲದ ಕಾಗೇರಿ-ಅಸ್ನೋಟಿಕರ್ ಅಲವತ್ತುಕೊಂಡಿದ್ದಾರೆ. ಅದಕ್ಕೆ ಭಸ್ಮಾಸುರ ಬುದ್ಧಿಯ ಯೆಡ್ಡಿ "ತಥಾಸ್ತು ಮಕ್ಕಳೇ....!" ಎಂದಿದ್ದಾರೆಂಬ ವರ್ತಮಾನವೀಗ ಜಿಲ್ಲೆಯ ಉದ್ದಗಲಕ್ಕೆ ತೇಲಾಡುತ್ತಿದೆ.

ಇದು ಕಾಗೇರಿ-ಅಸ್ನೋಟಿಕರ್ ಗ್ಯಾಂಗ್ ಅಮರನಾರಾಯಣರ ಟ್ರಾನ್ಸ್‌ಫರ್‌ಗೆ ಕೊಡುತ್ತಿರುವ ಬಹಿರಂಗ ಸಬೂಬು. ಆದರೆ ಒಳಗುಟ್ಟೇ ಬೇರೆ. ಅಮರನಾರಾಯಣ ಜಿಲ್ಲೆಗೆ ಡಿಸಿಯಾಗಿ ಬಂದು ಬರೀ ಮೂರೇ ಮೂರು ತಿಂಗಳು ಕಳೆದಿದೆಯಷ್ಟೇ. ಈ ಅಲ್ಪ ಅವಧಿಯಲ್ಲಿ ಕರ್ತವ್ಯಪ್ರಜ್ಞೆ, ಜನಪರ ತುಡಿತ, ಸಮಸ್ಯೆಗಳನ್ನು ಗ್ರಹಿಸಿ ಪರಿಹರಿಸಲು ಪ್ರಯತ್ನಿಸುವ ಪರಿ, ಐಎಎಸ್ ದರ್ಪ-ದೌಲತ್ತುಗಳಿಲ್ಲದೆ ಜನಸಾಮಾನ್ಯರೊಂದಿಗೆ ಬೆರೆಯುವುದೆಲ್ಲ ಜನ ಮೆಚ್ಚಿಕೆ ಗಳಿಸಿಬಿಟ್ಟಿದೆ! ಇದೆಲ್ಲಕ್ಕಿಂತ ಹೆಚ್ಚಾಗಿ ಡಿಸಿಯ ಅರ್ಪಣಾಭಾವದ ಡ್ಯೂಟಿ ಕಾಗೇರಿ-ಅಸ್ನೋಟಿಕರ್ ಅದೆಂಥ ದಂಡಪಿಂಡ ಮಂತ್ರಿಗಳೆಂಬುದನ್ನು ಸ್ಪಷ್ಟಪಡಿಸಿದೆ. ಇಚ್ಛಾಶಕ್ತಿಗಳೇ ಇಲ್ಲದ ದುರ್ಬಲ ಕಾರ್ಯವೈಖರಿಯ ಈ ಸಚಿವಾಗ್ರೇಸರಿಂದಾಗದ ಹಲವು ಹಳೆಯ ಕೆಲಸ, ಕಾಮಗಾರಿಗಳನ್ನು ಡಿಸಿ ಅಮರನಾರಾಯಣ ದಿಟ್ಟತನದಿಂದ ಮಾಡುತ್ತಿದ್ದಾರೆ. ಇದು ಮುಖೇಡಿ ಕಾಗೇರಿ-ಅಸ್ನೋಟಿಕರ್ ಕುಂಡೆಗೆ ಹಸಿ ಮೆಣಸಿನ ಖಾರ ಅರೆದಂತಾಗಿದೆ...

ಕಾರವಾರ-ಅಂಕೋಲಾದ ಸೀಬರ್ಡ್ ನೌಕಾನೆಲೆ ನಿರಾಶ್ರಿತರ ಸಮಸ್ಯೆ ದಶಕಗಳಿಂದ ಬಗೆಹರಿಯದೆ ಸಿಕ್ಕು-ಸಿಕ್ಕಾಗುತ್ತಿದೆ. ಮೂರು ಬಾರಿ ನಿರಾಶ್ರಿತರ ಏರಿಯಾದ ಶಾಸಕನಾಗಿದ್ದ ಸೋಗಲಾಡಿ ಸಂಘ ಪರಿವಾರಿ ಕಾಗೇರಿ ಮಾಣಿ ಈ ಹತಭಾಗ್ಯರತ್ತ ಕಣ್ಣೆತ್ತಿ ನೋಡಿದ್ದಿಲ್ಲ, ಈಗ ಈ ಕ್ಷೇತ್ರ ಗಂಡಾಗುಂಡಿ ಪುಂಡ ಅಸ್ನೋಟಿಕರ್ ಆಳುತ್ತಿದ್ದಾನೆ. ಆತನಿಗಂತೂ ಸೀಬರ್ಡ್ ನಿರಾಶ್ರಿತರೆಂದರೆ ತಾತ್ಸಾರ-ತಿರಸ್ಕಾರ. ಈ ದ್ರೋಹಿಗಳಿಬ್ಬರೂ ಈಗ ಮಂತ್ರಿಗಳಾಗಿದ್ದರೂ ನಿರಾಶ್ರಿತರತ್ತ ಬುದ್ಧಿಪೂರ್ವಕವಾಗೇ ಗಮನಹರಿಸುತ್ತಿಲ್ಲ. ಮಂತ್ರಿಗಳೇ ಕಡೆಗಣಿಸಿರುವ ನಿರಾಶ್ರಿತರ ಸಮಸ್ಯೆ ಪರಿಹರಿಸಲು ಡಿಸಿ ಅಮರನಾರಾಯಣ ಸತತ ಕ್ರಿಯಾಶೀಲರಾಗಿದ್ದರು. ರಕ್ಷಣಾ ಇಲಾಖೆಯ ಎಸ್ಟೇಟ್ ಆಫೀಸರ್‌ನನ್ನು ಕಾರವಾರಕ್ಕೆ ಕರೆಸುವ ಪ್ರಕ್ರಿಯೆ ಆರಂಭಿಸಿದ್ದರು.

ಯಾವುದೇ ಹಮ್ಮು-ಬಿಮ್ಮುಗಳಿಲ್ಲದೆ ಸರ್ಕಾರದ ಭಾಷಾ ನೀತಿಯಂತೆ ಕನ್ನಡವನ್ನು ಆಡಳಿತ ಭಾಷೆ ಮಾಡುವ ಬಗ್ಗೆ ಆಸಕ್ತಿ ವಹಿಸಿದ್ದರು. ಕೃಷಿ ಭೂಮಿ ಬಿನ್‌ಶೇಲ್ಕಿ (ನಾನ್ ಅಗ್ರಿಕಲ್ಚರ್) ಮಾಡುವಾಗ ಭೂಮಾಫಿಯಾಕ್ಕೆ ಕಡಿವಾಣ ಹಾಕಿದ್ದರು. ಅರಣ್ಯ ರಕ್ಷಣೆ-ಕಲ್ಲು ಗಣಿಗಾರಿಕೆ ಬಗ್ಗೆ ಯಾವ ಮುಲಾಜಿಲ್ಲದೆ ಕ್ರಮಕೈಗೊಂಡಿದ್ದರು. ಕಾಗೇರಿ-ಅಸ್ನೋಟಿಕರ್ ಕಚ್ಚಾಟದಿಂದ ನೆರೆ ಪರಿಹಾರ ನಿಧಿ ಲ್ಯಾಪ್ಸ್ ಆಗುವಂತಾದಾಗ ಆ ಹಣ ಅವಶ್ಯವಿರುವ ತಾಲ್ಲೂಕುಗಳಿಗೆ ಕೊಡುವ ಬೋಲ್ಡ್ ನಿರ್ಧಾರ ತಳೆದಿದ್ದರು. ಇದೆಲ್ಲ ಡಿಸಿಗಳನ್ನು ಪಳಗಿಸಿ ತನ್ನ ಮೂಗಿನ ನೇರಕ್ಕೆ ಆಡಳಿತ ಮಾಡುವ ಜಿಲ್ಲಾ ಮಂತ್ರಿ ಕಾಗೇರಿಯ ಹೊಟ್ಟೆಯಲ್ಲಿ ಕಿಚ್ಚು ಹೊತ್ತಿಸಿತ್ತು!!

ಹುಂಬ ಆನಂದ್ ಅಸ್ನೋಟಿಕರ್‌ಗೆ ಡಿಸಿ ಅಮರನಾರಾಯಣರ ಬಗ್ಗಿದ್ದ ಬೇಸರ-ಬೇಗುದಿಯಂತೂ ಪಕ್ಕಾ ಪಾಲಿಟಿಕಲ್! ಮೊನ್ನೆ ನಡೆದ ಕಾರವಾರ ನಗರಸಭೆ ಅಧ್ಯಕ್ಷ ಉಪಾಧ್ಯಕ್ಷರ ಆಯ್ಕೆ ಹೊತ್ತಲ್ಲಿ ಕಾರವಾರ ಮಂತ್ರಿ ಅಸ್ನೋಟಿಕರ್ ಇಕ್ಕಟ್ಟಿಗೆ ಸಿಲುಕಿದ್ದರು. ಈಗ ಬಿಜೆಪಿಯಲ್ಲಿ ಹೆಚ್ಚಿನ ಕೌನ್ಸಿಲರ್‌ಗಳು ಕಾಂಗ್ರೆಸ್ ಚಿಹ್ನೆ ಮೇಲೆ ಆರಿಸಿಬಂದವರು. ಇವರನ್ನೆಲ್ಲ ಅಸ್ನೋಟಿಕರ್ ಬಿಜೆಪಿಗೆ ಹೋಗುವಾಗ ಹೆದರಿಸಿ ಹೈಜಾಕ್ ಮಾಡಿಕೊಂಡು ಹೋಗಿದ್ದಾನೆ. ಈ ಪಕ್ಷಾಂತರಿಗಳು ಸದಸ್ಯತ್ವ ರದ್ದತಿ ಕೇಸ್ ಎದುರಿಸುತ್ತಿದ್ದಾರೆ. ಇವರೆಲ್ಲರ ಆಪರೇಷನ್ ಕಮಲಕ್ಕೆ ಮಾನ್ಯತೆ

▶▶ 9

## ಎಚ್‌ಕ್ಯೂಎ ಮೂರ್ತಿ ಮಹಿಮೆ

ಕರ್ಮಯೋಗಿ ದಿನಕರ ದೇಸಾಯಿ ನಂತರ ಉತ್ತ ಕನ್ನಡಕ್ಕೊಬ್ಬ ಸಮರ್ಥ ನಾಯಕನೇ ಸಿಕ್ಕಿಲ್ಲ! ರಾಮಕ ಹೆಗಡೆ, ದೇಶಪಾಂಡೆ, ಮಾರ್ಗರೆಟ್ ಆಳ್ವ ತಂತಮ ಜಾತಿಯ ಹಿಂಬಾಲಕರಿಗಷ್ಟೇ ನೇತಾ ಆಗಿದ್ದರು. ಯೋಗ್ಯತೆಯೂ ಹಾಲಿ ಜಿಲ್ಲಾ ಮಂತ್ರಿ ಕಾಗೇರಿ ಮಾಣಿಗಿ ನರಿಬುದ್ಧಿಯ ಕಾಗೇರಿಯನ್ನು ಆತನ ಸಹಚರರೇ ನಂಬು ದಿಲ್ಲ, ಇಂಥ ಹೋಪ್‌ಲೆಸ್ ಲೀಡರ್‌ಗಳಿಂದ ಜಿ ಬರಡು ಭೂಮಿಯಂತಾಗಿ ಹೋಗಿದೆ.

ಜಿಲ್ಲೆಗೆ ಬರುವ ಜಿಲ್ಲಾಧಿಕಾರಿಯಂಥ ಐಎಎ ಅಧಿಕಾರಿಯನ್ನೇ ಫುಟ್ಬಾಲ್‌ನಂತೆ ಒದ್ದು ಮಜಾ ಅನುಭ ಸುವ ಮನೆಹಾಳ ನಾಯಕರ ಜಿಲ್ಲೆಯಿದು. ಜಿಲ್ಲಾಧಿಕಾ ಯೆಂದರೆ ಜಿಲ್ಲಾಡಳಿತದ ಕಣ್ಣು-ಕಿವಿ-ಕೈಗಳೆಂದೇ ವ್ಯಾಖ್ಯಾ ಲಾಗುತ್ತಿದೆ. ಇಂಥ ಆಯಕಟ್ಟಿನ ಅಧಿಕಾರಿಯನ್ನು ಸರಿಯಾ ಒಂದು ವರ್ಷವೂ ಇಟ್ಟುಕೊಳ್ಳದೆ ಪುಢಾರಿಗಳು ಓಡಿಸ ತ್ತಿದ್ದಾರೆ. ಹೀಗಾಗಿ ಜಿಲ್ಲೆಯಲ್ಲಿ ಒಂಥರಾ ಅರಾಜಕ ಹಳಿತಪ್ಪಿದ ಅಭಿವೃದ್ಧಿ ಮತ್ತು ಆಡಳಿತ; ನೌಕರರ ಅಶಿಸ್ತು-ಭ್ರಷ್ಟಾಚಾರ ತಾಂಡವವಾಡುತ್ತಿದೆ.

ಜಿಲ್ಲೆಗೆ ಬಂದ ಡಿಸಿ ಇಲ್ಲಿಯ ಭೌಗೋಳಿ ಆಡಳಿತಾತ್ಮಕ ಸ್ಥಿತಿ-ಗತಿ ಸ್ಟಡಿ ಮಾಡುತ್ತಿರುವ ಹೊತ್ತಿ ಆತನಿಗೆ ವರ್ಗಾ ಶಿಕ್ಷೆ ಸಿದ್ಧವಾಗಿಬಿಡುತ್ತದೆ. ಕಳೆದ ನಾಲ ವರ್ಷದಲ್ಲಿ ಬರೋಬ್ಬರಿ ಐದು ಡಿಸಿಗಳು ಉತ್ತರ ಕನ್ನಡ ಪಿಕ್‌ನಿಕ್ ತರಹ ಬಂದು ಹೋಗಿದ್ದಾರೆ. ಡಾ. ಗೋವಿಂದ ರಾಜ್, ಪಿ. ಮಣಿವಣ್ಣನ್, ಮನೀಶ್ ಮೌದ್ಗಿಲ್, ಸ ಕುಮಾರ್, ಚೆನ್ನಪ್ಪ ಗೌಡ ಸಾಲಾಗಿ ಬಂದರು-ಹೋದರ ಹೀಗೆ ಡಿಸಿಗಳನ್ನು ಎತ್ತೆತ್ತಿ ಎಸೆಯುವುದು ಜಿಲ್ಲಾ ಮಂ ಮತ್ತು ಶಾಸಕರು ಜನಕಲ್ಯಾಣ ಕೆಲಸಕ್ಕೆ ಮಾಡುವ ದ್ರೋ ಮೋಸವೇ ಸರಿ. ಜಿಲ್ಲಾಧಿಕಾರಿಯನ್ನು ಜನಪರವಾಗಿ ಪಳಗಿ ಅಭಿವೃದ್ಧಿ ಸುವ್ಯವಸ್ಥೆ ಜಿಲ್ಲೆಯಲ್ಲಿ ನೆಲೆಗೊಳಿಸಬೇಕೆಂ ಕನಿಷ್ಠ ಕಾಳಜಿಯೇ ಇಲ್ಲಿಯ ದಂಡಪಿಂಡ ನೇತಾಗಳಿಗಿ

ಹಾಲಿ ಜಿಲ್ಲಾ ಉಸ್ತುವಾರಿ ಸಚಿವ ಕಾಗೇರಿಗಂತ ಕೆಲಸಗಾರ-ಶಿಸ್ತುಗಾರ ಅಧಿಕಾರಿಗಿಂತ ಎಚ್‌ಕ್ಯೂಎ (ಜಿ ಕೇಂದ್ರ ಸ್ಥಾನಿಕ ಅಧಿಕಾರಿ) ನರಸಿಂಹಮೂರ್ತಿಯಂ ಚಾಡಿಕೋರ-ಗೋಲ್‌ಮಾಲ್ ವಿಪ್ರನಂಥವರ ಅಚ್ಚುಮೆಚ್ಚು! ಕಾರವಾರಕ್ಕೆ ಯಾವ ಡಿಸಿ ಬಂದರ ಅವರನ್ನು ತನ್ನ ಅನುಕೂಲತೆ ಮತ್ತು ಮಂತ್ರಿ ಕಾಗೇರಿ ಇಚ್ಛೆಯಂತೆ ಪಳಗಿಸುವ ರಿಂಗ್‌ಮಾಸ್ಟರ್ ಈ ನರಸಿಂಹಮೂರ್ತಿ. ಕಾಗೇರಿ ಬಕೆಟ್ ಹಿಡಿದು ಈ ಸೂಪರ್ ಡಿಸಿಯಾಗಿ ಮೆರೆಯುತ್ತಿದ್ದಾನೆ. ಜಿಲ್ಲಾ ಕೇಂದ್ರ ಬರಲು ಸ್ಥಳೀಯ ಮಂತ್ರಿ ಅಸ್ನೋಟಿಕರ್‌ನ ಭಯ ಕಾಗೇರಿಗೆ. ಹೀಗಾಗಿ ಆತ ಎಚ್‌ಕ್ಯೂಎ ಮೂರ್ತಿ ಎಂ ಕುಲಬಾಂಧವನ ಮೂಲಕ ಕಾರ್ಯ ಸಾಧಿಸುತ್ತಿದ್ದಾ ಜಿಲ್ಲಾಧಿಕಾರಿ ಕಚೇರಿಯಲ್ಲಿ ಜಿಲ್ಲೆಯಲ್ಲಿ ಏನೇನ ನಡೆಯುತ್ತದೆಂದು ಚಾಡಿ ಹೇಳುವುದೇ ಈ ಮೂರ್ತಿ ಕೈಂಕರ್ಯವಾಗಿ ಹೋಗಿದೆ.

ಈ ನರಸಿಂಹಮೂರ್ತಿಗೆ ಜಿಲ್ಲಾಧಿಕಾರಿಯಾ ಅಮರನಾರಾಯಣ ಬರುತ್ತಿದ್ದಂತೆಯೇ ಅವ್ಯವಹಾರ ಅಡತಡೆಯಾಯ್ತು. ಲ್ಯಾಂಡ್ ಮಾಫಿಯಾದ ಕಿಂಗ್‌ಪಿನ್ ನಂತೆ ಡಿಸಿ ಕಚೇರಿಯಲ್ಲಿ ಕುಳಿತೇ ಕರಾಮತ್ತು ಮಾಡುತ್ತಿ ಮೂರ್ತಿಗೆ ಅಮರನಾರಾಯಣ ಮೂಗುದಾರ ಹಾಕಿದ್ದರ ಪ್ರತಿ ತಿಂಗಳು ಹಲವು ಲಕ್ಷಗಳ ಲ್ಯಾಂಡ್ ಎನ್ (ನಾನ್ ಅಗ್ರಿಕಲ್ಚರ್) ಬಿಸಿನೆಸ್‌ಗಳನ್ನು ಈತ ಸಾಂಗೋಪಾಂ ವಾಗಿ ಮಾಡುತ್ತ ಬಂದಿದ್ದ. ರಾತ್ರಿ ಬೆಳಗಾಗುವುದರ ಕಾನೂನು ಬಾಹಿರವಾಗಿ ನೂರಾರು ಎಕರೆ ಕೃಷಿ ಜಮೀನ ವಾಣಿಜ್ಯ ಜಮೀನಾಗಿ ಮಾರ್ಪಡಿಸುವ ಮಾಯಾ ಜಾದ ಈ ಮೂರ್ತಿ ಮಾಡುತ್ತಿದ್ದಾನೆ. ಇದಕ್ಕೆ ಮಂತ್ರಿ ಕಾಗೇರಿಯ ಕೃಪಾಕಟಾಕ್ಷವನ್ನೂ ಪಡೆದುಕೊಂಡಿದ್ದಾನೆ. ಮಂತ್ರಿ ಕಾಗೇ ತನ್ನ ಚಾಡಿಕೋರ ಶಿಷ್ಯನಿಗೆ ಅಷ್ಟೂ ಅನುಕೂ ಮಾಡಿಕೊಡದಿದ್ದರೆ ಆ ರಾಮ ಮೆಚ್ಚುತ್ತಾನಾ?

ಡಿಸಿ ಅಮರನಾರಾಯಣ ತನ್ನ ದಂಧೆಗೆ ಕಲ್ಲು ಹಾಕಿದ ಮೂರ್ತಿಯನ್ನು ಕೆರಳಿಸಿತ್ತು. ಡಿಸಿ ಹಣಿದು ಪಳಗಿಸಲ ಆತ ಸಮಯ ಸಾಧಿಸುತ್ತಲೇ ಇದ್ದ. ಡಿಸಿ ಅಮರನಾರಾಯಣ ಕಸಬರಿಗೆ ಹಿಡಿದು ಜಿಲ್ಲಾಧಿಕಾರಿ ಕಚೇರಿಯಲ್ಲಿ ಕ ಗುಡಿಸಿದ್ದು, ಗದ್ದೆಗಿಳಿದು ನಾಟಿ ಮಾಡಿದ್ದು, ಪ್ಲಾಸ್ಟಿಕ ವಿರುದ್ಧ ಪರಿಸರ ಪ್ರಜ್ಞೆ ಮೂಡಿಸಿದ್ದೆಲ್ಲ ಕೀಳು ಪ್ರಚಾ ಎಂದಾತ ಮಂತ್ರಿ ಕಾಗೇರಿ ಕಿವಿಯೂದಿಬಿಟ್ಟ. ಹಾಗೆಯೆ ನೆರೆಪರಿಹಾರ ನಿಧಿಯನ್ನು "ನಿಮಗೆ ಕೇಳದೆ ಬಿಜೆಪಿಯೇತ ಶಾಸಕರ ಕ್ಷೇತ್ರಕ್ಕೆ ಹಂಚಿದ್ದಾನೆ. ಡಿಸಿಯಿಂದಾಗಿ ಜಿಲ್ಲಾಡಳಿ ಕುಸಿದಿದೆ" ಎಂದೊಂದು 'ರಿಪೋರ್ಟ್' ತಯಾರಿ ಕಾಗೇರಿಗೆ ಒಪ್ಪಿಸಿದ್ದ. ಇದನ್ನೇ ಆಧಾರವಾಗಿಟ್ಟು ಕಾಗೇರಿ ಅಸ್ನೋಟಿಕರ್ ಸಿಎಂಗೆ ಡಿಸಿಗೆ ಗೇಟ್‌ಪಾಸ್ ಕೊಡಿಯೆಂದ ಮನವಿ ಅರ್ಪಿಸಿದ್ದಾರೆ. ಡಿಸಿ ಅಮರನಾರಾಯಣರ ವರ್ಗಾ ವಣೆ ಕರಾಮತ್ತಿನಲ್ಲಿ ಭ್ರಷ್ಟ ಎಚ್‌ಕ್ಯೂಎ ಪಾತ್ರ ದೊಡ್ಡದು ಮೂರ್ಖ ಕಾಗೇರಿ-ಅಸ್ನೋಟಿಕರ್‌ಗಳನ್ನು ಈ ಪ್ರ ಯಾಂತಕ ಕುಣಿಸುತ್ತಿದ್ದಾನೆ!


# ುಲ್ಬರ್ಗಾ ದಕ್ಷಿಣ: ಮುಖ್ಯಮಂತ್ರಿ, ಮಾಜಿ ಮುಖ್ಯಮಂತ್ರಿಗಳ ಕದನ!

ತ್ತೀಚೆಗೆ ಮಳೆ ಬಿಟ್ಟು ಬಿಡದೆ ಧಾರಾಕಾರವಾಗಿ ುಯುತ್ತಿದ್ದರೂ ಕಲಬುರ್ಗಿಯ ತುಂಬೆಲ್ಲ ಎಲ್ಲಾ ಪಕ್ಷಗಳ ಕರು ಗರಮ್ ಆಗಿಯೆ ರೋಡ್ ಶೋ ಹಚ್ಚಿಕೊಂಡಿದ್ದಾರೆ. ಎದ್ದರೆ ಕುಳಿತುಕೊಳ್ಳ ಆಗದ, ಕುಳಿತರೆ ಎದ್ದೇಳಲಿಕ್ಕೆ ಹರಸಾಹಸ ಬೇಕಿರುವ ಧರ್ಮ ಸಿಂಗ್ ಕೂಡ ತನ್ನ ಕುಡಿಗಾಗಿ ಮನೆ ಮನೆ ತಲುಪಿ ಕೇಳುತ್ತಿರುವುದು ಅವರ ಶೋಚನೀಯ ತಿಗೆ ಸಾಕ್ಷಿಯಾಗಿದೆ. ತಾನು ಮಾಜಿ ಖ್ಯಮಂತ್ರಿಯಾಗಿದ್ದುಕೊಂಡು ತನ್ನ ಕಣ್ಣ ದೆಯೇ ತನ್ನ ಮಗ ರಾಜಕೀಯ ಡದಲ್ಲಿ ಇರುವಂತೆ ನೋಡಿಕೊಳ್ಳಬೇಕು ಹಂಬಲ ಅವರನ್ನು ತೀವ್ರವಾಗಿ ಕಾಡುತ್ತಿದೆ. ಆದರೆ ಸಿಂಗ್‌ರು ತಮ್ಮ ಮಗನನ್ನು ತಾವು ಈ ಹಿಂದೆ ಧಿಸುತ್ತಿದ್ದ ಜೇವರ್ಗಿ ಮತಕ್ಷೇತ್ರದಲ್ಲಿ ಪ್ರತಿಷ್ಠಾಪಿಸಬೇಕೆಂದು ಚುಹಾಕಿದ್ದರು. ಆದರೆ ತಮ್ಮ ಮಗ ಜೇವರ್ಗಿ ೇತ್ರದಿಂದ ಕೇವಲ ಒಂದು ಸಲ ಮಾತ್ರ ಆಯ್ಕೆಯಾಗ ದೇ ಹೊರತು ಪ್ರತಿ ಸಲದ ಚುನಾವಣೆಗಳಲ್ಲೂ ಗೆಲ್ಲುವುದಿಲ್ಲ ಎಂಬ ಸತ್ಯ ಬಹಳ ವರ್ಷಗಳ ನಂತರ ಸಿಂಗ್‌ರ ಗಮನಕ್ಕೆ ಬಂದಿರುವಂತಿದೆ.

ಕೆಂದರೆ ಕ್ಷೇತ್ರದಲ್ಲಿರುವ ಲಿಂಗಾಯತ, ಗಾಣಿಗ ಹಾಗೂ ಸಮಾಜದ ಮುಖಂಡರು ಮತ್ತು ಜನಸಾಮಾನ್ಯರು ದಿನಗಳಿಂದ ಧರ್ಮ ಸಿಂಗ್‌ರ ರಾಜಕೀಯ ಕಂಡು ಗೊಂಡಿದ್ದಾರೆ. ಸುಮಾರು ನಲವತ್ತೈದು ವರ್ಷಗಳ ಧರ್ಮಸಿಂಗ್‌ರ ಕೈ ಚೀಲ ಹಿಡಿದಿದ್ದೇವೆಯೇ ಹೊರತು ಸರಿ ಸಮನಾಗಿ ನಿಲ್ಲುವ ತಾಕತ್ತನ್ನು ಕೂಡ ಧರ್ಮ ಮಹಾಶಯ ಯಾರಿಗೂ ಕಲಿಸಿಕೊಡಲಿಲ್ಲ ಎಂಬ ಜನರಲ್ಲಿದೆ.

ಎಲ್ಲಾ ಕಾರಣಗಳಿಂದಲೇ ಡಾ. ಅಜಯಸಿಂಗ್‌ನನ್ನು ರ್ಗಿ ದಕ್ಷಿಣ ಮತಕ್ಷೇತ್ರದಲ್ಲಿ ಹೇಗಾದರೂ ಸೈ ಯೂರಿಸಲೇ ಬೇಕೆಂದು ಧರ್ಮು ಹಾಗೂ ಖರ್ಗೆ ಶಯರು ಲೆಕ್ಕ ಹಾಕಿದ್ದಾರೆ. ಧರ್ಮು ಮತ್ತು ಖರ್ಗೆಯ ಕಂಠಸ್ಥ ರಾಜಕೀಯ ನಡೆಗಳನ್ನು ವಿರೋಧಿಸುವ ಜಗರು ಒಳಗೊಳಗೆ ಹಲ್ಲು ಮಸೆಯುತ್ತ ಕುಳಿತಿದ್ದಾರೆ. ರು ವರ್ಷಗಳಿಂದ ಪಕ್ಷಕ್ಕಾಗಿ ದುಡಿದ ಹಲವಾರು ನ್ನು ಕಡೆಗಣಿಸಿ ಧರ್ಮ ಸಿಂಗ್ ಪುತ್ರ ಡಾ. ಅಜಯ ಪಕ್ಷ ಮಣೆಹಾಕಿರುವುದು ಕಾಂಗ್ರೆಸ್ಸಿಗರಲ್ಲಿ ಅಂತರಂಗ ೃಕ್ಕೆ ಕಾರಣವಾಗಿದೆ.

ರ್ಮು ಅವರ ಕುಲಪುತ್ರನಾದರೋ ಒಮ್ಮೆಯೂ ಜನತೆಯೊಂದಿಗೆ ಸಂಬಂಧಗಳನ್ನು ಇಟ್ಟುಕೊಂಡವನಲ್ಲ ಕನ್ನಡ ಪತ್ರಿಕೆ ಓದುವ ವ್ಯವಧಾನವೂ ಆತನಿಗಿಲ್ಲ. ಚಕದಲ್ಲಿ ಹೋಗಲಿ, ಕಲಬುರ್ಗಿಯಲ್ಲಿರುವ ಪ್ರಮುಖ ಳ್ಯಾವು ಎಂಬ ಸಾಮಾನ್ಯ ಸಂಗತಿಯೂ ಆತನಿಗೆ ಗೊತ್ತಿಲ್ಲ. ಇನ್ನು ಆತನಿಂದ ಜನ ಸಾಮಾನ್ಯರ ನೋವು-ಗೋಳುಗಳನ್ನು ಕಂಡರಿಯಲು ಸಾಧ್ಯವಾಗುವುದಾದರೂ ಹೇಗೆ? ಸುಖದ ಸುಪ್ಪತ್ತಿಗೆಯಲ್ಲಿ ಬೆಳೆದ ಈ ಕುವರನಿಗೆ ಬೆಂಗಳೂರಿನ ಆರ್.ಟಿ.ನಗರದ ಭವ್ಯ ಬಂಗಲೆಯೊಂದು ಗೊತ್ತೆ ಹೊರತು ಮತ್ತಿನ್ನೇನೂ ಅಲ್ಲ.







"ಸುಮಾರು ನಲವತ್ತು ವರ್ಷಗಳ ಕಾಲ ಧರ್ಮ ಸಿಂಗ್ ಅವರನ್ನು ತಲೆಯ ಮೇಲೆ ಹೊತ್ತುಕೊಂಡು ತಿರುಗಿದೆವು. ಇನ್ನು ಮುಂದೆ ಖರ್ಗೆ ಪುತ್ರ ಪ್ರಿಯಾಂಕ ಹಾಗೂ ಧರ್ಮುವಿನ ಮಗ ಡಾ. ಅಜಯ್ ಸಿಂಗ್‌ನನ್ನು ನಾವು ಹೊತ್ತುಕೊಂಡು ಕೂರಬೇಕೆ?" ಎಂದು ಬಹುತೇಕ ಕಾಂಗ್ರೆಸ್ಸಿಗರು ಒಳಗೊಳಗೆ ಹಲ್ಲು ಮಸೆಯುತ್ತಿದ್ದಾರೆ. ಇವರೆಲ್ಲ ಒಳಗೊಳಗೆ ಬತ್ತಿ ಇಟ್ಟರೆ ಧರ್ಮು ದೇವೇ ಗೌಡರೊಂದಿಗೆ ಒಳ ಒಪ್ಪಂದ ಮಾಡಿಕೊಂಡಿದ್ದರೂ ಅದು ವರ್ಕ್‌ಔಟ್ ಆಗುವುದಿಲ್ಲ. ಆದರೆ ಚಾಲಾಕಿ ಧರ್ಮು ಇದೆಲ್ಲ ಅರಿಯದ ಆಸಾಮಿಯೇನಲ್ಲ, ತನ್ನ ಮಗ ಗೆಲ್ಲಲು ವಾಮಮಾರ್ಗಗಳನ್ನು ತುಳಿಯಲೂ ಧರ್ಮ್ ಸಿಂಗ್ ಹೇಸುವುದಿಲ್ಲ ಎಂಬ ಸಂಗತಿ ಜನಜನಿತವಾದುದೇ.

ಬಿಜೆಪಿಯ ದುಷ್ಟ ಆಡಳಿತ ಹಾಗೂ ತುಡುಗು ಬುದ್ಧಿಯನ್ನು ಅರಿತಿರುವ ಕುರುಬ ಸಮಾಜ, ಬೋವಿ ಸಮಾಜ, ಪ್ರಜ್ಞಾವಂತ ಲಿಂಗಾಯತರು ಹಾಗೂ ಸೆಕ್ಯುಲರ್ ಬ್ರಾಹ್ಮಣರು ಅನಿವಾರ್ಯವೆಂಬಂತೆ ಮನಸ್ಸು ಮಾಡಿದರೆ ಮಾತ್ರ ಧರ್ಮುವಿನ ಲೆಕ್ಕಾಚಾರ ಫಲಿಸಬಹುದು.

ಡಾ.ಡಿ.ಎಂ.ನಂಜುಂಡಪ್ಪ ವರದಿ ಅನುಷ್ಠಾನದ ಅಧ್ಯಕ್ಷಗಿರಿ ಎಂಬ ಗೂಟದ ಕಾರಿನ ಸುಖವನ್ನು ಈಗಾಗಲೇ ಅನುಭವಿಸಿರುವ, ಮೂರು ಬಾರಿ ವಿಧಾನ ಪರಿಷತ್ ಚುನಾವಣೆಯಲ್ಲಿ ಗೆದ್ದಿರುವ ಶಶೀಲ ನಮೋಶಿ ಸಭ್ಯ ವ್ಯಕ್ತಿ ಎಂಬುದರಲ್ಲಿ ಎರಡು ಮಾತಿಲ್ಲ. ಗುಲಬರ್ಗಾದಲ್ಲಿರುವ ಹೈದ್ರಾಬಾದ್ ಕರ್ನಾಟಕ ಎಜ್ಯುಕೇಷನ್ ಸೊಸೈಟಿಯ (ಎಚ್.ಕೆ.ಇ) ಸೊಸೈಟಿಯ ಅಧ್ಯಕ್ಷನಾಗಿರುವ ನಮೋಶಿ ಹಾಲಿ ವಿಧಾನ ಪರಿಷತ್ ಸದಸ್ಯನಾಗಿದ್ದರೂ ಈಗ ವಿಧಾನಸಭೆಯ ಸದಸ್ಯನಾಗಿ ಮಂತ್ರಿಯಾಗಬೇಕೆಂದು ಹಪಹಪಿಸುತ್ತಿದ್ದಾರೆ. ಆದರೆ ನಮೋಶಿಯನ್ನು ಅವರ ಪಕ್ಷದ ಹಲವಾರು ಜನರೇ ವಿರೋಧಿಸುತ್ತಾರೆ. ಇದೆಲ್ಲದರ ಜೊತೆಗೆ ಎಚ್.ಕೆ.ಇ .ಸೊಸೈಟಿಯ ಅಧ್ಯಕ್ಷನಾಗಿಯೂ ಮುಂದುವರೆಯಲು ಹೊರಟಿರುವುದು ಹಲವಾರು ಜನರ ಕಣ್ಣು ಕೆಂಪಗಾಗುವಂತೆ ಮಾಡಿವೆ.





ನಮೋಶಿ



ಅಜಯ್‌ಸಿಂಗ್



ಅರುಣಾ

ಒಬ್ಬ ವ್ಯಕ್ತಿಗೆ ಒಂದೇ ಹುದ್ದೆ ಎಂದು ಬಿಜೆಪಿ ಬೊಂಬಡಾ ಬಜಾಯಿಸುತ್ತಿದ್ದರೂ ಶಶೀಲ ನಮೋಶಿಗೆ ಪಕ್ಷದ ಟಿಕೆಟ್ ಕೊಟ್ಟಿದ್ದು ಪಕ್ಷದ ಕಾರ್ಯಕರ್ತರಲ್ಲಿ ಮಾತ್ರವಲ್ಲ ಜನಸಾಮಾನ್ಯರಲ್ಲೂ ಬೇಸರ ಮೂಡಿಸಿದೆ.

ಬ್ರಾಹ್ಮಣರು ಮತ್ತು ಲಿಂಗಾಯತರು ಈ ಮತಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದರೂ ನಿರ್ಣಾಯಕ ಮತದಾರರಾದ ಅಲ್ಪಸಂಖ್ಯಾತರ ಮತಗಳು ಈ ಬಾರಿ ಬಿಜೆಪಿಗೆ ಬೀಳುವುದು ಕಷ್ಟ. ಏಕೆಂದರೆ ಗೋಹತ್ಯೆ ಮಸೂದೆ ನಿಷೇಧದ ಬಿಸಿ ಇವರೆಲ್ಲರನ್ನು ತಗುಲಿ ಬಿಟ್ಟಿದೆ. ಲಿಂಗಾಯತರ ಮತಗಳನ್ನು ಶ್ರೀಮತಿ ಅರುಣಾ ಚಂದ್ರಶೇಖರ ಪಾಟೀಲ ರೇವೂರ ಅವರು ಕಸಿದುಕೊಳ್ಳುವ ಸಾಧ್ಯತೆಗಳೇ ಹೆಚ್ಚಾಗಿವೆ.

ಕಳೆದ ಬಾರಿ ಎಸ್.ಕೆ.ಕಾಂತಾ ಎಂಬ ಮಾಜಿ ಕಾರ್ಮಿಕ ಮಂತ್ರಿಗಳು ಜೆಡಿಎಸ್ ಪಕ್ಷದಿಂದ ಸ್ಪರ್ಧಿಸಿದ್ದರು. ಆದರೆ ಈ ಬಾರಿ ಅವರು ಪಕ್ಷದ ಟಿಕೆಟ್ ಕೂಡ ಕೇಳಲಿಲ್ಲ, ಈ ಮಧ್ಯೆ ಪಕ್ಷದ ವತಿಯಿಂದ ಸ್ಪರ್ಧಿಸಬಯಸಿದ ಟಿಕೆಟ್ ಆಕಾಂಕ್ಷಿಗಳೇನೂ ಕಮ್ಮಿ ಇರಲಿಲ್ಲ, ನಾಟಕೀಯ ರಾಜಕೀಯ ಬೆಳವಣಿಗೆಗಳಲ್ಲಿ ಬಿಜೆಪಿಯ ಟಿಕೆಟ್ ವಂಚಿತರಾದ ಶ್ರೀ ಅರುಣಾ ಪಾಟೀಲ ರೇವೂರ ಜೆ.ಡಿ.ಎಸ್. ಅಭ್ಯರ್ಥಿಯಾಗಿ ನಿಂತಾಗಿದೆ. ಈ ಅಭ್ಯರ್ಥಿಯ ಬೆನ್ನ ಹಿಂದಿನ ಬೆಳಕಾಗಿ ಸ್ವತಃ ಜೆ.ಡಿ.ಎಸ್ ರಾಜ್ಯಾಧ್ಯಕ್ಷ, ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿಗಳೇ ಖುದ್ದು ನಿಂತಿದ್ದಾರೆ. ಎಸ್.ಕೆ.ಕಾಂತಾ, ದೇವೇಗೌಡ ತೆಲ್ಲೂರ, ಅರುಣಕುಮಾರ ಪಾಟೀಲ, ಶಂಕ್ರಣ್ಣ ವಣಕಿಹಾಳ, ರಾಜು ಕುಳಗೇರಿ ಮುಂತಾದವರ ದೊಡ್ಡ ಪಟಾಲಂ ಈಗಾಗಲೇ ಕ್ಷೇತ್ರದ ತುಂಬೆಲ್ಲ ತಿರುಗಾಡಿ ಬಂದಾಗಿದೆ.

ಜನಸಾಮಾನ್ಯರ ಜೊತೆ ಎಂದೂ ಬೆರೆಯದ ರೇವೂರ ಕುಟುಂಬದಿಂದ ಕ್ಷೇತ್ರದ ಅಭಿವೃದ್ಧಿಯನ್ನು ನಿರೀಕ್ಷಿಸುವುದು ಅಷ್ಟಕಷ್ಟೆ. ಇನ್ನು ಚಂದ್ರಶೇಖರ ರೇವೂರ ಅವರ ಕುಲಪುತ್ರ ದತ್ತಾತ್ರೇಯ ಪಾಟೀಲ ತಮ್ಮ ತಂದೆ ಶಾಸಕನಾಗಿದ್ದಾಗ ನಡೆಸಿದ ರೋಲ್‌ಕಾಲ್‌ಗೆ ಬಲಿಯಾಗದವರೇ ಇಲ್ಲ ಎನ್ನಬಹುದು. ಬರೀ ಜಿಲ್ಲಾ ಪಂಚಾಯತ್ ಸದಸ್ಯನಾಗಿದ್ದಾಗಲೇ ಈತನನ್ನು ಮಾತಾಡಿಸುವುದಕ್ಕೆ ಆಗುತ್ತಿರಲಿಲ್ಲ, ಪ್ರಸ್ತುತ ಸಂದರ್ಭದಲ್ಲಿ ತಾಯಿಯೇ ಜೆ.ಡಿ.ಎಸ್. ಅಭ್ಯರ್ಥಿಯಾಗಿ ಒಂದೊಮ್ಮೆ ಆಯ್ಕೆಗೊಂಡು ಬಂದರೆ ಆಕೆಯ ಶಾಸಕತ್ವದ ಕಾರುಬಾರೆಲ್ಲ ನಡೆಸುವವನು ಈ ಕುಲಪುತ್ರನೇ! ಹೀಗಾಗಿ ಜನ ಶ್ರೀಮತಿ ಅರುಣಾ ಪಾಟೀಲರತ್ತ ವಾಲಲು ಸ್ವಲ್ಪ ಹಿಂದೇಟು ಹಾಕುತ್ತಿದ್ದಾರೆ.

ದೇವೇಗೌಡರು ಹಾಗೂ ಧರ್ಮ ಸಿಂಗ್ ಅವರು ತಮ್ಮ ಮನೆಯಲ್ಲಿ ಕುಳಿತು ಹಾಕಿದ ಸ್ಕೆಚ್ ವರ್ಕ್‌ಔಟ್ ಆದರೆ ಶ್ರೀಮತಿ ಅರುಣಾ ಪಾಟೀಲ ಹರಕೆಯ ಕುರಿಯಾಗಿ ಬಲಿಯಾಗುತ್ತಾರೋ ಹೇಗೋ ಎಂಬುದನ್ನು ಕಾಲವೇ ನಿರ್ಧರಿಸಲಿದೆ.

ಈಗ ನಮೋಶಿಯ ಪರವಾಗಿ ಕರ್ನಾಟಕದ ಹಾಲಿ ಮುಖ್ಯಮಂತ್ರಿ ಯಡ್ಡಿ, ಜೆಡಿಎಸ್ ಅಭ್ಯರ್ಥಿಯ ಪರ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಹಾಗೂ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾದ ಡಾ. ಅಜಯ ಸಿಂಗ್ ಅವರ ಪರವಾಗಿ ಮಾಜಿ ಮುಖ್ಯಮಂತ್ರಿ ಧರ್ಮ ಸಿಂಗ್ ಬೆನ್ನೆಲುಬಾಗಿ ನಿಂತುಕೊಂಡಿದ್ದಾರೆ. ಒಟ್ಟಿನಲ್ಲಿ ಮೂವರು ಮುಖ್ಯಮಂತ್ರಿಗಳ ಕೋಣದ ಕುಸ್ತಿಯಲ್ಲಿ ಚಾಲಾಕಿ ಮತದಾರ ಯಾರ ಕಡೆ ಕಣ್ಣು ತಿರುವುತ್ತಾನೋ ಆತನ ಲಕ್ ಕುಲಾಯಿಸುವುದರಲ್ಲಿ ಯಾವುದೇ ಅನುಮಾನವಿಲ್ಲ.

• ವಿಶ್ವಾರಾಧ್ಯ ಸತ್ಯಂಪೇಟೆ
satyampet1969@gmail.com

# ಡೂರು: ತ್ತಲಿಂದ ೋಡಿದರೂ ತ್ತನೇ ಸೂಕ್ತ….


## ಚುನಾವಣೆ ಹಣಾಹಣಿ

ನಾನುರಾಗಿ ಕೆ.ಎಂ. ಕೃಷ್ಣಮೂರ್ತಿ ನಿಧನದಿಂದ ತೆರವಾದ ಕಡೂರು ಉಪಚುನಾವಣೆಯಲ್ಲೀಗ ಫಲಿತಾಂಶ ಹೆಚ್ಚೂಕಡಿಮೆ ನಿರ್ಧಾರವಾದಂತಿದೆ. ಸಣ್ಣಪುಟ್ಟ ಲೋಪಗಳಿದ್ದರೂ, ಕೃಷ್ಣಮೂರ್ತಿ ಸ್ಥಾನ ತುಂಬಲು ವೈ.ಎಸ್.ವಿ. ಸೂಕ್ತ ಎಂದು ಜನ ಅಭಿಪ್ರಾಯಪಡುತ್ತಿದ್ದಾರೆ.


ತ್ತಮ ಸಂಸದೀಯ ಪಟುವಾಗಿರುವ, ಎಂದೂ ವೈಭವದ ಜೀವನಕ್ಕೆ ರೆಯದ ದತ್ತರಿಂದ ಜನ ಕಡೂರಿನ ಅಭಿವೃದ್ಧಿ ನಿರೀಕ್ಷಿಸುತ್ತಿದ್ದಾರೆ. ರುವ ಕಾಂಗ್ರೆಸ್, ಬಿಜೆಪಿ ಅಭ್ಯರ್ಥಿಗಳು ಯಾವ ಮಾನದಂಡದಲ್ಲೂ ವ್ಯಕ್ತಿತ್ವದ ಸಮಕ್ಕೆ ಬರಲಾರರು.

ಂಗ್ರೆಸ್‌ನಿಂದ ದಿ. ಕೃಷ್ಣಮೂರ್ತಿ ಪತ್ನಿ ಸುಜಾತರಿಗೆ ಟಿಕೆಟ್ ಸಿಗಲಿದೆ ಜನ ಭಾವಿಸಿದ್ದರು. ಆದರೆ ಕಾಂಗ್ರೆಸ್ ಕೃಷ್ಣಮೂರ್ತಿ ಸಹೋದರ ಜುಗೆ ಟಿಕೆಟ್ ನೀಡಿ ಜನರಲ್ಲಿ ಅಸಮಾಧಾನ ತಂದಿತು. ಈಗ ರವರು ಚುನಾವಣಾ ಪ್ರಚಾರದಲ್ಲಿ ಪಾಲ್ಗೊಳ್ಳದೇ ಇರುವುದು ಕಾಂಗ್ರೆಸ್ಸಿಗೆ ಮುಜುಗರವುಂಟುಮಾಡಿದೆ. ಕ್ಷೇತ್ರದ ಮತದಾರರ ಸಂಖ್ಯೆಯಲ್ಲಿ ಎರಡನೇ ಸ್ಥಾನದಲ್ಲಿರುವ ಕುರುಬರ ಮತಗಳನ್ನು ನಂಬಿಕೊಂಡಿರುವ ಕೆಂಪರಾಜು ಸಿದ್ಧರಾಮಯ್ಯರ ಪ್ರಭಾವಳಿಯನ್ನೇ ನಂಬಿಕೊಂಡು ಸೆಣಸಾಡುತ್ತಿದ್ದಾರೆ ಅಷ್ಟೇ. ಜಿಲ್ಲಾ ಪಂಚಾಯತ್ ಸದಸ್ಯರಾಗಿರುವ ಕೆಂಪರಾಜು ಅಣ್ಣ ಕೃಷ್ಣಮೂರ್ತಿ ಶಾಸಕರಾಗಿದ್ದಾಗ ಸಾಕಷ್ಟು ಎತ್ತುವಳಿ ಮಾಡಿದ್ದು ಜನರ ನೆನಪಿನಲ್ಲಿನ್ನೂ ಇರುವುದರಿಂದ ಕೆಂಪರಾಜು ಮೇಲೆ ಅನುಕಂಪ ಮೂಡುವುದು ಕಷ್ಟವಾಗಿದೆ.

ಇನ್ನು ಬಿಜೆಪಿಯಿಂದ ನಿಂತಿರುವ ಡಾ. ವೈ.ಸಿ. ವಿಶ್ವನಾಥ್ ಆಟಕ್ಕುಂಟು ಲೆಕ್ಕಕ್ಕಿಲ್ಲ, ಆದರೂ ಈತನ ಗೆಲುವಿಗೆ ಮುಖ್ಯಮಂತ್ರಿ ಮತ್ತು ಕೆಲ ಸಚಿವರು ಹಣ ಹರಿಸುತ್ತಿದ್ದಾರೆ. ಕಳೆದ ಚುನಾವಣೆಯಲ್ಲಿ ಠೇವಣಿ ಕಳೆದುಕೊಂಡ ಈ ವೈದ್ಯ ಮಹಾಶಯ ಈಗ ಮತ್ತೆ ಚುನಾವಣೆ ಬಂದಕೂಡಲೇ ಜನರ ಮುಂದೆ ಪ್ರತ್ಯಕ್ಷನಾಗಿದ್ದಾನೆ. ತನ್ನ ಮಾರುತಿ ಹೆರಿಗೆ ಆಸ್ಪತ್ರೆಯಲ್ಲಿ ಒಂದ್ ನಾಲ್ಕು ಉಚಿತ ಹೆರಿಗೆ ಮಾಡಿದ್ದನ್ನೇ ಜನಸೇವೆ ಎಂದು ನಂಬಿರುವ ಈ ಹುಂಬನಿಗೆ ಈ ಸಲ ಠೇವಣಿ ವಾಪಸ್ ಬಂದರೆ ಅದೇ ದೊಡ್ಡ ಸಾಧನೆಯಾಗಲಿದೆ.



ವಿಶ್ವನಾಥ್



ಕೆಂಪರಾಜು



ಏನೇ ಇರಲಿ, ಈತ ಮಾತ್ರ ಧಾರಾಳವಾಗಿ ಹಣ ಹರಿಸುತ್ತಿದ್ದಾನೆ. ನಾಮಪತ್ರ ಸಲ್ಲಿಸುವ ದಿನವೇ ಈತ 30 ಲಕ್ಷ ಖರ್ಚು ಮಾಡಿದ್ದು ಜನರಲ್ಲಿ ಅಸಹ್ಯ ಮೂಡಿಸಿದೆ. ಇಂತಹ ಮಹಾಶಯನ ಗೆಲುವಿಗಾಗಿ ಚಿಕ್ಕಮಗಳೂರಿನ ಶಾಸಕ ಸಿ.ಟಿ. ರವಿ ಹರಸಾಹಸ ಮಾಡುತ್ತಿದ್ದು, ಇದು ನೆಗಟಿವ್ ಎಫೆಕ್ಟ್ ಕೂಡ ಆಗಬಹುದೇನೋ? ಒಟ್ಟಾರೆ ಬಿಜೆಪಿಯ ದುರಾಡಳಿತವೂ ವಿಶ್ವನಾಥ್‌ಗೆ ಮುಳುವಾಗುತ್ತಿದ್ದು, ಮತ್ತೆ ಈತ ತನ್ನ ಹೆರಿಗೆ ಆಸ್ಪತ್ರೆಗೆ ವಾಪಸ್ಸಾಗುವುದು ಖಂಡಿತ.

ಈ ಇಬ್ಬರು ಕ್ಯಾಂಡಿಡೇಟ್‌ಗಳ ವೀಕ್‌ನೆಸ್‌ಗಳು ಜೆಡಿಎಸ್‌ನ ದತ್ತರಿಗೆ ವರದಾನವಾಗಿವೆ. ಜೊತೆಗೆ ಕಳೆದ ಬಾರಿ ಸೋತ ದತ್ತರ ಮೇಲೆ ಜನರ ಅನುಕಂಪವೂ ಇದ್ದಂತಿದೆ. ಕೈ-ಬಾಯಿ ಶುದ್ಧವಾಗಿಟ್ಟುಕೊಂಡಿರುವ ದತ್ತರ ಸರಳತೆ ಜನರಿಗೆ ಈಗ ಅರ್ಥವಾಗಿದೆ. ಮಾಜಿ ಪ್ರಧಾನಿ ದೇವೇಗೌಡ, ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಈ ಕ್ಷೇತ್ರವನ್ನು ಪ್ರತಿಷ್ಠೆಯ ವಿಷಯವನ್ನಾಗಿ ತೆಗೆದುಕೊಂಡು ಪ್ರಚಾರ ಮಾಡುತ್ತಿದ್ದು ಪಕ್ಷದ ಕಾರ್ಯಕರ್ತರಲ್ಲಿ ಹುರುಪು ತಂದಿದೆ.

ಯಾವ ದೃಷ್ಟಿಯಿಂದ ನೋಡಿದರೂ ದತ್ತರೇ ಇಲ್ಲಿ ಸೂಕ್ತ ಅಭ್ಯರ್ಥಿ. ಕಡೂರು ಮತದಾರರಿಗೆ ಇದು ಅರ್ಥವಾಗಿರುವುದರಿಂದ ದತ್ತ ಮೊದಲ ಬಾರಿಗೆ ಕೆಳಮನೆ ಪ್ರವೇಶಿಸುವುದು ಖಚಿತವಾಗುತ್ತಿದೆ.


• ವರದಿಗಾರ

# ಹಾಸನ: ವೈದ್ಯಕೀಯ ಕಾಲೇಜಿನ ಕರ್ಮಕಾಂಡ

**ಹಾಸನ್ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ವಿವಾದವು ಯಡ್ಯೂರಪ್ಪ ಅವರನ್ನು ಇಕ್ಕಟ್ಟಿಗೆ ಸಿಲುಕಿಸಿದೆಯೇ? ಈ ಪ್ರಕರಣವು ರಾಮಚಂದ್ರಗೌಡರ ತಲೆದಂಡವನ್ನು ಬೇಡುತ್ತದೆಯೇ? ಎಚ್. ಡಿ. ರೇವಣ್ಣನವರು ಆರೋಪಿಸಿರುವಂತೆ ರಾಮಚಂದ್ರಗೌಡರ ಆಪ್ತ ಕಾರ್ಯದರ್ಶಿ ವಿರೂಪಾಕ್ಷನ ಮೂಲಕ ಕೋಟ್ಯಾಂತರ ರೂಪಾಯಿಗಳ ಭ್ರಷ್ಟಾಚಾರ ನಡೆದಿದೆಯೇ? ಅಥವಾ ಈ ಪ್ರಕರಣವು ಬಿಜೆಪಿ ಮತ್ತು ಜೆಡಿಎಸ್‌ನ ರಾಜಕೀಯ ಬಲಾಬಲಗಳ ರಣರಂಗವಾಗಿದೆಯೇ? ಇಂತಹ ಚದುರಂಗದಾಟದಲ್ಲಿ ಪದಾತಿಗಳಾಗಿರುವ 29/307ರ ಸಿಬ್ಬಂದಿಯ ಅನ್ನದ ಪ್ರಶ್ನೆ ಭ್ರಷ್ಟ ವ್ಯವಸ್ಥೆಯಲ್ಲಿ ಹೇಗೆ ರಾಜಕೀಕರಣಗೊಳ್ಳುತ್ತದೆಂಬುದಕ್ಕೆ ಇದಕ್ಕಿಂತ ಒಳ್ಳೆಯ ದೃಷ್ಟಾಂತ ಬೇಕಿಲ್ಲ.**

• ಬಾನು ಮುಷ್ತಾಕ್

ಹಾಸನದಲ್ಲಿ ಹಾಸನ್ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಎಂಬ ಹೆಸರಿನ ಮೆಡಿಕಲ್ ಕಾಲೇಜು ಮಂಜೂರಾದದ್ದು ಹಾಗೂ ಆರಂಭವಾದುದು ತರಾತುರಿಯಲ್ಲಿ. ಹೀಗಾಗಿ ಅದರ ಶ್ರೇಯಸ್ಸು ಸಲ್ಲಬೇಕಾದುದು ಹೆಚ್.ಡಿ ರೇವಣ್ಣನವರಿಗೆ. ಅದರ ಬೆನ್ನಿನಲ್ಲಿಯೇ ಹಾಸನ ನಗರವನ್ನು ಕೊಳಚೆ ಪ್ರದೇಶವನ್ನಾಗಿ ಪರಿವರ್ತನೆ ಮಾಡಿದ್ದು ಮತ್ತು ಶತಮಾನದ ಇತಿಹಾಸವನ್ನು ಕಂಡ ಹೆರಿಟೇಜ್ ಶಾಲೆ ಸರ್ಕಾರಿ ಜೂನಿಯರ್ ಕಾಲೇಜಿನ ಹಾಗೂ ಗಂಧದ ಕೋಠಿಯ ಜಾಗವನ್ನು ಮನಸೋಇಚ್ಛೆ ದುರ್ಬಳಕೆ ಮಾಡಿಕೊಂಡ ಶ್ರೇಯಸ್ಸು ಕೂಡ ಅವರಿಗೇ ಸಲ್ಲಬೇಕು. ಮೆಡಿಕಲ್ ಕಾಲೇಜಿನ ಮುಂಭಾಗದಲ್ಲಿಯೇ ಹಾಲಿ ಇರುವ ನ್ಯಾಯಾಲಯಗಳ ಸಂಕೀರ್ಣವನ್ನು ಕೂಡ ಎತ್ತಂಗಡಿ ಮಾಡಲು ಸರ್ವ ಸಿದ್ಧತೆ ನಡೆದಿದೆ. ನಗರದ ಹೊರವಲಯದಲ್ಲಿ ವಿಶಾಲ ಜಾಗದಲ್ಲಿ ಆಗಬಹುದಾಗಿದ್ದ ಒಳ್ಳೆಯ ಕ್ಯಾಂಪಸ್ ಹೀಗೆ ಕಿರಿದಾದ ರಸ್ತೆಗಳಿಂದ ಸುತ್ತುವರೆದ ಎಲ್ಲವನ್ನೂ ಕಬಳಿಸುತ್ತಿರುವ ಬಕಾಸುರನಂತೆ ಬೆಳೆಯುತ್ತಿದೆ.




ಪ್ರತಿಭಟನಾ ನಿರತ ವೈದ್ಯರುಗಳು...

ಬಾಲಗ್ರಹ ಕಾಟದಿಂದ ನರಳುತ್ತಿರುವ ಈ ಕಾಲೇಜಿಗೆ ಒಂದಲ್ಲ ಒಂದು ಸಮಸ್ಯೆ ನಿರಂತರವಾಗಿ ಕಾಡಿಸುತ್ತಲೇ ಇದೆ. ಈ ನಿಟ್ಟಿನಲ್ಲಿ ಹೊಸ ವಿವಾದವೆಂದರೆ ಬೋಧಕೇತರ ಸಿಬ್ಬಂದಿಯ ನೇಮಕಾತಿಗೆ ಸಂಬಂಧಪಟ್ಟದ್ದು. ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಎಂಬ ಹೆಸರಿನ ಈ ಮೆಡಿಕಲ್ ಕಾಲೇಜು 1960ರ ಕರ್ನಾಟಕ ಸಂಘ ಸಂಸ್ಥೆಗಳ ಕಾಯಿದೆಯಡಿ ನೋಂದಾವಣೆಗೊಂಡಿರುವ ಒಂದು ಸರ್ಕಾರಿ ಸ್ವಾಯತ್ತ ಸಂಸ್ಥೆಯಾಗಿರುತ್ತದೆ. ಇದು ಸಂಪೂರ್ಣವಾಗಿ ಸರ್ಕಾರದಿಂದ ನೀಡಲ್ಪಡುವ ಅನುದಾನದಿಂದ ನಡೆಯುತ್ತದೆ. ಇದರ ಆಡಳಿತ ನಿರ್ವಹಣೆಗಾಗಿ ಆಡಳಿತ ಮಂಡಳಿಯು ನೇಮಕವಾಗಿದ್ದು, ವೈದ್ಯಕೀಯ ಶಿಕ್ಷಣ ಸಚಿವರು ಅಧ್ಯಕ್ಷರಾಗಿದ್ದು, ನಿರ್ದೇಶಕರು/ಪ್ರಾಂಶುಪಾಲರು ಆಡಳಿತ ಮಂಡಳಿಯ ಆಡಳಿತಾಧಿಕಾರಿಯಾಗಿರುತ್ತಾರೆ. ಇದು ಸಂಪೂರ್ಣವಾಗಿ ಸರ್ಕಾರಿ ಅನುದಾನಿತ ಸಂಸ್ಥೆಯಾಗಿರುವುದರಿಂದ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ನೀತಿ ನಿಯಮಾವಳಿಗಳನ್ನು ಹಾಗೂ ಆದೇಶಗಳನ್ನು ಈ ಸಂಸ್ಥೆಯು ಪಾಲಿಸುವುದು ಕಡ್ಡಾಯವಾಗಿರುತ್ತದೆ.

**ವಿಶೇಷ ವರದಿ**


ಈ ಕಾಲೇಜು ಬೃಹತ್ ಸಂಸ್ಥೆಯಾಗಿದ್ದು ಸುಮಾರು 1000 ಸಿಬ್ಬಂದಿಯ ಅಗತ್ಯವಿದೆಯೆಂದು ಅಂದಾಜಿಸಲಾಗಿದೆ. ಆದರೆ, ತರಾತುರಿಯಲ್ಲಿ ಕಾಲೇಜು ಆರಂಭವಾದುದರಿಂದ ಅವಶ್ಯಕತೆಗೆ ತಕ್ಕಂತೆ ಸಿಬ್ಬಂದಿಯನ್ನು ಅಂದರೆ ಸುಮಾರು 119 ಜನರನ್ನು ಗುತ್ತಿಗೆ ಆಧಾರದ ಮೇಲೆ ಹಂಗಾಮಿ ತಾತ್ಕಾಲಿಕ ನೌಕರರೆಂದು ನಿಯೋಜನೆ ಮಾಡಲಾಗಿತ್ತು.

ಆ ಸಿಬ್ಬಂದಿಯೂ ಕೂಡಾ ಮುಂದೆ ತಮಗೆ ಸರ್ಕಾರಿ ನೌಕರಿ ಸಿಗಬಹುದೆಂಬ ನಿರೀಕ್ಷೆಯ ಮೇಲೆ ಗುತ್ತಿಗೆಯಾಧಾರಿತ ಸಂಭಾವನೆಯನ್ನೇ ಒಪ್ಪಿಕೊಂಡು, ಕಡಿಮೆ ವೇತನ ಮತ್ತು ಹೆಚ್ಚು ಕೆಲಸವನ್ನು ತಕರಾರಿಲ್ಲದೆ ನಿರ್ವಹಿಸಿದ್ದಾರೆ. ಗುತ್ತಿಗೆಯಾಧಾರಿತ ನೇಮಕಾತಿಗಳು ಜನತಾದಳ ಅಧಿಕಾರಾವಧಿಯಲ್ಲಿ ನಡೆದಿರುವುದರಿಂದ ಸಹಜವಾಗಿಯೇ ರೇವಣ್ಣನವರ ಬೆಂಬಲಿಗರಿಗೆ ಪ್ರಾಶಸ್ತ್ಯ ದೊರಕಿದೆ.



ನಂತರ ಸದರಿ ಸಂಸ್ಥೆಯು ದಿ 9-9-2009ರಲ್ಲಿ ಸಂಕ್ಷಿಪ್ತ ನೇಮಕಾತಿ ಅಧಿಸೂಚನೆ ಸಂಖ್ಯೆ: ಹಿಮ್ಸ್/ನೇಮಕಾತಿ/ಸಿ(2)/6/2009-10ರ ಮೇರೆಗೆ 24 ವಿವಿಧ ವೃಂದಗಳಿಗೆ ಸೇರಿದ 307 ಹುದ್ದೆಗಳ ನೇಮಕಾತಿಗಾಗಿ ಅರ್ಜಿಗಳನ್ನು ಕೋರಿ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿತು. ಈ ಪ್ರಕಟನೆಗೆ ಇಡೀ ರಾಜ್ಯದಲ್ಲಿರುವ ಅನೇಕ ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಿದ್ದರು.

ಸದರಿ ಅರ್ಜಿಗಳು ವಿಲೆಯಾಗುತ್ತಿದ್ದಂತೆಯೇ ಹಾಸನದಲ್ಲಿ ಅಶರೀರವಾಣಿಯು ಅನೇಕ ವದಂತಿಗಳನ್ನು ಬಿತ್ತರಿಸುತ್ತಲೇ ಇತ್ತು, ಯಥಾಪ್ರಕಾರ ಸಂದರ್ಶನಗಳು ನಡೆದವು. ಅಂತಿಮ ಪಟ್ಟಿ ತಯಾರಾಯಿತು. ತೆರೆಮರೆಯಲ್ಲಿ ಏನು ನಡೆಯಿತೋ ಎಲ್ಲರಿಗೂ ಗೊತ್ತಿರುವ ಓಪನ್ ಸೀಕ್ರೆಟ್. ಹಿಮ್ಸ್ ಸಂಸ್ಥೆಯು 307 ಮಂದಿಯ ಅಂತಿಮ ಆಯ್ಕೆ ಪಟ್ಟಿಯನ್ನು ದಿ 9-8-2010ರಂದು ಪ್ರಕಟಿಸಿ, ಅದೇ ದಿನ ನೇಮಕಾತಿ ಆದೇಶಗಳನ್ನು ಹೊರಡಿಸಿದೆ. ಗುತ್ತಿಗೆಯಾಧಾರಿತ 119 ಜನಸಿಬ್ಬಂದಿಯ ಪೈಕಿ 90 ಮಂದಿಯು ಈ 307 ಜನರ ಆಯ್ಕೆ ಪಟ್ಟಿಯಲ್ಲಿ ಸೇರ್ಪಡೆಯಾಗಿದ್ದಾರೆ. 29 ಮಂದಿಗೆ ಕೆಲಸ ದೊರಕಿಲ್ಲ ಮತ್ತು ಮೇಲ್ಕಂಡ ಗುತ್ತಿಗೆಯಾಧಾರಿತ ಹಂಗಾಮಿ ತಾತ್ಕಾಲಿಕ ನೌಕರರನ್ನು ದಿ 10-8-2010ರಂ... ಸಂಸ್ಥೆಯು ಕೆಲಸದಿಂದ ಬಿಡುಗಡೆಗೊಳಿಸಿತು.



ರಾಮಚಂದ್ರಗೌಡ

307 ಮಂದಿಯ ಪೈಕಿ 2... ಅಭ್ಯರ್ಥಿಗಳು ದಿ 11-9-2010ರ... ಕೆಲಸಕ್ಕೆ ಹಾಜರಾಗಿದ್ದಾರೆ. ಅನೇಕ ... ಉತ್ತರ ಕರ್ನಾಟಕ ಮತ್ತು ಹೈದರಾಬಾ... ಕರ್ನಾಟಕ ಭಾಗದಿಂದ ಮತ್ತು ರಾಜ... ವಿವಿಧ ಭಾಗಗಳಿಂದ ಬಂದು ಕೆಲ... ಸೇರ್ಪಡೆಯಾಗಿದ್ದಾರೆ. ಕೆಲವರು ವಾ... ಮನೆಗೆ ಮುಂಗಡ ಹಣ ನೀಡಿದ್ದರೆ, ಇನ... ಕೆಲವರು ಭೋಗ್ಯಕ್ಕೆ ಮನೆಯನ್ನು ಪಡ...ದ್ದಾರೆ. ಕೆಲವರು ಸಂಸಾರ ಸಮೇತ ಹಾಸ... ಬಂದು ಮನೆಯನ್ನು ಮಾಡಿ ಮಕ್ಕಳನ್ನು ಇಲ್ಲಿನ ಶಾಲೆಗ... ದಾಖಲು ಮಾಡಿದ್ದಾರೆ. ಮತ್ತೆ ಕೆಲವರು ವಸತಿಗೃಹಗ... ದುಬಾರಿ ಬಾಡಿಗೆಗಿದ್ದು, ಮನೆಗಾಗಿ ಅಲೆದಾಡುತ್ತಿದ್ದಾ... ಕೆಲವರಂತೂ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗ... ಇದ್ದ ಒಳ್ಳೆಯ ಹುದ್ದೆಗಳನ್ನು ತೊರೆ... ಇಲ್ಲಿಗೆ ಧಾವಿಸಿದ್ದಾರೆ.

ಅಂತೂ ಉದ್ಯೋಗವಂಚಿತ ... ಮಂದಿಯ ಮುಷ್ಕರ ಸಣ್ಣದಾಗಿ ಆರ... ವಾಯಿತು. ಯಥಾಪ್ರಕಾರ ಸರ್ಕಾರ ... ಅದನ್ನು ಗಮನಕ್ಕೆ ತೆಗೆದುಕೊಳ್ಳುವುದಿ...ವೆಂದು ಅರಿವಾಗುತ್ತಿದ್ದಂತೆಯೇ ಅವ... ವಿಷದ ಬಾಟಲಿಯನ್ನು ಮುಂದಿಟ್ಟುಕೊಂ... ತಮ್ಮ ಹೋರಾಟವನ್ನು ಮುಂದುವ...ದರು. ಆಗಲೂ ಸರ್ಕಾರವು ಕಣ್ಣು ತೆರೆಯಲಿಲ್ಲವೆಂ... ಅವರಿಗೆ ಅರಿವಾಗುತ್ತಿದ್ದಂತೆಯೇ ದರ್ಶನ್ ಮತ್ತು ಸಿದ್ದೇ...


# ಬೆಂಗಳೂರು ಕಸಾಪ: ಮತ್ತೊಮ್ಮೆ ಕನ್ನಡದ ಹಬ್ಬ

ಬೆಂಗಳೂರು ನಗರದಲ್ಲಿ ಇನ್ನೊಮ್ಮೆ ಕನ್ನಡ ಸಾಹಿತ್ಯದ ಹಬ್ಬ ಏರ್ಪಾಡಾಗಿದೆ. ಇದೇ ಸೆಪ್ಟೆಂಬರ್ 3,4, ಹಾಗೂ 5ರಂದು ಬೆಂಗಳೂರು ನಗರ ಜಿಲ್ಲಾ 6ನೇ ಕನ್ನಡ ಸಾಹಿತ್ಯ ಸಮ್ಮೇಳನ ಏರ್ಪಾಡಾಗಿದೆ. ಪ್ರೊ.ಎಚ್.ಆರ್. ದಾಸೇಗೌಡರೇ ಸಮ್ಮೇಳನಾಧ್ಯಕ್ಷರು. ಈ ಸಮ್ಮೇಳನದ ವಿವರಗಳನ್ನು ಗಮನಿಸಿದಾಗ ತಕ್ಷಣಕ್ಕೆ ಅನ್ನಿಸುವುದು ಮೂರು ದಿನದ ಸಮ್ಮೇಳನದ ಅವಧಿ ಸ್ವಲ್ಪ ದೊಡ್ಡದೇ ಆಯಿತೆಂದು ಜೊತೆಗೆ ಸಮ್ಮೇಳನದ ಏರ್ಪಾಡು ವ್ಯವಸ್ಥೆ ಗೋಷ್ಠಿಗಳನ್ನು ನೋಡಿದರೆ ವಿಪರೀತ ಹಣವೂ ಖರ್ಚಾಗುವಂತೆ ಕಾಣುತ್ತಿದೆ. ಆದರೆ ಅದ್ಯಾವ ಧೈರ್ಯವೋ ಬೆಂಗಳೂರು ನಗರ ಕಸಾಪದವರು ಇಡೀ ಸಮ್ಮೇಳನದ ಜವಾಬ್ದಾರಿ ಹೆಗಲ ಮೇಲೆ ಹೊತ್ತು ಅತ್ಯುತ್ಸಾಹದಿಂದ ಮುಂದಡಿ ಇರಿಸಿದ್ದಾರೆ.

ಬೆಂಗಳೂರು ಕಸಾಪ ಘಟಕದವರು ಹಾಗೂ ಜಿಲ್ಲಾಧ್ಯಕ್ಷ ಸಿ.ಕೆ. ರಾಮೇಗೌಡರು ತಮ್ಮ ಪಾಡಿಗೆ ತಾವು ಕನ್ನಡ ಕಟ್ಟುವ ಕೆಲಸದಲ್ಲಿ ತೊಡಗಿರುವುದು ಎದ್ದು ಕಾಣುತ್ತಿದೆ.

ಕರ್ನಾಟಕದ ಪ್ರತಿ ಜಿಲ್ಲೆ ಹಾಗೂ ತಾಲ್ಲೂಕುಗಳಲ್ಲಿರುವ ಕನ್ನಡ ಸಾಹಿತ್ಯ ಪರಿಷತ್‌ನ ಘಟಕಗಳ ಚಟುವಟಿಕೆಗಳು ಏನೇನು ನಡೆಯುತ್ತಿವೆಯೋ ನಿಖರ ಮಾಹಿತಿ ಇಲ್ಲ, ಆದರೆ ಬೆಂಗಳೂರು ನಗರ ಜಿಲ್ಲಾ ಕಸಾಪ ಘಟಕದ ಕೆಲಸಗಳು ಆಶ್ಚರ್ಯ ಹುಟ್ಟಿಸುವಷ್ಟು ಪ್ರಮಾಣದಲ್ಲಿ ನಡೆಯುತ್ತಿರುವುದಂತೂ ನಿಜ.

ಕಸಾಪ ಘಟಕಗಳಲ್ಲಿ ಸಾಮಾನ್ಯವಾಗಿ ದತ್ತಿನಿಧಿ ಉಪನ್ಯಾಸಗಳು, ಸಾಂಸ್ಕೃತಿಕ ಕಾರ್ಯಕ್ರಮಗಳದ್ದೇ ಹೆಚ್ಚಿನ ಪಾಲು. ಬೆಂಗಳೂರು ಕಸಾಪ ಘಟಕವು ಇದಿಷ್ಟೇ ಅಲ್ಲದೆ ಕೆಲ ರಚನಾತ್ಮಕ ಕೆಲಸಗಳಿಗೂ ಕೈಹಾಕಿದೆ. ಇದರಲ್ಲಿ 'ಕನ್ನಡ ಕುಲೋದ್ಧಾರಕರು ಮಾಲಿಕೆ' ಗಮನಾರ್ಹವಾಗಿದೆ. ಡಿವಿಜಿ, ಅನಕೃ, ಉತ್ತಂಗಿ ಚನ್ನಪ್ಪ, ನಾಲ್ವಡಿ ಕೃಷ್ಣರಾಜ ಒಡೆಯರ್, ತರಾಸು, ಬಿಎಂಶ್ರೀ, ಗುಬ್ಬಿ ವೀರಣ್ಣ... ಮುಂತಾದ ಗಣ್ಯರನ್ನು ಪರಿಚಯಿಸುವ ಈ ಕಿರು ಪುಸ್ತಕಗಳು ಆಕರ್ಷಕವಾಗಿವೆ. ವಿದ್ಯಾರ್ಥಿ ಯುವ ಜನರಿಗೆ ಆಧುನಿಕ ಕರ್ನಾಟಕ ಪರಂಪರೆಯ ಪರಿಚಯದ ಪ್ರವೇಶಕ್ಕೆ ಈ ಕಿರು ಪುಸ್ತಗಳ ಪ್ರಕಟಣೆ ನಿಜಕ್ಕೂ ಶ್ಲಾಘನೀಯ ಕಾರ್ಯ. ಇದರ ಇನ್ನೊಂದು ವಿಶೇಷ ಏನೆಂದರೆ ಪ್ರತಿ ಕಿರುಪುಸ್ತಕದ ಐದುಸಾವಿರ ಪ್ರತಿಗಳನ್ನು ಮುದ್ರಿಸಿರುವುದು. ಕನ್ನಡ ಪರ ಕಾಳಜಿಯಿರುವ ದಾನಿಗಳಿಂದ ನೆರವು ಪಡೆದು ಈ ಪುಸ್ತಕಗಳನ್ನು ಮುದ್ರಿಸಲಾಗಿದೆ. ಸರಾಸರಿ 50 ಪುಟಗಳಿರುವ ಈ ಪುಸ್ತಕಗಳ ಬೆಲೆ ಕೇವಲ ಐದು ರೂಪಾಯಿ!



ರಾಮೇಗೌಡ

ಕಿರುಪುಸ್ತಕಗಳು



ಬೆಂಗಳೂರು ನಗರದಾದ್ಯಂತ ಹರಡಿಕೊಂಡಿರುವ ಕಸಾಪ ಘಟಕಗಳ ಕೆಲವು ಉತ್ಸಾಹಿಗಳು ಈ ಕಿರುಪುಸ್ತಕಗಳ ಸಾವಿರಾರು ಪ್ರತಿಗಳನ್ನು ಜನರಿಗೆ ಉಚಿತವಾಗಿಯೂ ಹಂಚುತ್ತಿದ್ದಾರೆ. ಇದೂ ಒಂದು ರೀತಿಯಲ್ಲಿ ಕನ್ನಡದ ಕಂಪನ್ನು ಹಬ್ಬಿಸುವ ಕೆಲಸವೇ ಆದರೂ ಸಹ ಏನನ್ನೇ ಆಗಲಿ ಉಚಿತವಾಗಿ ಕೊಡುವುದು ಸರಿಯೇ ಎಂಬ ಪ್ರಶ್ನೆ ಬಂದೇ ಬರುತ್ತದೆ. ಇನ್ನೊಂದು ತುದಿಯಲ್ಲಿರುವ ಓದುಗರೂ ಕನ್ನಡಿಗರೇ ಆಗಿರುತ್ತಾರಾದ್ದರಿಂದ ಐದು ರೂಪಾಯಿ ತೆತ್ತು ಈ ತರದ ಕಿರು ಪುಸ್ತಕಗಳನ್ನು ಕೊಳ್ಳುವಂತೆ ಪ್ರೇರೇಪಿಸುವ ಕೆಲಸವಾದರೆ ಒಳಿತಲ್ಲವೇ?

ಸಿ.ಕೆ. ರಾಮೇಗೌಡರು ಈ ಬಗ್ಗೆ ಯೋಚಿಸಲಿ.


2009ರಲ್ಲೂ ನಗರ ಕಸಾಪ ಜಿಲ್ಲಾ ಸಮ್ಮೇಳನ ನಡೆಸಿತ್ತು. ಆಗ ಬಿ.ಟಿ.ಲಲಿತಾ ನಾಯಕ್ ಸಮ್ಮೇಳನಾಧ್ಯಕ್ಷರಾಗಿದ್ದರು. ಆ ಸಂದರ್ಭದಲ್ಲಿ ಡಾ. ಬೈರಮಂಗಲ ರಾಮೇಗೌಡ ಸಂಪಾದಕತ್ವದಲ್ಲಿ 'ಮಹಾನಗರಿ' ಎಂಬ ಸ್ಮರಣ ಸಂಚಿಕೆ ಪ್ರಕಟವಾಗಿತ್ತು. ಹಾಲಿ ಬಿಜೆಪಿಯ ಅನೇಕ ಕೋಮುವಾದಿ ಮತ್ತು ಸಂಸ್ಕೃತವಾದಿಗಳ ದೊಡ್ಡ ದೊಡ್ಡ ಫೋಟೋಗಳ ಕಿರಿಕಿರಿಯನ್ನು ಮರೆತು ನೋಡಿದರೆ ಆ ಸಂಚಿಕೆಯಲ್ಲಿ ಕೆಲ ಉತ್ತಮ ಬರಹಗಳಿದ್ದವು. ಪ್ರೊ.ಟಿ. ಅಶ್ವತ್ಥನಾರಾಯಣರ 'ಕನ್ನಡ ಕೀರ್ತನ ಸಾಹಿತ್ಯ' ರಾಜಪ್ಪ ದಳವಾಯಿಯವರ 'ಕನ್ನಡ ರಂಗಭೂಮಿ ಪ್ರಯೋಗ ಮತ್ತು ಸಿದ್ಧಾಂತ', ಮೀರಾಸಾಬಿಹಳ್ಳಿ ಶಿವಣ್ಣನವರ 'ಬದಲಾ ವಣೆಯ ಬಿರುಗಾಳಿಯಲ್ಲಿ ಬುಡಕಟ್ಟುಗಳು' ಮುಂತಾದ ಲೇಖನಗಳು ಸಂಗ್ರಹಯೋಗ್ಯವಾಗಿದ್ದವು.

ಇವೆಲ್ಲಾ ನಿಜಕ್ಕೂ ಕನ್ನಡ ಕಟ್ಟುವ ಕೆಲಸಗಳೇ. ಆದರೆ ಅನವಶ್ಯಕ ಅದ್ದೂರಿತನ ಬೇಕೆ ಎನ್ನುವುದನ್ನು ಈ ಕನ...ಗೆಳೆಯರು ಕೇಳಿಕೊಳ್ಳಲಿ.

ಅಂದಹಾಗೆ ಇತರ ಜಿಲ್ಲಾ ಕಸಾಪ ಘಟಕಗ... ಬೆಂಗಳೂರು ನಗರದ ಕಸಾಪ ಕೆಲಸಗಳನ್ನು ಗಮನಿಸಿ... ಆಯಾ ಜಿಲ್ಲೆಗಳಲ್ಲೂ ಇಷ್ಟೇ ರಚನಾತ್ಮಕ ಕೆಲಸ ನಡೆಸ... ಸಾಧ್ಯವಿದೆ.

• ಪಾರ್ವತೀ...






ದಾಸೇಗೌಡ

## ಪ್ರೊ. ಎಚ್.ಆರ್.ದಾಸೇಗೌಡರ ಬಗ್ಗೆ

ನಗರ ಜಿಲ್ಲಾ 6ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿರುವ ಪ್ರೊ.ಎಚ್.ಆರ್ ದಾಸೇಗೌಡರು ಅನೇಕ ವರ್ಷಗಳ ಕಾಲ ಬೆಂಗಳೂರು ವಿಶ್ವವಿದ್ಯಾಲಯದ ಪ್ರಸಾರಾಂಗದ ನಿರ್ದೇಶಕರಾಗಿದ್ದವರು. ಉತ್ತಮ ಮೌಲ್ಯ ಅಭಿರುಚಿಗಳ ಅಸಂಖ್ಯಾ ಪುಸ್ತಕಗಳನ್ನು ಪ್ರಕಟಿಸಿದವರು. ಕೆಲಕಾಲ ಎಪಿಎಸ್ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದು ಕಸಾಪದೊಂದಿಗೂ ಒಡನಾಟವಿಟ್ಟುಕೊಂಡವರು. ತುಮಕೂರಿನವರಾದ ದಾಸೇಗೌಡರು ರಾಜ್ಯಶಾಸ್ತ್ರ ಹಾಗೂ ಕಾನೂನು ಶಾಸ್ತ್ರ ಕುರಿತ ಪುಸ್ತಕಗಳನ್ನು ಬರೆದಿದ್ದಾರೆ. ಕರುಣಾನಿಧಿ ಸೇರಿದಂತೆ ಅನೇಕರ ವ್ಯಕ್ತಿ ಚಿತ್ರ ನಿರೂಪಿಸಿದ್ದಾರೆ. ಸ್ವಾತಂತ್ರ್ಯ ಆಂದೋಲನದಲ್ಲೂ ಭಾಗಿಯಾಗಿದ್ದ ದಾಸೇಗೌಡರಿಗೆ ಇದು ಸೂಕ್ತ ಗೌರವ.

ು ಮುಷ್ಕರನಿರತ ಯುವಕರಿಬ್ಬರು ವಿಷವನ್ನು ಕುಡಿದೇ ರು. ಆಗ ತಕ್ಷಣವೇ ಎಚ್ಚೆತ್ತುಕೊಂಡ ಸರ್ಕಾರವು ತ್ತಿ ಈದರೆ ಕೊಟ್ಟಿಗೆಯಲ್ಲಿ ಕಟ್ಟು ಎನ್ನುವಂತೆ' 8-2010ರಂದು 307 ಮಂದಿಯ ನೇಮಕಾತಿ ಶವು ಅಕ್ರಮವೆಂದು ಪರಿಗಣಿಸಿ ಹಿಮ್ಸ್ ಸಂಸ್ಥೆಯು ದಿರುವ ಮೇಲ್ಕಂಡ ನೇಮಕಾತಿಗಳನ್ನು ಅನೂರ್ಜಿತ ಗಿಸಿ ರದ್ದುಪಡಿಸುವ ಆದೇಶವನ್ನು ಹೊರಡಿಸಿದೆ. ಲ್ಕಂಡ ತನ್ನ ಆದೇಶದಲ್ಲಿ ಸರ್ಕಾರವು 'ಈ 307 ಧೇತರ ಹುದ್ದೆಗಳನ್ನು ತುಂಬಲು ನಡೆಸಿದ ಸಂದರ್ಶನವು ದರ್ಶಕವಾಗಿಲ್ಲ. ಸರಿಯಾದ ಮಾಹಿತಿಯನ್ನು ರ್ಥಿಗಳಿಗೆ ನೀಡಿಲ್ಲ ಮತ್ತು ಮೆರಿಟ್ ಹಾಗೂ ರೋಸ್ಟರ್ ಯಮಗಳ ಉಲ್ಲಂಘನೆಯಾಗಿರುವುದು ಮೇಲ್ನೋಟಕ್ಕೆ ಬರುತ್ತದೆ. ಸಂದರ್ಶನದಲ್ಲಿ ಪಡೆದ ಅಂಕಗಳ ಯನ್ನು ಸಂದರ್ಶನ ನಡೆಸಿದ ದಿನವೇ ಪ್ರಕಟಿಸಬೇಕಾಗಿದ್ದು ಹ ಪ್ರಕ್ರಿಯೆಯನ್ನು ಈ ಪ್ರಕರಣದಲ್ಲಿ ಪಾಲಿಸದೇ



ಮಗಳ ಸ್ಪಷ್ಟ ಉಲ್ಲಂಘನೆಯಗಿರುತ್ತದೆ' ಹೀಗೆ ಸ್ವಾಯತ್ತ ಯನ್ನು ಬೀದಿಗೆಳೆದ ಸರ್ಕಾರವು ನೀಡಿರುವ ಾಗಳಂತೂ ಸಮರ್ಥನೆ ಮಾಡಲು ಸಾಧ್ಯವಿಲ್ಲದಂತಹ ವಸ್ಥೆಯಲ್ಲಿದೆ. ಹಿಮ್ಸ್‌ನ ಅಧ್ಯಕ್ಷರಾಗಿರುವ ವೈದ್ಯಕೀಯ ಸಚಿವರಾದ ರಾಮಚಂದ್ರಗೌಡರು ಈ ಬಗ್ಗೆ ಯಾವುದೇ ಹೇಳಿಕೆಯನ್ನು ನೀಡದೆ ಮೌನವಾಗಿ ಉಳಿದಿ ಹೆಚ್. ಡಿ. ರೇವಣ್ಣನವರು ಚಿವುಟುತ್ತಾ ತೊಟ್ಟಿಲನ್ನೂ ತ್ತಾ ಹಾಯಾಗಿದ್ದಾರೆ.

ಈ ನಡುವೆ ದಿ 31-8-2010ರ ರಾತ್ರಿಯಂದು ಮಳಾ ಎಂಬ ಒಬ್ಬ ಮುಷ್ಕರನಿರತ ಮಹಿಳೆಯ ನಡೆದಿರುವ ಆಸಿಡ್ ದಾಳಿಯು ಉತ್ತರವಿಲ್ಲದ ಪ್ರಶ್ನೆಗಳನ್ನು ಸೃಷ್ಟಿಸಿದೆ. ಇಡೀ ಆಸ್ಪತ್ರೆಯ ಆವರಣವೇ ನವಾಗಿದ್ದ ಅಪರಾತ್ರಿಯಲ್ಲಿ ಮೆಡಿಕಲ್ ಕಾಲೇಜಿನ ಮುಂಭಾಗದಿಂದ ಆಸ್ಪತ್ರೆಯವರೆಗೆ ಕೇವಲ ಒಬ್ಬ ಮಹಿಳೆ ಯಾಕೆ ಒಬ್ಬೊಂಟಿಯಾಗಿ ಶೌಚಕ್ರಿಯೆಗಾಗಿ ನಡೆದುಕೊಂಡು ಹೋಗುತ್ತಿದ್ದಳು? ಆಕೆ ತನ್ನೊಡನೆ ಬೇರೆ ಯಾರನ್ನೂ ಯಾಕೆ ಕರೆದುಕೊಂಡು ಹೋಗಲಿಲ್ಲ? ಆಸಿಡ್ ದುರ್ಬಲ ಪ್ರಮಾಣದಲ್ಲಿ ಇತ್ತು ಹೀಗಾಗಿ ಕೇವಲ ಶೇ.5ರಷ್ಟು ಸುಟ್ಟ ಗಾಯಕ್ಕೊಳಗಾಗಿದ್ದಾಳೆ. ಈ ಆಸಿಡ್ ಪ್ರಕರಣದ ಹಿಂದೆ ಮುಷ್ಕರ ನಿರತರ ಹೋರಾಟಕ್ಕೆ ತೀವ್ರತೆ ನೀಡುವಂತಹ ಪ್ರಯತ್ನವೇನಾದರೂ ಅಡಗಿದೆಯೇ? ಅಥವಾ ಮುಷ್ಕರನಿರತರನ್ನು ಬೆದರಿಸುವ ತಂತ್ರಗಾರಿಕೆಯೇನಾದರೂ ಇದರ ಹಿನ್ನೆಲೆಯಲ್ಲಿದೆಯೇ? ಅಥವಾ ರಾಜಕೀಯ ಶಕ್ತಿಗಳ ಕೈವಾಡವೇನಾದರೂ ಅಡಗಿದೆಯೇ?


ಈಗಾಗಲೇ 307 ಮುಷ್ಕರನಿರತರ ಪೈಕಿ ಕೆಲವರು ಉಚ್ಚನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿದ್ದಾರೆ . ಈ ಬಗ್ಗೆ ಉಚ್ಚ ನ್ಯಾಯಾಲಯವು 'ಸಿಬ್ಬಂದಿ ನೇಮಕಾತಿಯಲ್ಲಿ ಅಕ್ರಮವೆಸಗಿದ ಆಯ್ಕೆ ಸಮಿತಿಯ ಅಧಿಕಾರಿಗಳ ವಿರುದ್ಧ ತಾಕತ್ತಿದ್ದರೆ ಕ್ರಮ ಕೈಗೊಳ್ಳಿ; ಅದನ್ನು ಬಿಟ್ಟು ಮುಗ್ಧ ಸಿಬ್ಬಂದಿ ವಿರುದ್ಧ ಇಂತಹ ಕ್ರಮವೇಕೆ?' ಎಂದು ಪ್ರಶ್ನಿಸಿರುವುದೂ ಅಲ್ಲದೆ ಸರ್ಕಾರ ಈ ಬಗ್ಗೆ ತೀರ್ಮಾನಕ್ಕೆ ಬರಲು ಒಂದು ವಾರದ ಗಡುವನ್ನು ನೀಡಿದೆ. ಇಲ್ಲವಾದರೆ ತನ್ನ ತೀರ್ಮಾನವನ್ನು ತಿಳಿಸಬೇಕಾಗುತ್ತದೆ ಎಂಬ ಅಂಶವನ್ನು ಕೂಡಾ ಅಲ್ಟಿಮೇಟಮ್ ತರ ಸ್ಪಷ್ಟೀಕರಿಸಿದೆ.

ಈ ಬಗ್ಗೆ ಯಡ್ಯೂರಪ್ಪನವರು ಇಕ್ಕಟ್ಟಿಗೆ ಸಿಲುಕಿದ್ದಾರೆಯೇ? ಈ ಪ್ರಕರಣವು ರಾಮಚಂದ್ರ ಗೌಡರ ತಲೆದಂಡವನ್ನು ಬೇಡುತ್ತದೆಯೇ? ಹೆಚ್. ಡಿ. ರೇವಣ್ಣನವರು ಆರೋಪಿಸಿರುವಂತೆ ರಾಮಚಂದ್ರ ಗೌಡರ ಆಪ್ತ ಕಾರ್ಯದರ್ಶಿ ವಿರೂಪಾಕ್ಷನ ಮೂಲಕ ಕೋಟ್ಯಾಂತರ ರೂಪಾಯಿಗಳ ಭ್ರಷ್ಟಾಚಾರ ನಡೆದಿದೆಯೇ? ಅಥವಾ ಈ ಪ್ರಕರಣವು ಬಜೆಪಿ ಮತ್ತು ಜೆಡಿಎಸ್‌ನ ರಾಜಕೀಯ ಬಲಾಬಲಗಳ ರಣರಂಗವಾಗಿದೆಯೇ? ಈ ಎಲ್ಲಾ ಪ್ರಶ್ನೆಗಳೂ ಸಾರ್ವಜನಿಕರ ಕುತೂಹಲಕ್ಕೆ ಎಡೆಮಾಡಿದೆ. ವಿವಾದಗಳಿಂದ ಸದಾ ಸುದ್ದಿಯಲ್ಲಿರುವ ಯಡ್ಯೂರಪ್ಪನವರು ವಿವೇಚನೆ ಇಲ್ಲದೆ ಮೈಮೇಲೆ ಎಳೆದುಕೊಂಡಿರುವ ಈ ಸಮಸ್ಯೆಗೆ ಪರಿಹಾರವನ್ನು ತಾವೇ ಕಂಡುಕೊಳ್ಳುತ್ತಾರೆಯೇ? ಅಥವಾ ಉಚ್ಚನ್ಯಾಯಾಲಯವೇ ಈ ಸಮಸ್ಯೆಗೆ ಪರಿಹಾರವನ್ನು ಒದಗಿಸುತ್ತದೆಯೇ ಎಂಬುದು ಮುಂಬರುವ ದಿನಗಳ ವಿದ್ಯಮಾನ. ಚದುರಂಗದಾಟದ ಪದಾತಿಗಳಾಗಿರುವ 29/307ರ ಸಿಬ್ಬಂದಿಯ ಅನ್ನದ ಪ್ರಶ್ನೆ ಭ್ರಷ್ಟ ವ್ಯವಸ್ಥೆಯಲ್ಲಿ ಹೇಗೆ ರಾಜಕೀಕರಣಗೊಳ್ಳುತ್ತದೆಂಬುದಕ್ಕೆ ಇದಕ್ಕಿಂತ ಒಳ್ಳೆಯ ದೃಷ್ಟಾಂತ ಬೇಕಿಲ್ಲ. ●

# 6 ಎಡವಟ್ಟು ಮಂತ್ರಿದ್ವಯರ ಮಸಲತ್ತು

ವಂತೆ ಅಸ್ನೋಟಿಕರ್ ಡಿಸಿಗೆ ತಾಕೀತು ಮಾಡಿದ್ದ. ಸೊಪ್ಪು ಹಾಕದ ಡಿಸಿ ಎದುರಾಳಿ ಕಾಂಗ್ರೆಸ್ಸಿಗರು ದೂರು ದಾಖಲಿಸಿಕೊಂಡಿದ್ದರು. ಇದು ಭಂಡ ಟಿಕರ್‌ನ ಕೆರಳಿಸಿತ್ತು. ಈ ಡಿಸಿ ಕಾರವಾರದಲ್ಲಿ ದರೆ ತನ್ನ ಸಹಚರರ ಕೌನ್ಸಿಲರಿಕೆಗೆ ಕುತ್ತು ಬರುತ್ತದೆಂಬ ಅಸ್ನೋಟಿಕರ್ ಬಿದ್ದಿದ್ದ.

ಸಿ ಅಮರನಾರಾಯಣರ ನಿಷ್ಪಕ್ಷಪಾತ-ಕಾನೂನು ನಿಷ್ಠ ಚರಣೆ ಕಾಗೇರಿ-ಅಸ್ನೋಟಿಕರ್ ಇಬ್ಬರನ್ನು "ಸಮಾನ "ಗಳನ್ನಾಗಿಸಿಬಿಟ್ಟಿತು. ತಮ್ಮ ಅಕ್ರಮ-ಅನ್ಯಾಯ- ರಕ್ಕೆಲ್ಲ ಸರ್ಕಾರಿ ಸಿಂಧುತ್ವದ ಮುದ್ರೆ ಒತ್ತದ ಈ ಎಂದಿದ್ದರೂ ತಮಗೆ ಮಗ್ಗಲು ಮುಳ್ಳೆ ಎಂಬ ಶ ಇಬ್ಬರಲ್ಲೂ ಏಕಕಾಲದಲ್ಲಿ ಉದ್ಭವಿ ಈ ಡಿಸಿ ಹೀಗೆ ಜನಪರ ಬದ್ಧತೆಯಿಂದ ಮಾಡುತ್ತಾ ಹೋದರೆ ಅಷ್ಟೇ ಬಿರುಸಾಗಿ ಅಯೋಗ್ಯತೆ ಜಿಲ್ಲೆಯ ಜನರೆದುರು ರಣಗೊಳ್ಳುತ್ತ ಹೋಗುತ್ತದೆಂಬುದು ಮಾಗಿ ಹೋಯ್ತು ಕಾಗೇರಿ- ಟಿಕರ್ ಜೋಡಿಗೆ. ಹಾಗಾಗಿ ತಮ್ಮ ಪ ಮುಚ್ಚಿಕೊಂಡು ಬಚಾವಾಗುವ ಉದ್ದೇಶದಿಂದ ಕಾಗೇರಿ-ಅಸ್ನೋಟಿಕರ್ ಲಿ ಪಡೆವ ಹಠಕ್ಕೆ ಬಿದ್ದುಬಿಟ್ಟರು.




ಲ್ಲೆಯ ಜನರ ಋಣದಿಂದ ಉನ್ನತ ಸ್ಥಾನಕ್ಕೇರಿದ -ಅಸ್ನೋಟಿಕರ್‌ಗೆ ಜಿಲ್ಲೆಯ ಅಭಿವೃದ್ಧಿ ಪರಿಕಲ್ಪನೆ, ಜ್ಞಾನದ ಕಳಕಳಿ ಇರಲೇಬೇಕಿತ್ತು. ಆದರೆ ವೇಸ್ಟ್‌ಬಾಡಿ ಗಿರುವ ಕಾಗೇರಿ-ಅಸ್ನೋಟಿಕರ್‌ರಲ್ಲಿ ಇಲ್ಲದ ಸ್ವತ್ವ-ಜವಾಬ್ದಾರಿ ಡಿಸಿ ಅಮರನಾರಾಯಣರ ದಿ-ನೌಕರಿಯಲ್ಲಿತ್ತು. ಈ ನಿರ್ಲಕ್ಷಿತ ಜಿಲ್ಲೆಯ ಗಳನ್ನು ಆದಷ್ಟು ಬೇಗ ಪರಿಹರಿಸಬೇಕೆಂಬ ಚಿಂತನೆ, ಮತ್ತು ನೆರೆ ಹಾವಳಿ ನಿರಾಶ್ರಿತರ ಬಗ್ಗೆ ತಾಯಿ ಕಳಕಳಿ, ಪರಿಸರ ಕಾಳಜಿ, ಕೃಷಿ ಕಾಳಜಿ, ನೆಲ ಬಗ್ಗೆ ಬದ್ಧತೆ ಮತ್ತು ಶ್ರಮ ಗೌರವದ ಅಪರೂಪದ ಾರಿ ಈ ಅಮರನಾರಾಯಣರೆಂಬ ಭಾವನೆ ಉತ್ತರ ಉದ್ದಗಲಕ್ಕೆ ವ್ಯಾಪಿಸಿದೆ. ಇಂಥ ರಚನಾತ್ಮಕ ಕೆಲಸಗಾರನ ಬಳಸಿಕೊಂಡು ಕಾಗೇರಿ- ಅಸ್ನೋಟಿಕರ್ ಜಿಲ್ಲೆಯ ಚಿತ್ರಣವನ್ನೇ ಬದಲಿಸಬಹುದಿತ್ತು. ಅಂಥ ಸಂಕಲ್ಪ-ಉದಾತ್ತ ಈ ಕ್ಷುದ್ರ ಪುಢಾರಿಗಳಿಗೆ ಅದ್ವೇಗೆ ಬಂದೀತು?

ಒಟ್ಟಿನಲ್ಲಿ ಈ ಚೆಡ್ಡಿ ಸಂಸ್ಕೃತಿ ಶೂರರಿಗೆ ಡಿಸಿ ಅಮರನಾರಾಯಣರ ಒಳ್ಳೆತನಗಳೇ ಮಹಾಪರಾಧವಾಗಿ ಕಂಡಿದೆ! ಈತನನ್ನು ಜಿಲ್ಲೆಯಲ್ಲಿಟ್ಟುಕೊಂಡರೆ ತಮ್ಮ ಗಂಡಾಗುಂಡಿ ರಾಜಕೀಯಕ್ಕೆ ಉಳಿಗಾಲವಿಲ್ಲವೆಂಬ ತೀರ್ಮಾನಕ್ಕೆ ಮಂತ್ರಿದ್ವಯರು ಬಂದಿದ್ದಾರೆ. ಮನೆಯಂಗಳಕ್ಕೆ ಬಂದ ಚೆಂಡನ್ನು ಎತ್ತಿ ಎಸೆಯುವಂತೆ ಐಎಎಸ್ ಅಧಿಕಾರಿ ಅಮರನಾರಾಯಣರನ್ನು ವರ್ಗಾಯಿಸಲು ಕಾಗೇರಿ-ಅಸ್ನೋಟಿಕರ್ ಹವಣಿಸುತ್ತಿರುವ ಸುದ್ದಿ ಗೊತ್ತಾಗುತ್ತಿದ್ದಂತೆ ಜಿಲ್ಲೆಯ ಜನ ತಿರುಗಿ ಬಿದ್ದಿದ್ದಾರೆ. ಬೆಟರ್ ಡಿಸಿ ಅಮರನಾರಾಯಣರನ್ನು ಜಿಲ್ಲೆಯಲ್ಲೇ ಉಳಿಸಿಕೊಳ್ಳುವಂತೆ ಮತಿಗೇಡಿ ಮಂತ್ರಿಗಳಿಗೆ 'ಎಚ್ಚರಿಕೆ' ಕೊಡುತ್ತಿದ್ದಾರೆ. ಜನರ ಅಸಹನೆ ಆಕ್ರೋಶವಾಗಿ ಆಸ್ಫೋಟವಾಗುವ ಮೊದಲೇ ಕಾಗೇರಿ-ಅಸ್ನೋಟಿಕರ್ ಬುದ್ಧಿ ಕಲಿಯಬೇಕಿದೆ. ಒಣಪ್ರತಿಷ್ಠೆಯಿಂದಾಗಿ ಜಿಲ್ಲೆಗೆ ಅನ್ಯಾಯ ಮಾಡಿದರೆ ಆ 'ಪಾತಕದ ಫಲ' ಕಾಗೇರಿ-ಅಸ್ನೋಟಿಕರ್‌ರ ಬೆನ್ನತ್ತಿ ಬರುವುದಂತೂ ಖಾತ್ರಿ!!

ಈಗ ಹೇಳಿ? ಕಸಬರಿಗೆ ಹಿಡಿದು ಗುಡಿಸಿದ, ಆಡಳಿತ ಸುಧಾರಣೆ ಮಾಡಿ ಜನಸಾಮಾನ್ಯರಿಗೆ ಸ್ಪಂದಿಸುತ್ತಿರುವ ಅಮರನಾರಾಯಣರಿಂದ ಡಿಸಿ ಹುದ್ದೆ ನಗೆಪಾಟಲಿಗೀಡಾಗಿದೆಯಾ? ಅಥವಾ ಸಿಕ್ಕ ಅಧಿಕಾರ ಜನಪರವಾಗಿ ಬಳಸದೆ ಜಿಲ್ಲೆಗೆ ದ್ರೋಹ ಮಾಡುತ್ತಿರುವ "ಮುಕ್ಕಣ್ಣ" ಕಾಗೇರಿ-ಅಸ್ನೋಟಿಕರ್‌ರಿಂದ ಸಚಿವ ಸ್ಥಾನ ನಗೆಪಾಟಲಿಗೀಡಾಗಿದೆಯಾ? ಕೊಟ್ಟ ಕುದುರೆಯನ್ನೇರಲಾಗದೆ ಉರುಳುರುಳಿ ಬೀಳುತ್ತಿರುವ ಇವರೆಂಥ ಮಂತ್ರಿಗಳು?!


● ನಹುಶ

# ಕಪ್ಪಕ್ಕಾಗಿ ತಿಪ್ಪರಲಾಗ ಹಾಕುತ್ತಿರುವ ಅಬಕಾರಿ ರೇಣುಕಾ ಮಹಾತ್ಮ!



ಸ್ವಯಂಘೋಷಿತ ದೇಶಭಕ್ತ-ದಕ್ಷಾತಿದಕ್ಷ ಮುಖ್ಯಮಂತ್ರಿ ಶ್ರೀಮಾನ್ ಯಡ್ಡಿಜೀ ಕ್ಯಾಬಿನೆಟ್ ಎಂದರೆ ಅದೊಂಥರಾ "ಕಾರ್ಪೆಟ್ ಬೆಗ್ಗರ್ಸ್" ಟೋಳಿ! ಈ ಚೋರ ಚೆಡ್ಡಿ ಸರ್ಕಾರದಲ್ಲಿ ಅಡ್ಡ ಕಸುಬಿ ತಿರೆಬೋಕಿಗಳದೇ ಹಾವಳಿ!! ಯಡ್ಡಿ ನೇಮಿಸಿಕೊಂಡಿರುವ ಮಂತ್ರಿ ಮಹೋದಯರಲ್ಲಿ ಅನೇಕರದು ಸ್ವಾಹಾಸದ್ದೇ ಸಾಧನೆ. ಈ ಸಂಭಾವಿತರ ಹಗರಣಗಳು ಅದೆಷ್ಟೇ ಕಷ್ಟಪಟ್ಟು ಯಜಮಾನ ಯಡ್ಡಿ ಮುಚ್ಚಿಟ್ಟರೂ ಈಗೀಗ ಅವೆಲ್ಲಾ ತಂತಾನೆ ಒಂದೊಂದಾಗಿ ಹೊರಬರಹತ್ತಿದೆ. ಸಿಎಂ ಸಾಹೇಬರ ಬ್ಲಾಕ್‌ಮೇಲ್ ಮಾಡಿಯೇ ಮಂತ್ರಿಯಾದ ರಗಳೆ ರೇಣುಕಾಚಾರ್ಯ ಅಬಕಾರಿ ಅಸ್ತ್ರ ಝಳಪಿಸುತ್ತ ಕಲೆಕ್ಷನ್‌ಗೆ ಕೈಹಾಕಿರುವ ಹಪಾಹಪಿ ಹಕೀಕತ್ ಒಂದಿಲ್ಲಿದೆ....

ಹೊಟ್ಟೆಬಾಕ ಬಿಜೆಪಿಗರ ಸರ್ಕಾರದಲ್ಲಿ ಅಬಕಾರಿ ಇಲಾಖೆ ಕಟ್ಟಾ ಸುಬ್ರಹ್ಮಣ್ಯ ನಾಯ್ಡುನ ಕಾಲಕೀರ್ದಿಯಲ್ಲೇ ಕೆಟ್ಟು ಕೆರೆಹಿಡಿದು ಹೋಗಿತ್ತು. ಯಾವಾಗ ನಿರ್ಲಜ್ಜ ರೇಣುಕಾಚಾರ್ಯ ಮಂತ್ರಿಯಾಗಿ ಅಬಕಾರಿ ಇಲಾಖೆಗೆ ವಕ್ಕರಿಸಿದನೋ ಆಗಲ್ಲಿ ಕಾಸಿಲ್ಲದೇ ಏನೂ ನಡೆಯದಂತಾಯ್ತು! ಹೆಂಡೋದ್ಯಮಿಗಳಿಗೆ, ವೈನ್‌ಶಾಪ್‌ನವರಿಗೆ ಅಧಿಕಾರಿಗಳ ಮೂಲಕವೇ ಹೊಸ ಹಫ್ತಾ ರೇಣು ಫಿಕ್ಸ್ ಮಾಡಿಸಿದ. ಮರ್ಯಾದಸ್ಥ ಅಧಿಕಾರಿಗಳು ರೇಣುಗೆ ಕಪ್ಪ ಕಾಣಿಕೆ ಒಪ್ಪಿಸುವ ಒತ್ತಡದಿಂದ ತತ್ತರಿಸಿಹೋದರು. ಕಲೆಕ್ಷನ್ ಮಾಡುವುದರಲ್ಲಿ ತಾನು ಸೀನಿಯರ್ ಕಟ್ಟಾಗಿಂತ ಕಟ್ಟುನಿಟ್ಟಿನ ಖದೀಮನೆಂಬುದನ್ನು ರೇಣು ಮಂತ್ರಿಯಾದ ಕೆಲವೇ ದಿನದಲ್ಲಿ ತೋರಿಸಿಕೊಂಡುಬಿಟ್ಟ!



ಈಗ ಅಬಕಾರಿ ರೇಣುಕಾ ಜಿಲ್ಲೆಗಳಿಗೆ ಟೂರ್ ಹೊಡೆಯತೊಡಗಿದ್ದಾನೆ. ಅಬಕಾರಿ ಇಲಾಖೆಯ ಅಕ್ರಮಕ್ಕೆ ತಡೆಹಾಕುವ ಅಥವಾ ಸರ್ಕಾರಿ ಬೊಕ್ಕಸಕ್ಕೆ ಲಾಭ ಮಾಡುವ ಇರಾದೆ ಈ 'ದಂಡ'ಯಾತ್ರೆಯ ಹಿಂದಿಲ್ಲ ಬಿಡಿ. ಇದು ಕಪ್ಪ ಕಾಣಿಕೆಗಾಗಿ ರೇಣು ಹಾಕುತ್ತಿರುವ ತಿಪ್ಪರಲಾಗವಷ್ಟೇ. ಹೋದಲೆಲ್ಲಾ ಅಬಕಾರಿ ಇಲಾಖೆಯ ಡಿಸಿ (ಉಪ ಆಯುಕ್ತ) ಕರೆಸಿ "ವೈನ್‌ಶಾಪ್‌ನವರಿಂದ ತಲಾ ಹತ್ತತ್ತು ಸಾವಿರ ವಸೂಲು ಮಾಡಿ ಕೊಡಿ... ಇಲ್ಲದಿದ್ರೆ ಎಂಎಸ್‌ಐಎಲ್‌ನಿಂದ ಹೆಂಡ ಮಾರಾಟದ ಸರ್ಕಾರಿ ಮಳಿಗೆ ತೆರೆಯಲಾಗುತ್ತದೆಂದು ಹೆದರಿಸಿ...." ಎಂದು ಅಸಡ್ಡಾಳ "ಆಜ್ಞೆ" ಮಾಡುತ್ತಿದ್ದಾನೆ ಮಂತ್ರಿ ರೇಣುಕಾ! ಇದಕ್ಕೊಪ್ಪದ ಅಧಿಕಾರಿಗಳಿಗೆ ಎಲ್ಲರೆದುರೇ ಏಕವಚನದಲ್ಲಿ ಮೂದಲಿಸಿ ತೆವಲು ತೀರಿಸಿಕೊಳ್ಳುತ್ತಿದ್ದಾನೆ.

ಯಡ್ಡಿ ಸರ್ಕಾರ ನಾಡಿಗೆಲ್ಲ ಅಗ್ಗದಲ್ಲಿ ಸರ್ಕಾರಿ ಹೆಂಡ ಕುಡಿಸುವ ಪ್ಲಾನೊಂದನ್ನು ಕೆಲದಿನಗಳ ಹಿಂದೆ ಹಾಕಿತ್ತು. ಸರ್ಕಾರಿ ಸಾರಾಯಿ ನಿಷೇಧಿಸುವ ಜನೋದ್ಧಾರದ ನಾಟಕವಾಡಿದ ದಗಲುಬಾಜಿ ಯಡ್ಡಿ ಕಳಪೆ ಹೆಂಡಕ್ಕೆ ಬಣ್ಣ ಹಾಕಿ ವೈನ್ ಎಂದು ಮಾರಾಟ ಮಾಡಲು ಹಾಕಿಕೊಂಡಿದ್ದ ಘಾತುಕ ಯೋಜನೆಯಿದು! ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಎಂಬ ಸರ್ಕಾರಿ ಸ್ವಾಮ್ಯದ ಸಂಸ್ಥೆಯಿಂದ ನಾಡಿನಾದ್ಯಂತ ಬರೋಬ್ಬರಿ 460 ಹೆಂಡ ಮಾರಾಟ ಮಳಿಗೆ ತೆರೆಯುವ ಆಶೆ ಶೀಲವಂತರ ಯಡ್ಡಿ ಸರ್ಕಾರಕ್ಕೆ ಬಂದಿತ್ತು. ಪ್ರತಿ ತಾಲ್ಲೂಕಿಗೆರಡು ಅಥವಾ ಕನಿಷ್ಠ ಜಿಲ್ಲೆಗೆರಡು ಸರ್ಕಾರಿ ವೈನ್‌ಶಾಪ್ ಪ್ರಾರಂಭಿಸುವ 'ಅಮಲುಕೋರ' ಸ್ಕೀಮ್ ಸಂಪ್ರದಾಯವಾದಿ ಯಡ್ಡಿ ಬಳಗ ಹಾಕಿಕೊಂಡಿತ್ತು!

ಈ ಮಳಿಗೆಗಳನ್ನು ಹರಾಜು ಹಾಕುವ ಮೂಲಕ ಅಲಾಟ್ ಮಾಡಿ ಬೊಕ್ಕಸಕ್ಕೆ ಪಾಪದ ರೊಕ್ಕ ಜಮೆ ಮಾಡಿಕೊಳ್ಳುವ ದೂ(ದು)ರಾಲೋಚನೆಯನ್ನು ಯಡ್ಡಿ ಮಹಾತ್ಮ ಹಾಕಿಕೊಂಡಿದ್ದರು. ಆದರೆ ಸಿಎಂ ಯಡ್ಡಿಯ ಈ ಮಹತ್ವಾಕಾಂಕ್ಷೆಯ ಯೋಜನೆಯನ್ನೇ ಹಲಾಲುಕೋರ ಅಬಕಾರಿ ಮಿನಿಸ್ಟರ್ ರೇಣುಕಾ ಸ್ವಜೇಬೋದ್ಧಾರದ ಪ್ರಾಜೆಕ್ಟಾಗಿ ಪರಿವರ್ತಿಸಿಕೊಂಡು ಬಿಟ್ಟಿದ್ದಾನೆ! ಹಾಗೊಮ್ಮೆ ಸರ್ಕಾರಿ ಹೆಂಡ ಮಳಿಗೆ ಶುರುವಾದರೆ ತಮ್ಮ ಸುಲಿಗೆಕೋರ ದಂಧೆಗೆ ದೋಖಾ ಆಗುತ್ತದೆಂಬ ಖಾಸಗಿ ವೈನ್‌ಶಾಪ್ ಕುಳಗಳ ಭಯವೇ ರೇಣು 'ದಂಧೆ'ಗೆ ಬಂಡವಾಳ ಆಗಿದೆ!! ಸರ್ಕಾರಿ ಹೆಂಡ ಖಾಸಗಿ ಅಂಗಡಿಗಳ ವೈನ್‌ಗಿಂತ ಶೇ. 30 ರಷ್ಟು ಕಡಿಮೆ ಬೆಲೆಗೆ ಸಿಗುತ್ತದೆ. ಹಾಗಾಗಿ ಈ ಎಮ್‌ಎಸ್‌ಐಎಲ್ ಹೆಂಡ ಮಾರಾಟದಂಗಡಿ ಶುರುವಾಗಲು ಬಿಡಬಾರದೆಂಬ ಹಠದಿಂದ ಖಾಸಗಿ ಹೆಂಡ ಮಾರಾಟಗಾರರು ಲಾಬಿ ಮಾಡತೊಡಗಿದರು.

ವೈನ್‌ಶಾಪ್‌ನವರ ತಳಮಳ ಗೊತ್ತಾಗಿದ್ದೇ ತಡ, ಅಬಕಾರಿ ರೇಣು ಅಸಹಾಯಕ ಇಲಿ ಕಂಡ ಠಕ್ಕ ಬೆಕ್ಕಿನಂತಾಗಿ ಹೋದ! ಎಂಎಸ್‌ಐಎಲ್ ಮಳಿಗೆ ತೆರೆದೇ ಬಿಡುತ್ತೇನೆಂಬ ಬ್ಲಾಕ್‌ಮೇಲ್ ಆಟ ಆಡತೊಡಗಿದ. ಕಂಗಾಲಾದ ವೈನ್‌ಶಾಪಿಗರು 'ರಾಜಿ ಸಂಧಾನ'ಕ್ಕೆಂದು ರೇಣು ಪದತಲಕ್ಕೆ ಬಂದುಬಿದ್ದರು. ಆಗೊಂದು ಲೇವಾದೇವಿ ಸೂತ್ರವನ್ನು ಮಂತ್ರಿ ವರ್ಯರು ಕಳ್ಳ ವೈನ್‌ಶಾಪಿಗರ ಮುಂದಿಟ್ಟರು. ಪ್ರತಿ ಅಂಗಡಿಯವರು ತಲಾ ಹತ್ತತ್ತು ಸಾವಿರ ಕಪ್ಪ ಕಾಣಿಕೆ ಒಪ್ಪಿಸಿದರಷ್ಟೇ ಎಮ್‌ಎಸ್‌ಐಎಲ್ ಮಳಿಗೆಗೆ 'ತಡೆಯಾಜ್ಞೆ' ಕೊಡುತ್ತೇನೆಂದು ರೇಣು ಕಡೆಯವರು ಹೇಳಿದರು. ಕೆಲವೆಡೆ ಎಂಎಸ್‌ಐಎಲ್ ಮಳಿಗೆ ತೆರೆದಿರುವುದು ವೈನ್ ಮರ್ಚೆಂಟ್‌ಗಳನ್ನು ವ್ಯಾಕುಲರಾಗಿಸಿತ್ತು, ಹಾಗಾಗಿ ಈ ಕಪ್ಪ ಕೊಡುವುದಕ್ಕೆ ಒಪ್ಪಿದರು.

ತಕ್ಷಣವೇ ಅಬಕಾರಿ ಮಂತ್ರಿಗಳು "ಇನ್ನು ಮುಂದೆ ಹೊಸ ಹೆಂಡದಂಗಡಿಗಳಿಗೆ ಪರವಾನಗಿ ಕೊಡುವುದಿಲ್ಲ...ಅಷ್ಟೇ ಅಲ್ಲ ಎಂಎಸ್‌ಐಎಲ್ ಮಳಿಗೆಗಳಿಗೂ ಲೈಸೆನ್ಸ್ ಇಲ್ಲ....." ಎಂದಬ್ಬರಿಸಿಬಿಟ್ಟರು!! ಅಲ್ಲಿಗೆ ಇಡೀ ರಾಜ್ಯದಿಂದ ಬರೋಬ್ಬರಿ 7 ಕೋಟಿ 60 ಲಕ್ಷ ರೂಪಾಯಿ ಕಳ್ಳಗಂಟು ರೇಣು ಹುಂಡಿಗೆ ಬೀಳುವುದು ಗ್ಯಾರಂಟಿಯಾಗಿ ಹೋಯ್ತು!! ರಾಜ್ಯದಲ್ಲಿ ಸಿಎಲ್ 2, ಸಿಎಲ್ 4, ಸಿಎಲ್ 7, ಸಿಎಲ್ 9 ವರ್ಗದ ಒಟ್ಟು 7,600 ವೈನ್‌ಶಾಪ್‌ಗಳಿವೆ. ಇವರೆಲ್ಲ ತಮ್ಮ ದೋ ನಂಬರ್ ದಂಧೆ ಬಚಾವಿಗೆ ಮಂತ್ರಿಗಳ ಇಚ್ಛೆ ಈಡೇರಿಸಲೇಬೇಕಾಗಿದೆ. 7600 ವೈನ್‌ಶಾಪ್ಸ್ x 10 ಸಾವಿರ ಕಪ್ಪ ಕಾಣಿಕೆ! ಅಂದರೆ 7.60 ಕೋಟಿ ರೂಪಾಯಿ ಅಬಕಾರಿ ರೇಣುಕನ ಲೂಟಿ!!

ರೇಣುಗೆ ಕಪ್ಪ ಒಪ್ಪಿಸಲು ಒಪ್ಪಿಕೊಂಡಿದ್ದ ವೈನ್ಸ್‌ಶಾಪ್ ಮಾಲೀಕರೀಗ ತಾವು ಕೊಡುವ ದುಡ್ಡು ದಂಡವಾಗುವ ಆತಂಕಕ್ಕೆ ಬಿದ್ದಿದ್ದಾರೆ. ಯಡ್ಡಿ ಕ್ಯಾಬಿನೆಟ್ ರಿಶಫಲ್ ವೇಳೆ ರೇಣುಕನ ಖಾತೆ ಬದಲಿಸುವ ಯೋಚನೆಯಲ್ಲಿರುವ ವಾಸನೆ ವೈನ್‌ಶಾಪ್ ಅಸೋಸಿಯೇಷನ್ ಗ್ಯಾಂಗಿಗೆ ಬಡಿದಿದೆ. ಹಾಗಾಗಿ ಹೊಸ ಅಬಕಾರಿ ಮಂತ್ರಿ ಮತ್ತೇನಾದರೂ ಕ್ಯಾತೆ ತೆಗೆದರೆ ಈ ಕಾಸು ಅನ್ಯಾಯವಾಗಿ ರೇಣು ಪಾಲಾಗುತ್ತದೆ; ಹೊಸ 'ಅಬಕಾರಿ ದೊರೆ'ಗೆ ಮತ್ತೆ ಕಪ್ಪ ಒಪ್ಪಿಸುವ ಪರಿಸ್ಥಿತಿ ಬರುತ್ತದೆಂಬ ಭಯ ಈ ಹೆಂಡೋದ್ಯಮಿಗಳದು.

ಹಾಗಾಗಿ ವೈನ್‌ಶಾಪ್‌ನವರು ಅಬಕಾರಿ ರೇಣುಗೆ ಕಾಸು ಕೊಡಲು ಹಿಂದೆ-ಮುಂದೆ ನೋಡುತ್ತಿದ್ದಾರೆ. ರೇಣು ಆದಷ್ಟು ಬೇಗ ವಸೂಲಿ ಮುಗಿಸುವ ಹಪಾಹಪಿಯಲ್ಲಿದ್ದಾನೆ. ಬೇಗ ಕಪ್ಪ ಕಲೆಕ್ಷನ್ ಮಾಡಿಕೊಡುವಂತೆ ಅಬಕಾರಿ ಡಿಸಿಗಳಿಗೆ ಕಾಡುತ್ತಿದ್ದಾನೆ.

ಇಂಥ ಬಕಾಸುರನನ್ನು ಮಂತ್ರಿ ಮಾಡಿಕೊಂಡಿರುವ ಸಿಎಂ ಯಡ್ಡಿ ಧನ್ಯ! ಧನ್ಯ!! ಕರ್ನಾಟಕದ್ದು ಮಾತ್ರ ಕಷ್ಟ! ಕಷ್ಟ!! ಹೇ ರಾಮ್.... ಎಂಥ ಕೇಡುಗಾಲ ಬಂತು!!!


● ನಹುಶ

## ಬಗರ್‌ಹುಕುಂ ಭಾನಗಡಿ

# ಕಳ್ಳ ಶಾಸಕ ಜೀವರಾಜ್ ನುಂಗಿದ್ದೆಷ್ಟು?

ಜೀವರಾಜ್ ದಯನೀಯವಾಗಿ ತಗುಲಿಕೊಂಡಿದ್ದಾನೆ. ಬಡಬಗ್ಗರಿಂದ ಎತ್ತುವಳಿ ನಡೆಸಿ, ಅಕ್ರಮ ಸಕ್ರಮ ಅರ್ಜಿಯಲ್ಲಿ ಅರ್ಹರ ಹೆಸರು ಅಳಿಸಿ ತನಗೆ ಬೇಕಾದ ಮಂದಿಗೆ ಜಮೀನು ಕೊಟ್ಟಿದ್ದೆಲ್ಲ ಸಾಕ್ಷಿ ಸಮೇತ ರುಜುವಾತಾಗಿದೆ. ಎನ್.ಆರ್.ಪುರ ತಾಲ್ಲೂಕು ಜೆಡಿಎಸ್ ಅಧ್ಯಕ್ಷ ರವಿಶಂಕರ್ ಜೀವರಾಜ್‌ನ ಬಗರ್‌ಹುಕುಂ ಭಾನಗಡಿಯನ್ನ ಎಳೆಎಳೆಯಾಗಿ ಹೊರಹಾಕಿದ್ದಾರೆ.

• ಸಂತೋಷ್ ಬಾಗಿಲಗದ್ದೆ
beladingalu@live.com



ಜೀವರಾಜ್

ಸತತ ಮಳೆಯಿಂದ ಥಂಡಿ ಹೊಡೆಯಬೇಕಿದ್ದ ಮಲೆನಾಡೀಗ ತಣ್ಣಗಿಲ್ಲ, ಕಾರಣ ಮಹಾ ಸಭ್ಯಸ್ಥನಂತೆ ಪೋಸು ಕೊಡುವ ಬಿಜೆಪಿ ಶಾಸಕ ಜೀವರಾಜ್‌ನ ಭಾನಗಡಿಗಳು ಬೆಚ್ಚಗೆ ಬಿಚ್ಚಿಕೊಂಡಿವೆ. ಈತನ ನೆರಳಲ್ಲೇ ಬಗರ್‌ಹುಕುಂ ಸಾಗುವಳಿ ಸಕ್ರಮ ವಿಚಾರದಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ ನಡೆದು ಬಡ ರೈತಾಪಿ ಜನರ ಬದುಕು ತಲ್ಲಣಿಸಿಹೋಗಿದೆ. ಈ ರೀತಿ ಬಡವರ ಬದುಕಿಗೆ ಬರೆ ಎಳೆದು ಹಡಬೆ ಜಮೀನು ದಕ್ಕಿಸಿಕೊಂಡು ಕೊಬ್ಬುವ ಕಾತುರದಲ್ಲಿದ್ದ ಜೀವರಾಜ್‌ನ ಚೇಲಾ ಪಡೆಯೂ ಚಿತ್ತಲಾಗಿದೆ. ಹೀಗೆ ಮಲೆನಾಡಿನ ಪಾಪದ ಮಂದಿಗೆ ನಾಮ ತೀಡಿದ ಕಳ್ಳ ಶಾಸಕ ಜೀವರಾಜ್ ಅಮಾಯಕನಂತೆ ನಟಿಸುತ್ತಾ ಬಚಾವಾಗಬಹುದಾದ ದಾರಿಗಳಿಗೆ ತಲಾಶ್ ನಡೆಸುತ್ತಿದ್ದಾನೆ.



ರವಿಪ್ರಕಾಶ್

ವಾಸ್ತವವಾಗಿ ಜೀವರಾಜ್ ದಯನೀಯವಾಗಿ ತಗುಲಿಕೊಂಡಿದ್ದಾನೆ. ಬಡಬಗ್ಗರಿಂದ ಎತ್ತುವಳಿ ನಡೆಸಿ, ಅಕ್ರಮ ಸಕ್ರಮ ಅರ್ಜಿಯಲ್ಲಿ ಅರ್ಹರ ಹೆಸರು ಅಳಿಸಿ ತನಗೆ ಬೇಕಾದ ಮಂದಿಗೆ ಜಮೀನು ಕೊಟ್ಟಿದ್ದೆಲ್ಲ ಸಾಕ್ಷಿ ಸಮೇತ ರುಜುವಾತಾಗಿದೆ. ಎನ್.ಆರ್.ಪುರ ತಾಲ್ಲೂಕು ಜೆಡಿಎಸ್ ಅಧ್ಯಕ್ಷ ರವಿಶಂಕರ್ ಜೀವರಾಜ್‌ನ ಬಗರ್‌ಹುಕುಂ ಭಾನಗಡಿಯನ್ನ ಎಳೆಎಳೆಯಾಗಿ ಹೊರಹಾಕಿದ್ದಾರೆ.

ಚಿಕ್ಕಮಗಳೂರು ಜಿಲ್ಲೆಯಾದ್ಯಂತ ಅರಣ್ಯಭೂಮಿ ಒತ್ತುವರಿ ನಡೆಸಿ ಅವುಗಳನ್ನೇ ನಂಬಿ ಬದುಕುತ್ತಿರುವ ಬಡಜನತೆ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಇಂಥ ಚೂರು ಪಾರು ಜಮೀನಿಗೆ ಹಕ್ಕುಪತ್ರ ನೀಡಿ ಭದ್ರತೆ ಒದಗಿಸಬೇಕೆಂಬ ಕೂಗು ಈ ಭಾಗದಲ್ಲಿ ಲಾಗಾಯ್ತಿನಿಂದಲೂ ಕೇಳಿಬರುತ್ತಿದೆ. ಇದಕ್ಕೆ ಸ್ಪಂದಿಸಿದ ಸರ್ಕಾರ ಕಂದಾಯ ಇಲಾಖೆಯ ಮೂಲಕ 1991ರಲ್ಲಿ ಸಕ್ರಮಕ್ಕಾಗಿ ಮೊದಲ ಸಲ ಅರ್ಜಿ ಆಹ್ವಾನಿಸಿತ್ತು. ನಮೂನೆ 51ರಡಿಯಲ್ಲಿ ಅರ್ಜಿ ಸಲ್ಲಿಸಲು 1991ರ ಸೆಪ್ಟೆಂಬರ್ ಕೊನೆಯ ದಿನವೆಂದು ನಿಗದಿಯಾಗಿತ್ತು. ತದನಂತರ ಅಕ್ರಮ ಸಾಗುವಳಿಯ ಸಕ್ರಮ ಸಂಬಂಧ ನಮೂನೆ 53ರ ಅಡಿಯಲ್ಲಿ ಮತ್ತೊಮ್ಮೆ ಅರ್ಜಿ ಆಹ್ವಾನಿಸಲಾಗಿತ್ತು. 1999ರ ಏಪ್ರಿಲ್ 30 ಅಂತಿಮ ದಿನ ಅಂತ ನಿಗದಿಯಾಗಿತ್ತು. ಇದರಡಿಯಲ್ಲಿ ಸಾವಿರಾರು ಅರ್ಜಿಗಳು ಬಂದು ಬಿದ್ದವು. ನಂತರ 2008ರ ಹೊತ್ತಿಗೆ ಮತ್ತೊಂದು ರೌಂಡು ಅರ್ಜಿ ಆಹ್ವಾನಿಸಿದಾಗಲೂ ದಂಡಿ ದಂಡಿ ಅರ್ಜಿಗಳು ಬಂದು ಬಿದ್ದವು.

ಈ ರೀತಿ ಬಂದ ಅರ್ಜಿಗಳನ್ನು ಪರಾಮರ್ಶಿಸುವುದಕ್ಕಾಗಿ ಸ್ಥಳೀಯ ಶಾಸಕರ ಅಧ್ಯಕ್ಷತೆಯಲ್ಲಿ 'ಬಗರ್‌ಹುಕುಂ ಭೂಮಂಜೂರಾತಿ ಸಮಿತಿ' ರಚಿಸಲಾಯಿತು. ಸ್ವೀಕೃತ ಅರ್ಜಿಗಳನ್ನು ಪರಿಶೀಲಿಸಿ ಮಾನ್ಯಮಾಡುವ ಅಥವಾ ವಜಾ ಮಾಡುವ ಅಧಿಕಾರವನ್ನು ನೀಡಲಾಯಿತು. ಸದ್ಯ ಇಂತಹದೊಂದು ಅಧಿಕಾರ ಹೊಂದಿದ್ದಾತ ಡಿ.ಎನ್. ಜೀವರಾಜ್. ಈತನ ಅವಧಿಯಲ್ಲೇ ನಡೆಯಬಾರದ ಭಾನಗಡಿಗಳು ನಡೆದಿರುವುದೂ ಈಗ ಸ್ಪಷ್ಟ.

ಇಂಥ ಅತೀ ಹೆಚ್ಚು ಭಾನಗಡಿ ನಡೆದಿರುವುದು ಎನ್.ಆರ್.ಪುರ ವ್ಯಾಪ್ತಿಯಲ್ಲಿ. ಕಳ್ಳ ಶಾಸಕ ಜೀವರಾಜ್ ತಾ.ಪಂ ಸದಸ್ಯ ಮನು ಹಾಗೂ ತಾ.ಪಂ.ನಲ್ಲಿ ಹಂಗಾಮಿ ನೌಕರನಾಗಿದ್ದ ಎನ್.ಎಸ್. ರವಿಪ್ರಕಾಶ್ ಎಂಬಿಬ್ಬರನ್ನು ತನ್ನ ಭೂಹನನ ಯಾಗಕ್ಕೆ ಬಂಟರಂತೆ ಬಳಸಿಕೊಂಡಿದ್ದ.

ಮೇಲ್ಕಂಡ ಅಕ್ರಮಗಳೆಲ್ಲ ಸರ್ಕಾರಿ ಜಮೀನು ಸಂರಕ್ಷಣಾ ಕಾರ್ಯಪಡೆ ಸುಬ್ರಮಣಿಯನ್‌ರವರ ನೇತೃತ್ವದದಲ್ಲಿ ನಡೆಸಿದ ತನಿಖೆಯ ಸಂದರ್ಭದಲ್ಲಿ ಸ್ಪಷ್ಟಗೊಂಡಿದೆ. ಇದೀಗ 147 ಪ್ರಕರಣಗಳಲ್ಲಿ ಮುನ್ನೂರು ಎಕರೆಗೂ ಹೆಚ್ಚು ಸರ್ಕಾರಿ ಭೂಮಿ ಅಕ್ರಮವಾಗಿ ಮಂಜೂರಾಗಿರುವ ವಿಚಾರ ಬಹಿರಂಗಗೊಂಡಿದೆ. ನಮೂನೆ 51 ಮತ್ತು 53ರಲ್ಲಿ ಈ ಅನಾಹುತಗಳು ಎಗ್ಗಿಲ್ಲದೆ ನಡೆದುಹೋಗಿವೆ. ಅರ್ಜಿ ಸಲ್ಲಿಕೆಯ ಗಡುವು ಮುಗಿದ ಬಳಿಕ ಸಂಬಂಧಿಸಿದ ಕಡತಗಳನ್ನು ಮುಗಿಸಿ ತಹಶೀಲ್ದಾರರೇ ದೃಢೀಕರಿಸಬೇಕೆಂಬುದು ನಿಯಮ. ಆದರೆ ಎನ್.ಆರ್.ಪುರ ತಾಲ್ಲೂಕು ಕಚೇರಿಯಲ್ಲಿ ಈ ನಿಯಮಕ್ಕೆ ಕವಡೆ ಕಾಸಿನ ಕಿಮ್ಮತ್ತೂ ದೊರಕಿಲ್ಲ. ಗಡುವು ಮುಗಿದ ಬಳಿಕವೂ ಅರ್ಜಿ ಸ್ವೀಕರಿಸಿ ಅರ್ಹರ ಹೆಸರು ಕಿತ್ತು ಬೇರೆ ಹೆಸರು ನಮೂದಿಸಿರುವ ಅಂಶವೂ ತನಿಖೆಯಿಂದ ಬಹಿರಂಗಗೊಂಡಿದೆ. ಜೊತೆಗೆ ಕಡತಗಳ ತಿದ್ದುಪಡಿ, ಶಾಯಿಯಲ್ಲಿ ಬದಲಾವಣೆ ಹಾಗೂ ಹಸ್ತಾಕ್ಷರ ಏರುಪೇರು ಮೊದಲಾದ ಭರಪೂರ ಮಾಹಿತಿಗಳು ಅಕ್ರಮ ನಡೆದಿರುವುದನ್ನು ಸಾರಿ ಹೇಳುತ್ತಿವೆ.

ತಾ.ಪಂ.ನ ಹಂಗಾಮಿ ನೌಕರ ರವಿಪ್ರಕಾಶ್ ಕಡತಗಳನ್ನು ತಿದ್ದಿ ಶಾಸಕನಿಗೆ ಬೇಕಾದ ಹೆಸರು ನಮೂದಿಸುವುದನ್ನು ಮನಸಾರೆ ಮಾಡಿ ಮುಗಿಸಿದ್ದಾನೆ. ಜೊತೆಗೆ ತಾ.ಪಂ. ಸದಸ್ಯ ಮನು ಎಂಬಾತ ಮಿಕಗಳನ್ನು ಹಿಡಿದು ಕಾಸು ಗೆಬರುವ ಕೆಲಸವನ್ನು ಭಕ್ತಿಯಿಂದ ನೆರವೇರಿಸಿದ್ದಾನೆ. ತೀರಾ ಆರೂಸಾವಿರ ಚಿಲ್ಲರೆ ಅರ್ಜಿಗಳು ಬಂದಿದ್ದವಲ್ಲಾ? ಇವುಗಳನ್ನು ವಿಲೇವಾರಿ ಮಾಡಿ ಸಕ್ರಮ ಮಾಡಿಕೊಡಲು ಎಕರೆಯೊಂದಕ್ಕೆ 75 ಸಾವಿರ ಅಂತ ರೇಟು ಫಿಕ್ಸ್ ಆಗಿತ್ತು. ಹೆಚ್ಚಿನ ಬಡಬಗ್ಗರು ತುಂಡು ಭೂಮಿಯಾದರೂ ಬದುಕಿಗಾಸರೆ ಆಗಲಿ ಅಂತ ಸಾಲಸೋಲ ಮಾಡಿ ಆ ಮೊತ್ತವನ್ನು ಈ ಖದೀಮರ ಉಡಿ ತುಂಬಿಸಿದ್ದರು. ದುರಂತವೆಂದರೆ, ಜೀವರಾಜ್ ತನ್ನ ಚೇಲಾಗಳು, ಬೇಕಾದವರ ಹೆಸರನ್ನು ಅರ್ಹರ ಹೆಸರಳಿಸಿ ನಮೂದಿಸಲು ಸೂಚಿಸಿದ. ಎಕರೆಗೆ ಎಪ್ಪತ್ತು ಸಾವಿರ ಅಂತ ಲೆಕ್ಕ ಹಾಕಿದರೂ ಹತ್ತಿರತ್ತಿರ ಹದಿನೈದು ಕೋಟಿಯಷ್ಟಾಗುತ್ತದೆ. ಇದರಲ್ಲಿ ಎಲ್ಲಾ ಕಮೀಷನ್ನು ಅದೂ ಇದೂ ಅಂತೆಲ್ಲ ಲೆಸ್ ಆದರೂ ಜೀವರಾಜ್ ಕೋಟಿಗಳ ಲೆಕ್ಕದಲ್ಲಿ ಪೀಕಿಕೊಂಡಿರುವುದು ಸ್ಪಷ್ಟವಾಗಿದೆ.



ಮನು

ಅಕ್ರಮಸಕ್ರಮದ ನಿಯಮಾವಳಿಯತ್ತಲೊಮ್ಮೆ ಕಣ್ಣು ಹಾಯಿಸಿದರೆ, ಯಾವ ರೀತಿಯಲ್ಲಿ ಅಕ್ರಮ ನಡೆದಿದೆಯೆಂಬುದು ಸ್ಪಷ್ಟವಾಗುತ್ತದೆ. 4 ಎಕರೆ 3 ಗುಂಟೆಗಿಂತ ಕಡಿಮೆ ಭೂಮಿ ಇರುವವರಿಗೆ ಮಾತ್ರ ಅಕ್ರಮ ಸಕ್ರಮದಡಿಯಲ್ಲಿ ಭೂಮಂಜೂರಾತಿ ಮಾಡಬೇಕಂತೊಂದು ನಿಯಮವಿದೆ. ಆದರೆ ಏಳೆಂಟು ಎಕರೆ ಮತ್ತು ಅದಕ್ಕಿಂತ ಹೆಚ್ಚು ಭೂಮಿ ಹೊಂದಿರುವವರಿಗೂ ಜೀವರಾಜ್ ದರ್ಬಾರಲ್ಲಿ ಭೂಮಿ ಮಂಜೂರು ಮಾಡಲಾಗಿದೆ.

ಈಚಿಕೆರೆ ಗ್ರಾಮದ ಸರ್ವೆ ನಂಬರ್ 74ರಲ್ಲಿ ಗೋಮಾಳ ಮತ್ತು ಅರಣ್ಯ ಪ್ರದೇಶಕ್ಕೆ ಸೇರಿದ ಜಮೀನೊಂದಿದೆ. ಸದರಿ ಜಮೀನಿಗೆ ಸಂಬಂಧಿಸಿದಂತೆ ವ್ಯಾಜ್ಯಗಳಿರುವುದರಿಂದ ನಿವೇಶನ ಹಂಚಿಕೆಯಾಗಿರುವುದಿಲ್ಲ ಅಂತ ತಹಶೀಲ್ದಾರ್ ಕಡೆಯಿಂದ ಮಾಹಿತಿಯನ್ನು ನೀಡಲಾಗಿದೆ. ಆದರೆ ಇದೇ ಜಮೀನಿನಲ್ಲಿ ಹೆಚ್.ಎಂ. ಮಧುಕರ ಬಿನ್ ಮಂಜಪ್ಪ ಮನು ಬಿನ್ ಮಂಜಪ್ಪ ಹಾಗೂ ಮಮತಾ ಬಿನ್ ಮಂಜಪ್ಪ ಎಂಬ ಒಂದೇ ಕುಟುಂಬದ ಮೂವರಿಗೆ ತಲಾ 3-38 ಎಕರೆ ಜಮೀನು ಮಂಜೂರು ಮಾಡಲಾಗಿದೆ. ಈ ಬಗ್ಗೆ ತಡಕಾಡಿದರೆ, ನಮೂನೆ 50ರಲ್ಲಿ ದಾಖಲಾತಿ ರಿಜಿಸ್ಟಾರ್‌ನ ಕೊನೆಯಲ್ಲಿ ಮೇಲ್ಕಂಡ ಅರ್ಜಿದಾರರ ಹೆಸರು ನಮೂದಿಸಲಾಗಿದೆ. ಅಂದರೆ ಅವಧಿ ಮುಗಿದ ಬಳಿಕ ಅಕ್ರಮವಾಗಿ ಸೇರಿಸಲಾಗಿದೆ. ಇದರಲ್ಲಿ ಬರವಣಿಗೆ ಮತ್ತು ಶಾಹಿಯಲ್ಲಿ ವ್ಯತ್ಯಾಸ ನಿಚ್ಚಳವಾಗಿದೆ. ಇನ್ನು ಗಮನಿಸಬೇಕಾದ ಅಂಶವೆಂದರೆ, ಮೇಲ್ಕಂಡ ಮೂವರ ತಾಯಿ ರುಕ್ಮಿಣಿ ಹೆಸರಲ್ಲಿ 9-29 ಎಕರೆ ಜಮೀನಿದೆ! ಈ ಅಕ್ರಮ ಮಂಜೂರಾತಿಯ ಮೂವರು ಫಲಾನುಭವಿಗಳಲ್ಲಿ ಒಬ್ಬ ಮನು. ಈತ ಬಡ ಅರ್ಜಿದಾರರಿಂದ ಕಾಸು ಕಿತ್ತುಕೊಳ್ಳುವ ಜವಾಬ್ದಾರಿ ಹೊತ್ತಿದ್ದ ಜೀವರಾಜ್‌ನ ಕಟ್ಟಾ ಶಿಷ್ಯ!

ಇನ್ನು ಹೊನ್ನೇಕೊಡಿಗೆ ಗ್ರಾಮದಲ್ಲಿ ಕೆ.ಎಂ.ತಮ್ಮೇಗೌಡ, ಮಂಜಪ್ಪಗೌಡ, ಸತೀಶ್ ಎಂಬ ಒಂದೇ ಕುಟುಂಬದ ಅರ್ಜಿಯೂ ರಿಜಿಸ್ಟರ್‌ನ ಕೊನೆಯಲ್ಲಿ ದಾಖಲಾಗಿದೆ. ಈ ಜಮೀನನ್ನು ಸಕ್ರಮೀಕರಣ ಮಾಡಲು ಪ್ರಸ್ತಾವನೆ ಕೂಡಾ ಪಾಸ್ ಆಗಿದೆ. ಹಿಳುವಳ್ಳಿ ಗ್ರಾಮದ ಬಿ.ಎ. ಶ್ರೀನಿವಾಸ್ ಎಂಬಾತನಿಗೂ ಜಮೀನು ಸಕ್ರಮೀಕರಣ ಮಾಡಿಕೊಡಲು ಕಡತ ತಯಾರಿಸಲಾಗಿದೆ. ಈತನ ಹೆಸರು ನಮೂನೆ 56ರರ ರಿಜಿಸ್ಟರ್‌ನಲ್ಲಿ ದಾಖಲಿಸಲಾಗಿದೆ. ವಾಸ್ತವೆಂದರೆ 1144ರಲ್ಲಿ ತಿದ್ದುಪಡಿ ಮಾಡಿ ಶ್ರೀನಿವಾಸ್ ಹೆಸರನ್ನು ಅಕ್ರಮವಾಗಿ ದಾಖಲಿಸಲಾಗಿದೆ. ಅದಲ್ಲದೆ ಸಕ್ರಮೀಕರಣದ ಸಮಿತಿ ದಿನಾಂಕ 5-10-2007ರಂದು ನಡೆಸಿದ ಸಭೆಯಲ್ಲಿ ಶ್ರೀನಿವಾಸ್‌ಗೆ 4-38 ಎಕರೆ ಭೂಮಿ ಮಂಜೂರು

## ಏನೂ ಮಾಡಕ್ಕಾಗಲಪ್ಪ ಅಂದರು ಯಡ್ಡಿ!

ಅದೇನೇ ತಿಪ್ಪರಲಾಗ ಹಾಕಿದರೂ ತಾನು ಮಾಡಿದ ಭಾನಗಡಿ ತನ್ನ ಭವಿಷ್ಯಕ್ಕೆ ಉರುಳಾಗುವ ಭಯ ಜೀವರಾಜ್‌ನನ್ನ ಆವರಿಸಿಕೊಂಡಿದೆ. ಯಾಕೆಂದರೆ ಬಾಲಸುಬ್ರಮಣಿಯನ್ ಈತನ ವಿರುದ್ಧ ಎಫ್‌ಐಆರ್ ದಾಖಲಿಸಲು ರೆಡಿಯಾಗಿದ್ದಾರೆ.

ಇತ್ತ ಬಾಲಸುಬ್ರಮಣಿಯನ್ ಶುದ್ಧ ಹಸ್ತದ ಅಧಿಕಾರಿ. ಆದುದರಿಂದ ಪ್ರಭಾವ ಬೀರುವುದು ಕಷ್ಟ. ಹಾಗಂತ ಎಫ್‌ಐಆರ್ ಏನಾದರೂ ಆದರೆ ರಾಜಕೀಯ ಬದುಕೇ ಡೋಲಾಯಮಾನವಾಗುತ್ತದೆ. ಇದರಿಂದ ತಪ್ಪಿಸಿಕೊಳ್ಳಲೋಸ್ಕರವೇ ಮೊನ್ನೆ ಜೀವರಾಜ್ ಮುಖ್ಯಮಂತ್ರಿ ಯಡಿಯೂರಪ್ಪನವರ ಬಳಿ ಹೋಗಿ ಗೋಳಾಡಿದ್ದ.



ಆದರೆ ಯಡಿಯೂರಪ್ಪ 'ಎಫ್‌ಐಆರ್ ಫೈಲ್ ಆದ್ರೆ ನಾನೇನೂ ಮಾಡಕ್ಕಾಗಲ್ಲ, ಯಾವುದಕ್ಕೂ ಲಾಯರ್ ದಿವಾಕರ್‌ರನ್ನು ಮಾತಾಡ್ಸು' ಅಂದು ಸಾಗಹಾಕಿದ್ದಾರೆ.

ಅಲ್ಲಿಗೆ ಜೀವರಾಜ್‌ಗೆ ಇದ್ದೊಂದು ಆಸರೆಯೂ ಕೈ ತಪ್ಪಿದಂತಾಗಿದೆ. ಆದರೂ ಕಸರತ್ತು ಮುಂದುವರೆಸಿ ಸರ್ಕಾರದ ಕಾನೂನು ಸಲಹೆಗಾರ ದಿವಾಕರ್‌ರನ್ನು ಭೇಟಿಯಾಗಿ ಚರ್ಚಿಸುವಂಥ ಸಾಹಸ ಕಾರ್ಯಗಳು ಜೀವರಾಜ್ ಕಡೆಯಿಂದ ನಡೆಯುತ್ತಿವೆ.

ಸಾಕ್ಷಾತ್ ಯಡಿಯೂರಪ್ಪನವರೇ ಕೈ ಚೆಲ್ಲಿರುವಾಗ ಇನ್ಯಾವ ಶಕ್ತಿ ಜೀವರಾಜ್‌ನ ಬೆಂಬಲಕ್ಕೆ ನಿಂತೀತು?

## ಲಾಭ ಪಡೆದನೇ ಸಿ.ಟಿ.ರವಿ?

ಈ ರಾಜಕೀಯವೆಂಬ ರಾಡಿ ಯಾವ ಕ್ಷಣ ಅದ್ಯಾವ ರೂಪ ಪಡೆದುಕೊಳ್ಳುತ್ತದೋ ಹೇಳಲು ಬರುವುದಿಲ್ಲ. ಈ ಮಾತನ್ನ ಯಾಕೆ ಹೇಳಬೇಕಾಯಿತೆಂದರೆ, ಸಿ.ಟಿ.ರವಿಯೆಂಬ ಸಮಯಸಾಧಕ ಜೀವರಾಜ್‌ನ ಭೂಹಗರಣವನ್ನು ಸರಿಯಾಗಿ ಬಳಸಿಕೊಂಡಿದ್ದಾನೆ.

ಇನ್ನೇನು ಸಂಪುಟ ಸರ್ಜರಿ ನಡೆದು ಕೆಲಮಂದಿ ಹೊಸದಾಗಿ ಸೇರ್ಪಡೆಗೊಳ್ಳುವ ಸಂಭವವಿದೆ. ಈ ರೇಸ್‌ನಲ್ಲಿ ಸಿ.ಟಿ.ರವಿ ತನ್ನ ಹೆಸರನ್ನು ಹರಿಯಬಿಟ್ಟಿದ್ದಾನೆ. ಆದರೆ ಯಡಿಯೂರಪ್ಪನಿಗೊಂದಷ್ಟು ಹತ್ತಿರವಿರುವ ಜೀವರಾಜ್ ತನ್ನ ಭಾಗ್ಯದ ಬಾಗಿಲು ಮುಚ್ಚಬಹುದೆಂಬ ಆತಂಕವೂ ರವಿಗೆ ಕಾಡತೊಡಗಿತ್ತು.



ಸಿ.ಟಿ.ರವಿ

ಅದನ್ನು ನಿವಾರಿಸಿಕೊಳ್ಳಲು ಈ ಭೂ ಹಗರಣವನ್ನೇ ಅಸ್ತ್ರವಾಗಿಸಿಕೊಂಡ ರವಿ ದೃಶ್ಯಮಾಧ್ಯಮಗಳಲ್ಲಿ ಭರ್ಜರಿ ಪ್ರಚಾರ ಸಿಗುವಂತೆ ನೋಡಿಕೊಂಡಿದ್ದಾನೆ. ಪ್ರಕರಣ ಇದರಿಂದಾಗಿಯೇ ರಾಜ್ಯಮಟ್ಟದಲ್ಲಿ ಚರ್ಚೆಗೆ ಗ್ರಾಸವಾಗಿ ಜೀವರಾಜ್‌ನ ಮಾನ ಹರಾಜಾಗಿದೆ.

ಇದು ಆಗಬೇಕಾದದ್ದೆ. ಆದರೆ ಸಿ.ಟಿ.ರವಿಗೆ ಬಡಬಗ್ಗರಿಗೆ ಅನ್ಯಾಯವಾದುದರ ಬಗೆಗಾಗಲಿ, ಪಕ್ಷದ ಮಾನ ಬೀದಿಗೆ ಬಂದಿದ್ದರ ಬಗೆಗಾಗಲಿ ಬೇಸರವಿಲ್ಲ. ಬದಲಾಗಿ ಜೀವರಾಜ್‌ನನ್ನು ಹೊಸಕಿ ಹಾದಿ ಸುಗಮಗೊಳಿಸಿಕೊಂಡು ಖುಷಿ ಲಕಲಕಿಸುತ್ತಿದೆ!

ಕಲು ತೀರ್ಮಾನಿಸಿತ್ತು. ತೀರಾ ತಡಕಾಡಿದಾಗ ನಾಗರಾಜ್ ಎಂಬ ಅರ್ಜಿ ಅರ್ಜಿದಾರರ ಹೆಸರು ಟ್ ಮಾಡಿ ಶ್ರೀನಿವಾಸ್ ಹೆಸರು ಸೇರಿಸಿದ್ದು ಟ್ಟಾಗುತ್ತದೆ.

ಡತಗಳನ್ನು ಪರಿಶೀಲಿಸುತ್ತಾ ಸಾಗಿದರೆ ಇಂಥ ದಂಡಿ ಭಾನಗಡಿಗಳು ಅನಾವರಣಗೊಳ್ಳುತ್ತವೆ. ತನಿಖಾ ಈ ಎಲ್ಲವನ್ನೂ ದೃಢಪಡಿಸಿದೆ. ಈಗ ಮೇಲ್ನೋಟಕ್ಕೆ 31ಕ್ಕೂ ಹೆಚ್ಚು ಪ್ರಕರಣಗಳು ಕಾಣುತ್ತಿದ್ದಾವಾದರೂ ದಂಡಿದಂಡಿಯಿದ್ದಾವೆಂಬುದು ಸ್ಪಷ್ಟ. ಈ ಅಕ್ರಮ ಮಂಜೂರಾತಿ ಹಗರಣದಲ್ಲಿ ಎನ್.ಆರ್.ಪುರ ಲ್ದಾರ್ ಆಗಿದ್ದ ರಾಜೇಶ್, ನೌಕರರಾದ ಎನ್.ಕೆ. ಣ್ಣ ರಾಮಣ್ಣ ನಾಡಿಗ, ಗಣನಾಯಕ ಹಾಗೂ ಮಾದಪ್ಪ ಕರ್ನಾಟಕ ಭೂಕಂದಾಯ ಕಾಯ್ದೆ 1964ರ 192ರಡಿಯಲ್ಲಿ ಕ್ರಿಮಿನಲ್ ಮೊಕದ್ದಮೆ ಹೂಡುವಂತೆ ಕಾರ್ಯಪಡೆ ಜಿಲ್ಲಾಧಿಕಾರಿ ಎನ್.ಎಸ್. ಗೌಡರಿಗೆ ಶಿಫಾರಸ್ಸು ಮಾಡಿದೆ.

ಜೊತೆಗೆ ಈ ಅಕ್ರಮ ಭೂ ಮಂಜೂರಾತಿ ಹಗರಣ ಜೀವರಾಜ್ ಅಧ್ಯಕ್ಷತೆಯ ಬಗರ್‌ಹುಕುಂ ಸಮಿತಿ ಮಲ್ಲೇ ನಡೆದಿದೆ. ಕಂದಾಯ ಕಾಯ್ದೆ ಪ್ರಕಾರ ಅವರ ವೂ ಕ್ರಮ ಜರುಗಿಸಬಹುದಾಗಿದೆಯೆಂದು ತನಿಖಾ ಪಡೆ ಜೀವರಾಜ್ ವಿರುದ್ಧ ಸ್ಪಷ್ಟವಾಗಿ ಹೇಳಿದೆ. ದರೆ ಇಂತಹುದೊಂದು ಕೋಟ್ಯಂತರ ರೂ. ಹಗರಣ ಜೀವರಾಜ್ 'ಇದು ನನ್ನ ಅವಧಿಯಲ್ಲಿ ನಡೆದದ್ದಲ್ಲ, ದ್ಯೆ ತನಿಖೆ ನಡೆಯಲಿ' ಅಂತ ಮೂರ್ಖನಂತೆ ಡುತ್ತಿದ್ದಾನೆ. ಆದರೆ ಇದೇ ಜೀವರಾಜ್ ನೇತೃತ್ವದಲ್ಲಿ ಂದೆ ಮೀಟಿಂಗೊಂದು ನಡೆದಿರುವ ಬಗ್ಗೆ ದಾಖಲೆ ಅದರಲ್ಲಿ ಈತನೇ 147 ಪ್ರಕರಣಗಳಲ್ಲಿ 21ಕ್ಕೆ ಹಂತದಲ್ಲಿ ಮಂಜೂರಾತಿ ನೀಡಲು ಶಿಫಾರಸ್ಸು ದ್ದಾನೆ! ಇದು ಜೀವರಾಜ್ ಅಸಲಿಯತ್ತುಗಳನ್ನು ಬೀಳಿಸಿದೆ.

ಯಾವುದೇ ವಿಚಾರದಲ್ಲಾದರೂ ಸರ್ಕಾರಿ ಕಡತಗಳನ್ನು ದಾಗಲಿ, ವೈಟನರ್ ಹಚ್ಚುವುದಾಗಲಿ ಮಾಡು ಇದು ಕ್ರಿಮಿನಲ್ ಮಟ್ಟದ ಅಪರಾಧವಾಗುತ್ತದೆ. ಂದು ವೇಳೆ ತಿದ್ದುಪಡಿ ಮಾಡುವ ಅನಿವಾರ್ಯತೆ ಯೂ ಅದರ ಕೆಳಗೆ ಸಕಾರಣ ನೀಡಿ ತಹಶೀಲ್ದಾರರ ದೊಂದಿಗೆ ನೋಟ್ ಹಾಕಬೇಕೆಂಬ ನಿಯಮವಿದೆ. ಅಕ್ರಮ-ಸಕ್ರಮ ಕುರಿತ ಕಡತಗಳಲ್ಲಿ ಇಂಥ ಡಿಗಳು ಯಥೇಚ್ಛವಾಗಿವೆ. ಆದರಿಲ್ಲಿ ಯಾವ ೂ, ಸೂಚನೆಗಳೂ ನಮೂದಾಗಿಲ್ಲ.


ಗ ಬಿಜೆಪಿ ಪಟಾಲಂ ಇಂಥದ್ದೊಂದು ಹಗರಣ ಇಲ್ಲ ಅಂತ ಬಿಂಬಿಸಲು ಹೆಣಗುತ್ತಿದೆಯಾದರೂ ಅವರವರೊಳಗೇ ತಿಕ್ಕಾಟ ಆರಂಭವಾಗಿದೆ. ಇದರ ಲ್ಲೇ ಒಂದಷ್ಟು ಸತ್ಯಗಳು ಹೊರಬೀಳುತ್ತಿವೆ. ಈ ದ ಆರೋಪಿಗಳಲ್ಲೊಬ್ಬನಾಗಿರುವ ಎನ್.ಕೆ.ರಾಮಣ್ಣ ಕೂಡಾ ಬಚಾವಾಗಲು ಹವಣಿಸಿ ಸರ್ಕಾರಿ ನು ಸಂರಕ್ಷಣಾ ಕಾರ್ಯಪಡೆಯ ಬಾಲಸುಬ್ರಮಣಿ ಗೆ ಮನವಿ ಸಲ್ಲಿಸಿದ್ದಾನೆ.

006ರಿಂದ-09ರವರೆಗೆ ಎನ್.ಆರ್.ಪುರ ತಾಲ್ಲೂಕು ಬಗರ್‌ಹುಕುಂ ಶಾಖೆಯಲ್ಲಿ ಕೆಲಸ ಮಾಡಿದ್ದ ಮನವಿಯಲ್ಲಿ ಕೆಲವೊಂದು ವಿಚಾರ ಪ್ರಸ್ತಾಪಿಸಿದ್ದಾನೆ. ಹಗರಣವನ್ನು ನಿಚ್ಚಳವಾಗಿಸಿದೆ. ವಿಚಾರಣೆ ನಡೆಸುವ ಎಲ್ಲಾ ದಾಖಲೆಗಳನ್ನು ಹಾಗೂ ಕಡತಗಳನ್ನು ನಪಡಿಸಿಕೊಳ್ಳಬೇಕು. ಯಾಕೆಂದರೆ ಈ ದಾಖಲೆಗಳು ಹಂತದಲ್ಲಾದರೂ ತಿದ್ದುಪಡಿಯಾಗುವ ಸಾಧ್ಯತೆಯಿದೆ. ನೆ 50 ಮತ್ತು 53ರ ಪಹಣಿಗಳನ್ನು ಖಾಸಗಿಯವರಿಂದ ಸಾಗಿದ್ದು, ನಿಯಮಾನುಸಾರ ಬರೆದಿಲ್ಲ. ಇಂಥ ರ್ಣದಲ್ಲಿ ತನ್ನ ಮೇಲೆ ಅತೀ ಒತ್ತಡ ಬಂದಿತ್ತು ಣ್ಣ ರಾಮಣ್ಣ ನಾಡಿಗ್ ಅಲವತ್ತುಕೊಂಡಿದ್ದಾನೆ. ಈತನ ಗಳು ಇಡೀ ಹಗರಣ ನಡೆದಿರುವುದನ್ನು ಳಿಸಿವೆ.

ದರೀಗ ಜೀವರಾಜ್ ಬಚಾವಾಗಲು, ಜನರ ಉಗಿತ ತಪ್ಪಿಸಿಕೊಳ್ಳಲು ಹೊಸ ಅವತಾರವೆತ್ತುತ್ತಿದ್ದಾನೆ. ಲ್ಲ ಅರಣ್ಯಪ್ರದೇಶದಲ್ಲಿ ಸಾಗುವಳಿ ನಡೆಸುತ್ತಿರುವವರನ್ನು ಡಿ ಮಾಡಲು ಸಂಚು ನಡೆಸುತ್ತಿರುವ ಬಡವರ ಧಿಗಳು' ಅಂತೆಲ್ಲ ಎಗರಾಡುತ್ತಿದ್ದಾನೆ. ಆದರೆ ನಿಜಕ್ಕೂ ಸರಿಗೆ ತುಂಡು ಭೂಮಿಯ ಹಕ್ಕು ನೀಡುವುದರ ಯಾರಲ್ಲೂ ತಕರಾರುಗಳಿಲ್ಲ, ಅರ್ಹರಿಂದ ಹಣ ಕೊಂಡು ಯಾಮಾರಿಸಿ ಅನರ್ಹರಿಗೆ ಮಣೆ ವುದರ ಬಗೆಗೆ ಆಕ್ರೋಶವಿದೆ.

ವರಾಜ್ ಏನೇ ತಿಪ್ಪರಲಾಗ ಹಾಕಿದರೂ ಈ ದಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ, ಯಾಕೆಂದರೆ ಸುಬ್ರಮಣಿಯನ್ ಇದೀಗಲೇ ಈತನ ವಿರುದ್ಧ ಆರ್ ಫೈಲ್ ಮಾಡಲು ಮುಂದಡಿಯಿಡುತ್ತಿದ್ದಾರೆ. ಸ್ವಪ್ನಂತೆ ನಾಟಕವಾಡುತ್ತಾ ಬಂದಿರುವ ಜೀವರಾಜ್ ಬಡವರ ಬದುಕಿನ ಮೇಲೆ ಸವಾರಿ ನಡೆಸಿ, ವಿಧಾನ ಸಭಾ ಕ್ಷೇತ್ರದ ಇತಿಹಾಸಕ್ಕೆ ಕಪ್ಪು ಪಾಗಿರುವುದು ನಿಜಕ್ಕೂ ನಾಚಿಕೆಗೇಡು.

ಜೀವರಾಜ್ ಮಾಡಿದ ಪಾಪಗಳೆಲ್ಲ ಇಷ್ಟರಲ್ಲೇ ಯ ಕಟ್ಟಿಸಿಕೊಳ್ಳಲಿವೆ!



# ಯಡ್ಡಿ ಸಂಪುಟ ಸರ್ಜರಿ: ಶುರುವಾಗಲಿದೆ ಮತ್ತೆ ಕಿತ್ತಾಟ


ಮುಖ್ಯಮಂತ್ರಿ ಯಡಿಯೂರಪ್ಪ ತಮ್ಮ ಸಚಿವ ಸಂಪುಟ ವಿಸ್ತರಣೆಗೆ ಮುಂದಾಗಿದ್ದೇ ತಡ, ಬಿಜೆಪಿಯಲ್ಲಿನ ಅವರ ವಿರೋಧಿಗಳೆಲ್ಲಾ ಒಂದಾಗಿ ಯಡ್ಡಿ ಏಕಾಂಗಿಯಾಗಿದ್ದಾರೆ. ಮಾತ್ರವಲ್ಲ "ಸದ್ಯಕ್ಕೆ ಸಂಪುಟ ವಿಸ್ತರಣೆ ಬೇಡ. ಕೇವಲ ಅದಕ್ಷ ಮಂತ್ರಿಗಳ ಕೈಬಿಟ್ಟು ಸಂಪುಟವನ್ನು ಪುನರ್ ರಚನೆ ಮಾಡಿದರೆ ಸಾಕು" ಎಂದು ಪಕ್ಷದ ರಾಜ್ಯಾಧ್ಯಕ್ಷ ಕೆ.ಎಸ್.ಈಶ್ವರಪ್ಪ ಮತ್ತು ಯಡ್ಡಿಯ ಸಾಂಪ್ರದಾಯಕ ವೈರಿ ಅನಂತಕುಮಾರ್ "ಕೋರಸ್"ನಲ್ಲಿ ಬೊಬ್ಬೆ ಹಾಕಿರುವುದೂ ಯಡ್ಡಿಯನ್ನು ಆತಂಕಕ್ಕೆ ದೂಡಿದೆ.



ಈಶ್ವರಿ ಮತ್ತು ಅನಂತು ಹಾಕಿದ ಈ ಅಡಚಣೆಯನ್ನು ಕಂಡು ತತ್ತರಿಸಿದ ಯಡ್ಡಿ ಆದಷ್ಟು ಕೂಡಲೇ ತಮ್ಮ ಪರ ಮಾಪ್ತರಾದ ವಿ.ಸೋಮಣ್ಣ ಮತ್ತು ಶೋಭಾ ಕರಂದ್ಲಾಜೆಯನ್ನು ಸಂಪುಟಕ್ಕೆ ಸೇರಿಸಿಕೊಳ್ಳುವ ಐಡಿಯಾವನ್ನು ಕೈಬಿಡಬೇಕಾಗಿ ಬಂದಿದೆ. ರಾಜ್ಯದಲ್ಲಿ ತಾನೋರ್ವ ಪ್ರಶ್ನಾತೀತ ನಾಯಕ ಎಂಬ ಭ್ರಮೆಯಲ್ಲಿದ್ದ ಯಡ್ಡಿಗೆ ಸಂಪುಟ ವಿಸ್ತರಣೆ ವಿಚಾರದಲ್ಲಿ ಮುಖಭಂಗವಾಗಿ ಅವರ ವಿರೋಧಿಗಳು ಮೊದಲ ಸುತ್ತಿನ ಜಯಗಳಿಸಿದಂತಾಗಿದೆ.

ಈಶ್ವರಪ್ಪ ಮತ್ತು ಅನಂತಕುಮಾರ್ ಎಂಬ ಇಬ್ಬರು ಹಿರಿಯ ಚೆಡ್ಡಿ ನಾಯಕರಲ್ಲದೆ, ಬಿಜೆಪಿಯೊಳಗಿನ ವಿಭಿನ್ನ ಗುಂಪುಗಳ ನಾಯಕರೆಲ್ಲರೂ ಈಗ ಯಡ್ಡಿ ವಿರುದ್ಧ ದಿನಕ್ಕೊಂದು ಬೌನ್ಸರ್‌ಗಳನ್ನು ಎಸೆಯುತ್ತಲೇ ಇದ್ದಾರೆ. ಇದೆಲ್ಲದರ ಪರಿಣಾಮವಾಗಿ ಯಡ್ಡಿ ತಲೆಕೆಟ್ಟವರಂತೆ ವರ್ತಿಸುತ್ತಾ ತಮ್ಮ ವಿರುದ್ಧದ ಭಿನ್ನಮತವನ್ನು ಶಮನಗೊಳಿಸಲು ತೆರೆಮರೆಯಲ್ಲಿ ಪ್ರಯತ್ನಗಳನ್ನು ನಡೆಸುತ್ತಲೇ ಇದ್ದಾರೆ. ಆದರೆ ಯಡ್ಡಿ ಮಾತಿಗೆ ಯಾರೂ ಕ್ಯಾರೇ ಎನ್ನುತ್ತಿಲ್ಲ. ಹೀಗಾಗಿ ಸದ್ಯಕ್ಕೆ ಇತ್ತ ಸಂಪುಟ ಪುನಾರಚನೆಯೂ ಆಗುತ್ತಿಲ್ಲ ಅತ್ತ ವಿಸ್ತರಣೆಯೂ ಆಗುತ್ತಿಲ್ಲ. ಪಾಪ, ಯಡ್ಡಿ ಕೈಕೈ ಹೊಸುಕುವಂತಾಗಿದೆ.

ಕಳೆದ ವಿಧಾನ ಸಭಾದ ಅಧಿವೇಶನದಲ್ಲಿ ಕಾಂಗ್ರೆಸ್ ಪಕ್ಷದವರ ಅಸಹಕಾರಕ್ಕಿಂತ ತಮ್ಮದೇ ಪಕ್ಷದ ನಾಯಕರ ಒಳಜಗಳ ಮತ್ತು ಅಸಹಕಾರವೇ ಯಡ್ಡಿಯಲ್ಲಿ ಹೆಚ್ಚು ಇರುಸುಮುರುಸು ಉಂಟುಮಾಡಿತ್ತು, ಅದರಲ್ಲೂ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅಧಿವೇಶನದಲ್ಲಿ ಮುಖ್ಯಮಂತ್ರಿ ವಿರುದ್ಧ ಅರ್ಭಟಿಸಿದಾಗ ಬಿಜೆಪಿಯ ಯಾರೂ ಯಡ್ಡಿ ಪರ ಮಾತನಾಡಲು ಎದ್ದು ನಿಲ್ಲಲೇ ಇಲ್ಲ, ಇದರಿಂದ ಮನನೊಂದ ಯಡಿಯೂರಪ್ಪ ಅಧಿವೇಶನ ಮುಗಿದನಂತರ ತನ್ನ ಅತ್ಯಂತ ನಂಬುಗೆಯ ಶಾಸಕರಾದ ಶೋಭಾ ಕಂದ್ಲಾಜೆ ಮತ್ತು ಸೋಮಣ್ಣನನ್ನು ತಮ್ಮ ಸಂಪುಟಕ್ಕೆ ಸೇರಿಸಿಕೊಳ್ಳಬೇಕೆಂದು ನಿರ್ಧರಿಸಿದ್ದರು.



ಆದರೆ ಇವರಿಬ್ಬರು ಸಚಿವ ಸಂಪುಟವನ್ನು ಸೇರಿದರೆ ಖಂಡಿತವಾಗಿಯೂ ಅಧಿವೇಶನದಲ್ಲಿ ಮತ್ತು ಅಧಿವೇಶನದ ಹೊರಗಡೆಯೂ ಯಡ್ಡಿಯ ಕೈ ಬಲಪಡಿಸಿದಂತಾಗುತ್ತದೆ; ಜೊತೆಗೆ ಪಕ್ಷ ಮತ್ತು ಸರ್ಕಾರದ ಮೇಲೂ ಯಡ್ಡಿಯ ಹತೋಟಿ ಇನ್ನಷ್ಟು ಗಟ್ಟಿಯಾಗುತ್ತದೆ ಎಂಬ ಕಾರಣಕ್ಕೇ ಅವರ ವಿರೋಧಿಗಳೆಲ್ಲಾ ಈಗ ಒಂದಾಗಿದ್ದಾರೆ. ಮಾತ್ರವಲ್ಲ "ಬರೀ ಇಬ್ಬರನ್ನು ಸಂಪುಟಕ್ಕೆ ಸೇರಿಸಿಕೊಳ್ಳುವುದು ಬೇಡವೇ ಬೇಡ. ಬದಲಾಗಿ ಅದಕ್ಷ ಸಚಿವರನ್ನು ಸಂಪುಟದಿಂದ ಕೈಬಿಟ್ಟು ಆಮೇಲೆ ಸಂಪುಟವನ್ನು ಪುನರ್ ರಚಿಸಿ ಅದರಲ್ಲಿ ನಮ್ಮ ಕಡೆಯ ಒಂದಿಬ್ಬರನ್ನೂ ಸಂಪುಟಕ್ಕೆ ಸೇರಿಸಿಕೊಳ್ಳಿ" ಎಂದು ಈಶ್ವರಪ್ಪ ಮತ್ತು ಅನಂತಕುಮಾರ್ ಯಡ್ಡಿ ವಿರುದ್ಧ ಬಾಣ ಬಿಟ್ಟಿದ್ದಾರೆ.

ಯಡ್ಡಿಯ ಸಮಸ್ಯೆ ಏನೆಂದರೆ, ತಾನು ಅದಕ್ಷ ಮಂತ್ರಿಗಳ ಕೈಬಿಡುವುದಾದರೆ ತನ್ನ ಸಚಿವ ಸಂಪುಟದ ಶೇ. 99 ಸಚಿವರನ್ನೇ ಮನೆಗೆ ವಾಪಸ್ ಕಳುಹಿಸಬೇಕಾಗುತ್ತದೆ. ಹಾಗೆ ಮಾಡುವಂತಿಲ್ಲ, ಆಕಸ್ಮಾತ್ ಮಾಡಿದರೂ ಖಾಲಿಯಾದ ಜಾಗಕ್ಕೆ ಬಂದು ಕುಳಿತುಕೊಳ್ಳಬೇಕೆಂದು ಆಶಿಸುತ್ತಿರುವವರ ದೊಡ್ಡ ಪಟ್ಟಿಯೇ ಇದೆ. ಕಾನೂನಿನ ಪ್ರಕಾರ ಕೇವಲ 32 ಜನ ಮಾತ್ರ ಸಚಿವರಾಗಬಹುದು. ಆದ್ದರಿಂದ ಯಾರನ್ನು ಸೇರಿಸಿಕೊಂಡರೂ, ಯಾರನ್ನು ಸೇರಿಸಿಕೊಳ್ಳದಿದ್ದರೂ ಸಂಪುಟ ವಿಸ್ತರಣೆ ಆದಕೂಡಲೇ ಭಿನ್ನ ಮತ್ತೆ ಭುಗಿಲೆದ್ದು ಯಡ್ಡಿಯ ಕುರ್ಚಿಯೇ ಅಲುಗಾಡಬಹುದು. ಇಂತಹ ಸಂದಿಗ್ಧ ಇಕ್ಕಟ್ಟಿನಲ್ಲಿ ಯಡ್ಡಿ ಸಿಕ್ಕಿಹಾಕಿಕೊಂಡು ಯಾತನೆ ಅನುಭವಿಸುತ್ತಿದ್ದಾರೆ.

ಈ ಮಧ್ಯೆ ಬಿಜೆಪಿಯ 'ಪಿತೃ' ಸಂಘಟನೆಯಾದ ಆರೆಸ್ಸೆಸ್‌ನ ನಾಯಕರು ಸದ್ಯಕ್ಕೆ ಯಡ್ಡಿ ಸಂಪುಟದಲ್ಲಿ ಸಚಿವರಾಗಿರುವ ಸ್ವತಂತ್ರ ಅಭ್ಯರ್ಥಿಗಳಿಗೆ ಕೊಕ್ ಕೊಟ್ಟು ಆ ಜಾಗೆಗಳಿಗೆ ಆರೆಸ್ಸೆಸ್‌ನ 'ಸಂಸ್ಕೃತಿ'ಯಲ್ಲಿ ಬೆಳೆದವರನ್ನು ತರಬೇಕೆಂದು 'ಫತ್ವಾ' ಹೊರಡಿಸಿದೆಯಂತೆ. ಇದರ ಹಿಂದಿರುವ ಲೆಕ್ಕಾಚಾರ, ಎರಡು ವರ್ಷಗಳ ಹಿಂದೆ ಸರ್ಕಾರ ಸ್ಥಾಪಿಸಲು ಇದೇ ಸ್ವತಂತ್ರ ಅಭ್ಯರ್ಥಿಗಳ ಬೆಂಬಲದ ಅವಶ್ಯಕತೆ ಇತ್ತು. ಆದರೀಗ ಹೇಗಿದ್ದರೂ ಆಪರೇಷನ್ ಕಮಲದ ಮೂಲಕ ಬಿಜೆಪಿ ತನ್ನ ಶಾಸಕರ ಸಂಖ್ಯೆಯನ್ನು ಹೆಚ್ಚಿಸಿಕೊಂಡಿರುವುದರಿಂದ ಅದಕ್ಕೆ ಈ ಅಸಹಾಯಕ ಸ್ವತಂತ್ರ ಶಾಸಕರ ಹಂಗು ಈಗ ಬೇಕಿಲ್ಲ. ಹೇಗಿದೆ ಬಿಜೆಪಿಯ ಉಂಡೆಳೆ ಬಿಸಾಕುವ 'ಸಂಸ್ಕೃತಿ'?

ಸಂಪುಟ ಪುನರ್ ರಚನೆಯ ಬಗ್ಗೆ ಬಿಜೆಪಿಯೊಳಗೇ ಇಷ್ಟೆಲ್ಲ ಗೊಂದಲಗಳು ನಡೆಯುತ್ತಿರುವಾಗಲೇ ಸಾರಿಗೆ ಸಚಿವ ಆರ್. ಅಶೋಕ್ ಅವರ ಅಧಿಕಪ್ರಸಂಗತನ ಚೆಡ್ಡಿಗಳಲ್ಲಿ ಇನ್ನಷ್ಟು ಗೊಂದಲವನ್ನು ಹುಟ್ಟು ಹಾಕಿತು. ಅದೇನಂದರೆ ದಿನಪತ್ರಿಕೆಗಳಲ್ಲಿ ತನ್ನ ಪರವಾದ ವರದಿಗಳನ್ನು ಬರೆಸುವುದರಲ್ಲಿ ನಿಸ್ಸೀಮನಾಗಿರುವ ಅಶೋಕ್ ಇತ್ತೀಚೆಗೆ 'ಅಶೋಕ್ ಉಪಮುಖ್ಯಮಂತ್ರಿ ಆಗುತ್ತಾರೆ' ಎಂಬ ಸುದ್ದಿಯನ್ನು ಬರೆಸಿದ್ದರು.



ಇದೆಷ್ಟು ಕಪೋಲಕಲ್ಪಿತ ವರದಿ ಆಗಿತ್ತೆಂದರೆ ಇದನ್ನು ಓದಿದಾಕ್ಷಣ ಅಶೋಕ್‌ರ ಗಾಡ್‌ಫಾದರ್ ಅನಂತಕುಮಾರ್ ಅವರೇ ಬೆಚ್ಚಿಬಿದ್ದರಂತೆ. ಅಷ್ಟೇ ಅಲ್ಲ ಯಡಿಯೂರಪ್ಪನ ನಂತರ ಸರ್ಕಾರದಲ್ಲಿ ತಮಗೇ ಅತ್ಯುನ್ನತವಾದ ಸ್ಥಾನ ದೊರೆಯಬೇಕು ಎಂದು ಆದೇಶ ಹೊರಡಿಸಿರುವ ಬಳ್ಳಾರಿ ಗಣಿ ಗ್ಯಾಂಗಿನ ರೆಡ್ಡಿಗಳೂ ಅಶೋಕ್ ಉಪ ಮುಖ್ಯಮಂತ್ರಿ ಆಗುವ ಸುದ್ದಿ ಓದಿ ಕೆಂಡಮಂಡಲ ಆದರಂತೆ.

ಹಿಂದಿನಿಂದಲೂ ಈಶ್ವರಪ್ಪ "ಮುಖ್ಯಮಂತ್ರಿ ಸ್ಥಾನ ಪ್ರಬಲವಾದ ಜನಾಂಗಕ್ಕೆ ದೊರಕಿರುವುದರಿಂದ, ಉಪ ಮುಖ್ಯಮಂತ್ರಿ ಸ್ಥಾನ ಹಿಂದುಳಿದ ವರ್ಗಕ್ಕೆ ಸಿಗಬೇಕು" ಎಂದೇ ವಾದಿಸುತ್ತಾ ಬಂದಿದ್ದಾರೆ. ಅದಕ್ಕೆ ಕಾರಣ ಆ ಸ್ಥಾನದ ಮೇಲೆ ಸ್ವತಃ ಈಶ್ವರಿ ಕಣ್ಣಿಟ್ಟಿರುವುದು. ಅಂತಹ ಈಶ್ವರಪ್ಪ ಕೂಡ 'ಅಶೋಕ್ ಉಪ ಮುಖ್ಯಮಂತ್ರಿ ಆಗುತ್ತಾರೆ' ಎಂಬ ಸುದ್ದಿ ಓದಿ ದಿಗ್ಭ್ರಾಂತರಾದರಂತೆ.

ಕೂಡಲೇ ಕಾರ್ಯಾಚರಣೆ ಶುರುಮಾಡಿದ ಈಶ್ವರಪ್ಪ ಬಳ್ಳಾರಿಯ ರೆಡ್ಡಿ ಗ್ಯಾಂಗ್ ಮತ್ತು ಅನಂತಕುಮಾರ್ "ಉಪ ಮುಖ್ಯಮಂತ್ರಿ ಸ್ಥಾನ ಬೇಡವೇ ಬೇಡ" ಎಂದು ಯಡ್ಡಿಗೆ ಹೇಳಿದರಂತೆ. ಆಗ ಯಡ್ಡಿ "ಯಾವುದೇ ಕಾರಣಕ್ಕೂ ಉಪ ಮುಖ್ಯಮಂತ್ರಿ ಸ್ಥಾನವನ್ನು ಸೃಷ್ಟಿಸುವ ಬಗ್ಗೆ ನಾನು ಯೋಚಿಸಿಯೇ ಇಲ್ಲ, ಚರ್ಚಿಸಿಯೂ ಇಲ್ಲ" ಎಂದಾಗಲೇ ಈ ಗುಗ್ಗುಗಳಿಗೆ ಗೊತ್ತಾಗಿದ್ದು ಅದು ಸ್ವತಃ ಅಶೋಕ್ ಪತ್ರಿಕೆಯಲ್ಲಿ ಬರೆಸಿದ ಒಂದು ಕಟ್ಟು ಕತೆ ಎಂದು.

ಅಶೋಕ್ ಅವರು ತೆರೆಮರೆಯ ತಂತ್ರ-ಕುತಂತ್ರಗಳು ಬಹಿರಂಗಗೊಳ್ಳುತ್ತಿದ್ದಂತೆ ಈಶ್ವರಪ್ಪ ಮತ್ತು ಅನಂತಕುಮಾರ್ ಅಶೋಕ್ ಅವರನ್ನು ತರಾಟೆಗೆ ತೆಗೆದುಕೊಂಡರು. ಅವರಿಂದ ಹಿಗ್ಗಾ ಮುಗ್ಗಾ ಉಗಿಸಿಕೊಂಡ ನಂತರ ಅಶೋಕ್ "ನಾನು ರಾಜಕೀಯದಲ್ಲಿ ಇನ್ನೂ ಬಾಲಕ. ಯಾವುದೇ ಕಾರಣಕ್ಕೂ ನಾನು ಉಪ ಮುಖ್ಯಮಂತ್ರಿ ಆಕಾಂಕ್ಷಿಯಲ್ಲ" ಎಂಬ ಸ್ಪಷ್ಟನೆಯನ್ನು ನೀಡಿದರು. ಈ ಸಂಬಂಧ ಯಡ್ಡಿ ಕೂಡ ತನ್ನ ಇಂದಿನ ಪಟ್ಟದ ಶಿಷ್ಯ ರೇಣುಕಾಚಾರ್ಯನ ಮುಖಾಂತರ "ಉಪ ಮುಖ್ಯಮಂತ್ರಿ ಸ್ಥಾನ ಅಗತ್ಯವಿಲ್ಲ" ಎಂಬ ಹೇಳಿಕೆ ನೀಡಿಸಿದರು.

ಉಪ ಮುಖ್ಯಮಂತ್ರಿ ಸ್ಥಾನವನ್ನು ಸೃಷ್ಟಿಸುವುದು ಯಾವುದೇ ಮುಖ್ಯಮಂತ್ರಿ ಇಷ್ಟಪಡದ ವಿಷಯ. ಯಾಕೆಂದರೆ ಅದು ಎರಡು ಅಧಿಕಾರ ಕೇಂದ್ರಗಳ ಕಸರತ್ತು ಆಗುತ್ತದೆ. ಅಷ್ಟೇ ಅಲ್ಲ ಇಂದಿನ ಉಪ ಮುಖ್ಯಮಂತ್ರಿಯೇ ನಾಳೆಯ ಮುಖ್ಯಮಂತ್ರಿಯಾಗಲು ದಾರಿ ಮಾಡಿಕೊಡುತ್ತದೆ. ಹೀಗಾಗಿ ಅಶೋಕ್ ಉಪ ಮುಖ್ಯಮಂತ್ರಿ ಆದರೆ, ಅದರ ಅರ್ಥ ಅವರು ಭಾವಿ ಮುಖ್ಯಮಂತ್ರಿ ಎಂದೇ. ಈ ಕಾರಣದಿಂದಲೇ ಅಶೋಕ್‌ರ ಉಪ ಮುಖ್ಯಮಂತ್ರಿಯ ಆಸೆಗೆ ಬಳ್ಳಾರಿಯ ಗಣಿ ಕಳ್ಳರು, ಉಡುಪಿಯ ತಟ್ಟೆ ಗಿರಾಕಿ ಈಶ್ವರಪ್ಪ ಮತ್ತು ಅನಂತಕುಮಾರ್ ಜೊತೆಗೂಡಿ ತಣ್ಣೀರೆರಚಿದ್ದು.

ವಾಸ್ತವವಾಗಿ, ಬಿಜೆಪಿ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿ ಸ್ಥಾನವನ್ನು ಸೃಷ್ಟಿಸುವ ಅನಿವಾರ್ಯ ಪರಿಸ್ಥಿತಿ ಉದ್ಭವವಾದಲ್ಲಿ ಹಿಂದುಳಿದ ವರ್ಗಕ್ಕೆ ಸೇರಿದ ಶ್ರೀರಾಮುಲು ಅವರನ್ನೇ ಉಪ ಮುಖ್ಯಮಂತ್ರಿ ಮಾಡಬೇಕೆಂದು ಆರು ತಿಂಗಳ ಹಿಂದೆಯೇ ರೆಡ್ಡಿ ಗ್ಯಾಂಗ್ ಬಿಜೆಪಿಯ ಕೇಂದ್ರ ನಾಯಕರಲ್ಲಿ ಮನವಿ ಮಾಡಿದ್ದರು. ಕರ್ನಾಟಕದ ಅಧಿವೇಶನದಲ್ಲಿ ಗಣಿ ವ್ಯವಹಾರದ ಧೂಳು ಎದ್ದು ಮುಖ್ಯಮಂತ್ರಿ ಮತ್ತು ರೆಡ್ಡಿ ಗ್ಯಾಂಗಿನ ಸಂಬಂಧ ಹದಗೆಡದಿದ್ದರೆ ಶ್ರೀರಾಮುಲು ಇಷ್ಟೊತ್ತಿಗೆಲ್ಲ ಉಪ ಮುಖ್ಯಮಂತ್ರಿಯಾಗುತ್ತಿದ್ದನೇನೋ.

ಇದೆಲ್ಲ ಬದಿಗಿರಲಿ, ಈಗ ಈಶ್ವರಪ್ಪ ಕೂಡ ಯಡ್ಡಿ ವಿರುದ್ಧ ಬಹಿರಂಗವಾಗಿ ಕತ್ತಿ ಮಸೆಯುತ್ತಿರುವುದಕ್ಕೆ ನಾನಾ ಕಾರಣಗಳಿವೆ. ಇತ್ತೀಚೆಗೆ ಕಾಂಗ್ರೆಸ್ಸಿಗರ 'ನಾಡ ರಕ್ಷಣಾ ನಡಿಗೆ' ಎಂಬ ಪಾದಯಾತ್ರೆಗೆ ಪರ್ಯಾಯವಾಗಿ ರೆಡ್ಡಿ ಸಹೋದರರು ಬಳ್ಳಾರಿಯಲ್ಲಿ ಸಮಾವೇಶವನ್ನು ಏರ್ಪಡಿಸಿದಾಗ ಪಕ್ಷಾಧ್ಯಕ್ಷ ಈಶ್ವರಪ್ಪ ರೆಡ್ಡಿಯವರನ್ನು ಸಂಪೂರ್ಣವಾಗಿ ಬೆಂಬಲಿಸಿದರು.

ರೆಡ್ಡಿಗಳಿಂದ ಅಕ್ರಮ ಗಣಿಗಾರಿಕೆಯಿಂದ ಸಾಕಷ್ಟು ಮಾನ ಕಳೆದುಕೊಂಡಿರುವ ಯಡ್ಡಿ ಆ ಸಮಾವೇಶ ನಡೆಯಬಾರದು ಎಂದು ಹಟ ಹಿಡಿದರೆ, ಯಾಕೆ ನಡೆಯಬಾರದು ಎಂದು ಈಶ್ವರಪ್ಪ ಹಠ ಮಾಡಿದ್ದರು. ಅಷ್ಟೇ ಅಲ್ಲ, ರೆಡ್ಡಿ ಸಹೋದರರ ಜೊತೆಗೆ ದೆಹಲಿಗೆ ಹೋಗಿ ಅಲ್ಲಿ ಕೇಂದ್ರ ನಾಯಕರಿಗೆ ಬಳ್ಳಾರಿ ಸಮಾವೇಶದ ಅಗತ್ಯತೆಯನ್ನು ಮನವರಿಕೆ ಮಾಡಿಕೊಟ್ಟಿದ್ದರು ಈಶ್ವರಪ್ಪ. ಹೀಗೆ ಈಶ್ವರಪ್ಪ ಮತ್ತು ರೆಡ್ಡಿ ಗ್ಯಾಂಗಿನ ನಡುವೆ ಗಳಸ್ಯ ಕಂಠಸ್ಯ ಸಂಬಂಧ ಏರ್ಪಡುತ್ತಿರುವುದನ್ನು ನೋಡಿ ಯಡ್ಡಿ ಕಂಗಾಲಾದರು.

ಅಂದರೆ ಈಗ ಬಿಜೆಪಿಯಲ್ಲಿ ಮುಖ್ಯಮಂತ್ರಿ ಯಡ್ಡಿ ವಿರೋಧಿಗಳೆಲ್ಲ ಒಂದಾಗಿದ್ದಾರೆ. ಸಂಪುಟದ ಪುನರ್ ರಚನೆಗೆ ಸಂಬಂಧ ಹಟ್ಟಂತೆ ನಡೆಯುತ್ತಿರುವ ಈ ಕಿತ್ತಾಟ ಬಿಜೆಪಿಯ ಪಾಲಿಗೆ ಮತ್ತೊಂದು ಅಗ್ನಿ ಪರೀಕ್ಷೆಯಾಗಿದೆ. ಚೆಡ್ಡಿ ವಲಯದಿಂದಲೇ ಉದ್ಭವವಾಗಿರುವ ಮತ್ತೊಂದು ಸುತ್ತಿನ ಭಿನ್ನಮತ ಮತ್ತು ಅಸಮಾಧಾನಗಳನ್ನು ಯಡ್ಡಿ ಹೇಗೆ ಎದುರಿಸುತ್ತಾರೆ ನೋಡಬೇಕು....

● ಸದಾಶಿವ ಶೆಣೈ

# ಯಾದಗಿರಿ: ಸೇಡಿನ ರಾಜಕಾರಣಕ್ಕೆ ಬಿತ್ತು ಮತ್ತೊಂದು ಹೆಣ

ಯಾದಗಿರಿಯ ನಡುರಸ್ತೆಯಲ್ಲಿ ರಾಜುಗೌಡನನ್ನು ಹಾಡುಹಗಲೇ ಬರ್ಬರವಾಗಿ ಕೊಂದು ಹಾಕಲಾಗಿದೆ. ಯಾಳಗಿಯ ಮಾಲಿಪಾಟೀಲಿ ಕುಟುಂಬ ಮತ್ತು ಶೇಖರ ಗೌಡರ ಕುಟುಂಬಗಳ ನಡುವಿನ ರಾಜಕೀಯ ಜಿದ್ದಾಜಿದ್ದಿಗೆ ಮತ್ತೊಂದು ಹೆಣ ಬಿದ್ದಂತಾಗಿದೆ.


ರಾಜುಗೌಡ

ಆರು ತಿಂಗಳ ಹಿಂದೆ ಸುಪಾರಿ ಕೊಲೆ ಗಡುಕರಿಗೆ ತಮ್ಮ ಮಗ ಶರಣಗೌಡ ಪಾಟೀಲನನ್ನು ಕಳೆದುಕೊಂಡು ಇದೀಗ ಮತ್ತೊಬ್ಬ ಮಗ ರಾಜುಗೌಡನನ್ನು ಕಳೆದು ಕೊಂಡು ಕಡು ದುಃಖ ಅನುಭವಿಸುತ್ತಿದ್ದ ಶೇಖರಗೌಡ ಮಾಲಿಪಾಟೀಲ ಮೆತ್ತಗಾಗಿ ಹೋಗಿದ್ದ. ಈಗಾಗಲೇ ಆತನ ದೇಹವನ್ನು ಸೇರಿಕೊಂಡಿರುವ ಕ್ಯಾನ್ಸರ್ ಒಂದು ರೀತಿಯ ಬಾಧೆ ಮಾಡಿದರೆ, ತನ್ನ ಕಣ್ಣ ಮುಂದೆಯೆ ತನ್ನಿಬ್ಬರು ಮಕ್ಕಳು ಬರ್ಬರವಾಗಿ ಹತ್ಯೇಡಾಗಿ ಹೋದರಲ್ಲ ಎಂಬ ಕಳವಳ ಅವರ ಮುಖ ದಲ್ಲಿ ಮಡುಗಟ್ಟಿ ನಿಂತಿತ್ತು, ಸಿಟ್ಟು, ಆಕ್ರೋಶ, ಭಾವಾವೇಶ ಗಳನ್ನು ಮೀರಿ ನಿಂತ ಮುಖ ಈ ಇಳಿವಯಸ್ಸಿನಲ್ಲಿಯೂ ಕೆಂಪಗಾಗಿ ಹೋಗಿತ್ತು.

ಆದರೆ ನಿನ್ನೆಯ ದಿನದ ತನಕವೂ ಯಾಳಗಿಯ ಜನಕ್ಕೆ ಬೇಕು ಬೆಲ್ಲವಾಗಿದ್ದ, ಎಲ್ಲರೊಂದಿಗೂ ಕಲೆತು ಹೋಗುತ್ತಿದ್ದ ರಾಜುಗೌಡನನ್ನು ಯಾದಗಿರಿಯ ಮುಖ್ಯ ರಸ್ತೆಯಲ್ಲಿ ಹಾಡುಹಗಲೇ ಮಧ್ಯಾಹ್ನ 1.40 ಕ್ಕೆ ಸರಿಯಾಗಿ ಫೋರ್ ವ್ಹೀಲರ್‌ನಲ್ಲಿ ಬಂದ ಹಂತಕರು ಸರಿಯಾಗಿ ಗುರಿಯಿಟ್ಟು ಬರ್ಬರವಾಗಿ ಕೊಂದುಹೋಗಿದ್ದರು. 2006 ನವೆಂಬರ್ 30 ರಂದು ಸುರಪುರದ ತಾಲೂಕು ಪಂಚಾಯತಿಯ ಮುಂದೆ ನಡೆದ ಸಂಜೀವರೆಡ್ಡಿ ಮಾಲಿ ಪಾಟೀಲ ಕೊಲೆಗೆ ಸಂಬಂಧಿಸಿದಂತೆ ರಾಜುಗೌಡ ಜಿಲ್ಲಾ ಕೋರ್ಟಿಗೆ ಹಾಜರಾಗಿದ್ದರು. ಜೊತೆಯಲ್ಲಿ ಯಾವತ್ತು ನಾಲ್ಕೆಂಟು ಜನರನ್ನು ಇಟ್ಟುಕೊಂಡೇ ಓಡಾಡುತ್ತಿದ್ದ ರಾಜುಗೌಡನಿಗೆ ಸಾವು ಅದು ಹೇಗೆ ಎಲ್ಲರ ಕಣ್ಣುತಪ್ಪಿಸಿ ಬಂತೋ? ಎಂದು ಲೆಕ್ಕ ಹಾಕುವುದಕ್ಕೂ ಪುರುಸೊತ್ತು ಇಲ್ಲದಂತೆ ಸುಪಾರಿ ಕಿಲ್ಲರ್‌ಗಳ ಗುಂಡಿಗೆ ಬಲಿಯಾಗಿ ಆತ ನೆಲಕ್ಕುರುಳಿ ಹೋಗಿದ್ದ.


ಶೇಖರ್‌ಗೌಡ

ಹಾಗೆ ನೋಡಿದರೆ ಯಾಳಗಿಯ ಶೇಖರಗೌಡ ಹೊಸ್ಮನಿ ಹಾಗೂ ಮಾಲಿ ಪಾಟೀಲರಾದ ಶರಣಪ್ಪಗೌಡ ಗೌಡಪ್ಪಗೌಡ ಅವರಿಗೆ ಅಂಥ ವೈರತ್ವದ ಪ್ರಸಂಗಗಳು ಎದುರಾಗಿರಲಿಲ್ಲ, ಬದಲಾಗಿ ಶರಣಪ್ಪಗೌಡರಿಗೆ ಸೇರಬೇಕಾಗಿದ್ದ ಆಸ್ತಿಯನ್ನು ಶೇಖರಗೌಡ ತನ್ನ ಎಂದಿನ ಗಟ್ಟಿ ನಿಲುವಿನ ಮೂಲಕ ಒದಗಿಸಿ ಕೊಟ್ಟಿದ್ದ. ಪಾಟೀಲರೂ ಸಹ ಗೌರವದಿಂದ ಐದಾರು ಕೂರಿಗೆ ಜಮೀನನ್ನು ರಾಜುಗೌಡ ಹೊಸ್ಮನಿಯ ಹೆಸರಿನಲ್ಲಿ ರಜಿಸ್ಟ್ರಿ ಕೂಡ ಮಾಡಿಸಿಕೊಟ್ಟಿದ್ದರು. ಹೀಗೆ ಪರಸ್ಪರ ಸುಮಧುರವಾದ ಸಂಬಂಧಗಳನ್ನು ಇಟ್ಟುಕೊಂಡು ಬಂದಿದ್ದ ಊರಿನ ಎರಡು ಕುಟುಂಬಗಳ ನಡುವೆ ಬೆಂಕಿ ಹಚ್ಚಿದವರು ಯಾರು ಎಂಬ ಸಂಶೋಧನಾತ್ಮಕ ಜಾಡು ಹಿಡಿದು ನಡೆದುಹೋಗುತ್ತಿದ್ದರೆ ಹಲವಾರು ಸುಳಿಗಳು, ರಾಜಕೀಯದ ಹಳವಂಡಗಳು ಗೋಚರವಾಗುತ್ತವೆ. ತಮ್ಮ ರಾಜಕೀಯ ತೀಟೆಗಾಗಿ ಇಡೀ ಊರಿನ ಆರೋಗ್ಯವನ್ನು ಹದಗೆಡಿಸಿ ತಾವು ಮಾತ್ರ ಬೆಚ್ಚಗಿರುವ ಖೂಳ ರಾಜಕಾರಣಿಗಳ ಕರಾಳಮುಖಗಳು ಗೋಚರಗೊಳ್ಳುತ್ತವೆ.



ಎಂದಿನಿಂದಲೂ ಶೇಖರಗೌಡ ಹೊಸ್ಮನಿ ಯವರದ್ದು ರಾಜಕೀಯವಾಗಿ ಬಲಾಢ್ಯವಾದ ಗುಂಪು. ಶೇಖರಗೌಡ ಯಾವ ಕಡೆ ಬೆರಳು ಮಾಡಿ ತೋರಿಸುತ್ತಾನೋ ಆ ವ್ಯಕ್ತಿ ಖಂಡಿತ ಗೆದ್ದು ಬರುತ್ತಾನೆ ಎಂಬ ಪ್ರತೀತಿ ಸುತ್ತ ಹತ್ತಾರು ಹಳ್ಳಿಗಳಲ್ಲಿ ಇತ್ತು. ಈ ಸಭ್ಯ ವ್ಯಕ್ತಿಯನ್ನು ಅದು ಹೇಗೋ ಗುರುತು ಹಚ್ಚಿಕೊಂಡ, ಶಹಾಪುರ ಮತಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದ ದಿ. ಶಿವಶೇಖರಪ್ಪ ಪಾಟೀಲ ಶಿರವಾಳ ಸಹಜವಾಗಿಯೆ ಶೇಖರಗೌಡನ ಬೆನ್ನು ಬಿದ್ದಿದ್ದರು. ಯಾವಾಗ ಶಿವಶೇಖರಪ್ಪ ಶೇಖರಗೌಡ ಹೊಸ್ಮನಿಯವರ ಗುಂಪಿನೊಂದಿಗೆ ಗುರುತಿಸಿಕೊಂಡರೋ ಆಗ ಅವರ ಗೆಲುವು ನಿರಾಯಾಸವಾಗಿ ಆಗುತ್ತಿತ್ತು.

ಇದನ್ನು ಸಹಿಸಲು ಆಗದ ಪ್ರತಿಪಕ್ಷದ ದಿ.ಬಾಪುಗೌಡ ದರ್ಶನಾಪುರ ಹಲವಾರು ಸಲ ಶೇಖರಗೌಡ ಹೊಸ್ಮನಿಗೆ ಟಾಂಗು ಕೊಡಬೇಕೆಂದು ಪ್ರಯತ್ನಿಸಿ ಇಂಗು ತಿಂದ ಮಂಗನಂತೆ ತೆಪ್ಪಗಾಗಿ ಹೋದ. ಕೆಂಭಾವಿಯ ಪಟ್ಟಿಯೊಂದು ನಮ್ಮ ಕೈಸೆರೆಯಾದರೆ ರಾಜಕೀಯವಾಗಿ ನಮ್ಮನ್ನು ಹಿಡಿಯುವವರೇ ಇಲ್ಲ ಎಂಬ ಹಂಬಲ ದರ್ಶನಾಪುರ ಕುಟುಂಬಕ್ಕೆ ಇದ್ದದ್ದು ಸುಳ್ಳಲ್ಲ. ಹೇಗಾದರೂ ಸೈ ಅಲ್ಲೊಬ್ಬನನ್ನು ತಯಾರು ಮಾಡಿ ಆತ ಹೊಸ್ಮನಿ ಕುಟುಂಬಕ್ಕೆ ಸೆಡ್ಡು ಹೊಡೆದು ನಿಲ್ಲುವ ಆಸಾಮಿಯಾಗ ಬೇಕೆಂದು ಬಯಸಿದರು. ಇದರ ಫಲವಾಗಿ ಉದಯಿಸಿದ ವ್ಯಕ್ತಿಯೇ ಸಂಜೀವರೆಡ್ಡಿ ಶರಣಪ್ಪಗೌಡ ಮಾಲೀ ಪಾಟೀಲ. ಅದು ವರೆಗೆ ಬೆಂಗಳೂರಿನಲ್ಲಿ ತನ್ನ ಪಾಡಿಗೆ ತಾನು ಅದೆಂಥದೋ ಕೆಲಸ ಮಾಡಿಕೊಂಡಿದ್ದ ಸಂಜೀವರಡ್ಡಿಯನ್ನು ಪುಸಲಾಯಿಸಿ ಆತನನ್ನು ಯಾಳಗಿಗೆ ಕರೆತಂದರು.

ಸಂಜೀವರಡ್ಡಿ ಯಾಳಗಿಗೆ ಬಂದಾಗ ಶರಣಬಸಪ್ಪಗೌಡ ದರ್ಶನಾಪುರ ಆಗ ಕರ್ನಾಟಕ ಸರಕಾರದ ಸಚಿವರಾಗಿದ್ದರು. ಸಹಜವಾಗಿಯೆ ಸಂಜೀವರಡ್ಡಿ ದರ್ಶನಾಪುರ ಅವರ ಕೃಪಾಕಟಾಕ್ಷದಿಂದ ದಿಢೀರನೆ ರಾಜಕೀಯವಾಗಿ, ಆರ್ಥಿಕವಾಗಿ ಮೇಲೇಳತೊಡಗಿದ. ಸಂಜೀವರಡ್ಡಿ ಎಷ್ಟು ಬೇಗ ಬಲಾಢ್ಯನಾಗಿ ಬೆಳೆಯುತ್ತಾನೋ ಮುಂದೆ ಇದು ತಮ್ಮ ರಾಜಕೀಯ ಗಟ್ಟಿತನಕ್ಕೆ ನೆರವಾಗುತ್ತದೆ ಎಂದರಿತ ದರ್ಶನಾಪುರರು ಆತನಿಗೆ ಇನ್ನಿಲ್ಲದ ಸದರ ನೀಡಿದರು.

ಇದಕ್ಕೆಲ್ಲ ಅಖಾಡವೆಂಬಂತೆ ಗ್ರಾಮಪಂಚಾಯತಿ ಚುನಾವಣೆಗಳು ಬಂದುಬಿಟ್ಟವು. ಆಗ ಸೃಷ್ಟಿಯಾದ ರಂಗು-ರಂಗಿನ ಭೀಭತ್ಸ ವಾತಾವರಣ ಎದೆ ನಡುಗಿಸು ವಂತಿತ್ತು. ದುರಾದೃಷ್ಟವಶಾತ್ ಗ್ರಾ.ಪಂ.ಚುನಾವಣೆಗಳಲ್ಲಿ ಸಂಜೀವರಡ್ಡಿ ಗುಂಪು ಹೀನಾಯವಾಗಿ ನೆಲಕಚ್ಚಿತು. ಕೇವಲ ಎಂಟತ್ತು ಮತಗಳನ್ನು ಪಡೆಯುವ ಮೂಲಕ ಜನರಿಂದ ತಿರಸ್ಕರಿಸಲ್ಪಟ್ಟಿತು. ಆದರೆ ಜಟ್ಟಿ ಬಿದ್ದರೂ ಮೀಸೆ ಮಣ್ಣಾಗಿಲ್ಲವೆಂದು ಸಂಜೀವರಡ್ಡಿ ತೋಳೇರಿಸಿ ಕೊಂಡು ತೊಡೆ ತಟ್ಟತೊಡಗಿದ. ಇದೆಲ್ಲ ಹೊಸ್ಮನಿ ಕುಟುಂಬದವರಿಗೆ ಹೇಗೋ ಅವರ ಅನುಯಾಯಿಗಳಿಗೂ ಬೇಸರಕ್ಕಿಟ್ಟು ಕೊಂಡಿತು. ಗ್ರಾಮ ಪಂಚಾಯತಿಯ ವತಿಯಿಂದ ವಸತಿಹೀನರಿಗೆ, ದುರ್ಬಲರಿಗೆ, ಹಿಂದುಳಿದವರಿಗೆ ವಸತಿ ಒದಗಿಸುವ ಯೋಜನೆ ಬಂದದ್ದೇ ತಡ ಸಂಜೀವರಡ್ಡಿ ತನಗೆ ಅಧಿಕಾರವಿಲ್ಲದೆ ಇದ್ದರೂ ದರ್ಶನಾಪುರ(ಆಗ ವಿದ್ಯುತ್ ಖಾತೆ ಸಚಿವ)ರ ಬೆಂಬಲದಿಂದ ತಾನು ತಯಾರಿಸಿದ ಪಟ್ಟಿಯೇ ಕೊನೆಯಾಗ ಬೇಕೆಂದು ಹಠ ಹಿಡಿದ. ಗ್ರಾಮ ಪಂಚಾಯತಿಯ ಚೇರ್ಮನ್ ಆಗಿದ್ದ ರಾಜೂಗೌಡ ಯಾಳಗಿ ಸಹಜವಾಗಿಯೆ ತಾವು ಸಮೀಕ್ಷೆ ಮಾಡಿದ ಪಟ್ಟಿಯೇ ಅಂತಿಮವಾಗಬೇಕೆಂದು ವಾದ ಹೂಡಿದರು.

ಕೊನೆಗೆ ಒಂದು ದಿನ ಸುರಪುರ ತಾಲೂಕು ಪಂಚಾಯತಿಯ ಮುಂದೆ ಸಂಜೀವರಡ್ಡಿ ಬರ್ಬರವಾಗಿ ಕೊಲೆಯಾದ. ಸಹಜವಾಗಿಯೆ ರಾಜೂಗೌಡ, ಶರಣಗೌಡ ಮತ್ತು ಇವರ ತಂದೆ ಶೇಖರಗೌಡ ಹೊಸ್ಮನಿ ಹಾಗೂ ಇತರರು ಕೊಲೆಯ ಆಪಾದನೆಯ ಮೇರೆಗೆ ಜೈಲು ಸೇರಬೇಕಾಯಿತು. ಹೊಸ್ಮನಿಯ ಕುಟುಂಬ ಹಾಗೂ ಇತರರು ಜೈಲು ಸೇರಿದ್ದೇ ತಡ ಇತ್ತ ಸಂಜೀವರೆಡ್ಡಿ ಕುಟುಂಬದ ಅಮೀನರಡ್ಡಿಯ ಆಟಾಟೋಪ ಮೇರೆ ಮೀರಿತು. ಕಂಡಕಂಡವರ ಹೊಲದ ರಾಶಿಯನ್ನು ತಾನೇ ಮಾಡಿಕೊಂಡ. ಸರಕಾರದ ಹಲವಾರು ಕಾಮಗಾರಿಗಳನ್ನು ಮಾಡಿಸಿದ್ದೇನೆಂದು ಹೇಳಿ ಖೊಟ್ಟಿ ಬಿಲ್ ಎತ್ತಿಹಾಕಿದ. ಗ್ರಾಮ ಪಂಚಾಯತಿಗೆ ಬಂದ ಕೋಟ್ಯಂತರ ಗ್ರ್ಯಾಂಟ್‌ನ್ನು ಗಟಗಟನೆ ನುಂಗಿ ನೀರುಕುಡಿದ. ಇದಕ್ಕೆಲ್ಲ ಬಹಿರಂಗವಾಗಿಯೇ ಶರಣಬಸಪ್ಪಗೌಡ ದರ್ಶನಾಪುರರ ಕಾಕ ಬಸವರಾಜಪ್ಪಗೌಡನ ಬೆಂಬಲವಿತ್ತು ಎಂದು ಈಗಲೂ ಜನ ಆಡಿಕೊಳ್ಳುತ್ತಾರೆ.



ಅಮೀನರಡ್ಡಿ ಕುಟುಂಬದ ಎಲ್ಲಾ ಕಾನೂನುಬಾಹಿರ ಕೆಲಸಗಳನ್ನು ಸರಕಾರ ಮೂಕಪ್ರೇಕ್ಷಕನಂತೆ ನೋಡತೊಡಗಿತೇ ಹೊರತು, ಅವರ ಮೇಲೆ ಯಾವೊಂದೂ ಸಣ್ಣ ಕೇಸ್ ಕೂಡ ದಾಖಲು ಮಾಡಲಿಲ್ಲ, ಇದಕ್ಕೆ ಶಾಸಕ ಮಹಾಶಯರ ಕುಮ್ಮಕ್ಕೆ ಕಾರಣವೆಂದು ಎಲ್ಲರಿಗೂ ಗೊತ್ತಾಗಿ ಆಡಿಕೊಳ್ಳುವಂತಾಯಿತು. ಆಶ್ಚರ್ಯಕರ ಬೆಳವಣಿಗೆಯಲ್ಲಿ ಶರಣಬಸಪ್ಪಗೌಡ ದರ್ಶನಾಪುರ ತನ್ನ ರಾಜಕೀಯ ಸ್ವಾರ್ಥಕ್ಕಾಗಿ ಜನತಾದಳ ತೊರೆದು ಕಾಂಗ್ರೆಸ್ ಪಕ್ಷದ ಮಡಿಲಿಗೆ ಬಂದ. ಇದೆಲ್ಲ ಹಿಂದಿನ ನಿಷ್ಠಾವಂತ ಕಾಂಗ್ರೆಸ್ ಗುಂಪಿಗೆ ಇರಿಸುಮುರಿಸು ಉಂಟುಮಾಡಿತು.

ಮುಂದಿನ ಪರಿಸ್ಥಿತಿಯನ್ನು ಹೇಗೆ ಎದುರಿಸಬೇಕು ಎನ್ನುತ್ತಿರುವಂತೆ ಹದ್ನೂರಿನ ಲಿಂಗಣ್ಣಗೌಡ ದೇಸಾಯಿಯವರು ಚುನಾವಣೆಗೆ ಸ್ಪರ್ಧಿಸಲು ನಾಮಪತ್ರ ಸಲ್ಲಿಸಿದರು. ದೇಸಾಯಿಯವರು ಹಿಂದೊಮ್ಮೆ 1989 ರಲ್ಲಿ ಇದೇ ಮತಕ್ಷೇತ್ರದಿಂದ ಸ್ಪರ್ಧಿಸಿ 17,000 ಕ್ಕೂ ಹೆಚ್ಚು ಮತಗಳನ್ನು ಪಡೆದವರು. ಮೇಲಾಗಿ ತನ್ನ ಸವ್ಯಸಾಚಿ ನಡವಳಿಕೆಗಳ ಮೂಲಕ ಹೆಸರಾದವರು. ದ್ವೇಷ ಹಗೆತನಗಳನ್ನು ಎಂದೂ ತಮ್ಮ ಹತ್ತಿರ ಬಿಟ್ಟುಕೊಂಡವರಲ್ಲ. ತನ್ನ ಸನ್ನಡತೆಗಳ ಮೂಲಕ ಜನಮಾನಸವನ್ನು ಗೆದ್ದುಕೊಂಡಿರುವ ದೇಸಾಯಿಯವರು ಸ್ಪರ್ಧಿಸಿದರೆ ತನ್ನ ಸೋಲು ಗ್ಯಾರಂಟಿ ಎಂದು ಅರಿತ ದರ್ಶನಾಪುರ ರಾತ್ರೋರಾತ್ರಿ ದೇಸಾಯಿಯವರ ಮನೆಗೆ ಹೋಗಿ ಅಂಗಲಾಚತೊಡಗಿದ. ಆದರೆ ದರ್ಶನಾಪುರರ ಹಿತ್ತಲ ಬಾಗಿಲ ರಾಜಕೀಯ ಕಂಡಿದ್ದ ದೇಸಾಯಿ ದರ್ಶನಾಪುರ ಮಾತಿಗೆ ಸೊಪ್ಪು ಹಾಕಲಿಲ್ಲ.


ಅಮೀನರೆಡ್ಡಿ

ಕೊನೆಯ ಪ್ರಯತ್ನ ಎಂಬಂತೆ ದರ್ಶನಾಪುರ ತಮ್ಮ ಅನುಗಾಲದ ವಿರೋಧಿ ಯಾಳಗಿಯ ಶೇಖರಗೌಡರನ್ನು ಭೇಟಿಯಾಗಿ "ಸಂಜೀವರೆಡ್ಡಿ ಕೊಲೆಯ ಸಂದರ್ಭದಲ್ಲಿ ಹಾಕಿದ್ದ ಎಲ್ಲಾ ಕೇಸುಗಳನ್ನು ಹಂತಹಂತವಾಗಿ ತೆಗೆಯುತ್ತೇನೆ, ನೀವು ಅವರ ಕುಟುಂಬದ ಮೇಲೆ ಹಾಕಿದ್ದ ಎಲ್ಲಾ ಕೇ... ಗಳನ್ನು ವಾಪಾಸ್ ಪಡೆಯಿರಿ, ನಿಮ್ಮ ಎರಡೂ ಕುಟುಂಬ... ನಡುವಿನ ಜಗಳವನ್ನು ಬಗೆಹರಿಸುತ್ತೇನೆ, ನೀವೆಲ್ಲರೂ ನ... ಬೆಂಬಲಿಸಿ ನನ್ನನ್ನೇ ಗೆಲ್ಲಿಸಿ" ಎಂದು ಕೇಳಿಕೊಂಡ. ಜೊ... "ಹದ್ನೂರು ದೇಸಾಯಿಯವರು ನಿಮ್ಮ ಮಾತು ಕೇಳು... ಅವರನ್ನು ಇದೊಂದು ಬಾರಿ ಚುನಾವಣೆಯ ಕಣದಿ... ಹಿಂದೆ ಸರಿಯುವಂತೆ ನೀವು ಹೇಳಿದರೆ ನಿಮ್ಮ ಮ... ಅವರು ಕೇಳುತ್ತಾರೆ" ಎಂದು ಪುರಿದುಂಬಿಸಿದ.

ದರ್ಶನಾಪುರರ ಈ ಮಾತನ್ನು ಕೂಲಂಕಷ... ಗಮನಿಸಿದ ಹೊಸ್ಮನಿ ಕುಟುಂಬದ ಸದಸ್ಯರು ಪೊಲೀ... ಠಾಣೆ, ಜೈಲು, ಕೋರ್ಟುಗಳ ಕೇಸುಗಳಿಂದ ಜರ್ಜರಿತ... ದ್ದರಿಂದ ಅನಿವಾರ್ಯವಾಗಿ ಶರಣಬಸಪ್ಪಗೌಡನ ಮಾತ... ನೂರಕ್ಕೆ ನೂರು ನಂಬಿದರು. ಚುನಾವಣೆಯ ಕಣದ... ದೇಸಾಯಿಯವರನ್ನು ಹಿಂದೆ ಸರಿಸಿದರು. ಅಂದ... ಚುನಾವಣೆಯಲ್ಲಿ ಶರಣಬಸಪ್ಪಗೌಡ ದರ್ಶನಾಪುರ... ಬಹುಮತದಿಂದ ಗೆಲ್ಲುವಂತೆ ಪ್ರಾಮಾಣಿಕ ಪ್ರ... ಮಾಡಿದರು. ಹಾಗಾಗಿಯೇ ದರ್ಶನಾಪುರ ಹೆ... ಬಹುಮತದಿಂದ ಗೆಲುವನ್ನು ಸಾಧಿಸಿದ.

ಆದರೆ ಆ ಕಡೆ ಸಂಜೀವರೆಡ್ಡಿ ಕುಟುಂಬ ಹಗೆ-ದ್ವೇ... ಮಾತ್ರ ದಳ್ಳುರಿಯಂತೆ ಒಳಗೊಳಗೆ ಉರಿಯುತ್ತಿದ್ದ... ಮಾತ್ರ ಯಾರ ಗಮನಕ್ಕೂ ಬರದೇಹೋಯ್ತು. ಸಂಜೀವ... ಕೊಲೆಯ ಕೇಸಿಗೆ ಸಂಬಂಧಿಸಿದಂತೆ ಸಾಕ್ಷಿ ನುಡಿಯಬೇ... ಸಂಜೀವರೆಡ್ಡಿ ಕುಟುಂಬದ ಸದಸ್ಯರು ಫೆಬ್ರುವರಿ 5 ರ... ಕೋರ್ಟಿಗೆ ಹಾಜರಾಗದೇ ಇರುವುದರ ಹಿಂದೆ ನ... ಕಾಂಪ್ರೋಮೈಜೇ ಕಾರಣ ಎಂದು ಬಗೆಯಲಾಯಿ... ಹೀಗಾಗಿ ಜೀವದ ಭಯ ಇಲ್ಲದೇ ಎಲ್ಲೆಡೆ ತಿರುಗಾಡತೊ... ಗಿದರು. ಈ ಮೊದಲು ತಮ್ಮ ಜೊತೆಗೆ ತೆಗೆದುಕೊಂ... ಹೋಗುತ್ತಿದ್ದ ಮಾರಕಾಸ್ತ್ರಗಳು, ರಿವಾಲ್ವರ್‌ಗಳನ್ನು ಮೂ... ಎಸೆದುಬಿಟ್ಟಿದ್ದರು.

ಇದನ್ನೆಲ್ಲ ಸೂಕ್ಷ್ಮವಾಗಿ ಗಮನಿಸು... ಸಂಜೀವರೆಡ್ಡಿ ಕುಟುಂಬದ ಸದಸ... ಗಳಾದ ಅಮೀನರಡ್ಡಿ, ಶಶಿಧರ, ಶ... ಪ್ಪಗೌಡ, ಶಂಕ್ರಪ್ಪಗೌಡ, ಮಲ್ಲಣ್ಣಗೌ... ಗೌಡಪ್ಪಗೌಡ, ಶ್ರೀನಿವಾಸರೆ... ಪ್ರಕಾಶರೆಡ್ಡಿ ಹೀಗೆ ಒಂಭತ್ತು ಜನರ ಹ... ಪಡೆಯ ಗುಂಡಿಗೆ ಶರಣಗೌಡ ಶೇ... ಗೌಡ ಪಾಟೀಲ ಬರ್ಬರವಾಗಿ ... ಗಿಯ ಬೈಪಾಸ್ ರಸ್ತೆಯಲ್ಲಿ ಕೊಲೆಯ... ಬೇಕಾಯಿತು.

ಅದೆಲ್ಲ ಸಾಲದೆಂಬಂತೆ ಈಗ ಮತ್ತೆ ರಾಜುಗೌ... ಶೇಖರಗೌಡ ಯಾಳಗಿಯವರನ್ನು ಹಾಡುಹಗಲೇ ಸುಪಾ... ಕಿಲ್ಲರ್‌ಗಳು ಜಿಲ್ಲಾಕೇಂದ್ರವಾದ ಯಾದಗಿರಿಯಲ್ಲಿ, ಅದ... ಕೋರ್ಟು ಮುಂದುಗಡೆಯೇ ಹೊಡೆದು ಹೋಗಿದ್ದಾ... ಈ ಕ್ರೌರ್ಯಕ್ಕೆ ಕೊನೆ ಎಂಬುದು ಇಲ್ಲವೆ?

• ವರದಿಗಾ...

## ಹೇತ್ಲಾಂಡಿ ಪೊಲೀಸರೂ ಸುಪಾರಿ ಕಿಲ್ಲರ್‌ಗಳೂ



ಇಷ್ಟು ದಿನ ಸುಪಾರಿ ಕಿಲ್ಲರ್‌ಗಳು ಗುಲಬರ್ಗಾದ ಗಡಿ ತಾಲೂಕುಗಳಾದ ಅಫಜಲಪುರದ ಚೌಂಡ್ರಿಯವರೆಗೆ ಮಾತ್ರ ಬಂದಿದ್ದರು. ಅಫಜಲಪುರ, ಸೊನ್ನ ದೇವಣಗಾಂವ ಇನ್ನಿತರ ಸ್ಥಳಗಳಲ್ಲಿ ಈ ಹಂತಕರ ಒಂದು ಪಡೆಯೇ ಇತ್ತು, ಇದನ್ನು ಭೀಮಾತೀರದ ಹಂತಕರ ದಂಡು ಎಂದೇ ಜನ ಮತ್ತು ಮಾಧ್ಯಮಗಳು ಕರೆಯುತ್ತಿದ್ದವು. ಇತ್ತೀಚೆಗೆ ಈ ದಂಡು ಅಷ್ಟಿಷ್ಟು ನಶಿಸಿ, ದೌರ್ಜನ್ಯ, ಕ್ರೌರ್ಯ, ಕೊಲೆಗಳು ಸ್ವಲ್ಪಮಟ್ಟಿಗೆ ಕಮ್ಮಿಯಾದವು ಎಂದು ಜನ ನೆಮ್ಮದಿಯ ನಿಟ್ಟುಸಿರು ಬಿಡುತ್ತಿರುವಂತೆ ಅದೇ ಕೊಲೆಗಡುಕರು ಮತ್ತೆ ದುಡ್ಡಿನ ಆಸೆಗಾಗಿ ಬಿಜಾಪುರ, ಧಾರವಾಡ, ಹುಬ್ಬಳ್ಳಿಗಳಿಂದ ಈಗ ಯಾದಗಿರಿ ಜಿಲ್ಲೆಯ ಮೂಲೆಯ ಹಳ್ಳಿ ಯಾಳಗಿಯನ್ನು ತಲುಪಿದ್ದಾರೆ. ಈ ಸಂಗತಿ ಇಲ್ಲಿನ ಜನತೆಯನ್ನು ತಲ್ಲಣಗೊಳಿಸಿಬಿಟ್ಟಿದೆ.

ಕಳೆದ ಮೇ 16 ರಂದು 21 ಜನರ ಒಂದು ಹಂತಕ ಪಡೆ ಯಾಳಗಿಯನ್ನು ಪ್ರವೇಶಿಸಿ ಅಲ್ಲಿ ರಕ್ತದೋಕುಳಿ ಆಡಬೇಕೆಂದು ಬಂದಾಗ ಸಮಯಪ್ರಜ್ಞೆ ಮೆರೆದ ಅಲ್ಲಿನ ಪಿ.ಎಸ್.ಐ. ಎಲ್.ಸಿ.ಕೋಲಕರ್ ಅವರೆಲ್ಲರನ್ನು ಬಂಧಿಸಿ ಕಲಂ.307 ಕೇಸ್ ಹಚ್ಚಿ ಜೈಲಿಗೆ ಕಳಿಸಿದ್ದರು. ಆದರೆ ಈ ಸಂದರ್ಭದಲ್ಲಿ ಅಡ್ಡ ಬಂದ ಶಾಸಕ ಶರಣಬಸ್ಸಪ್ಪಗೌಡ ದರ್ಶನಾಪುರ ಅವರ ಮಾತಿಗೂ ಸೊಪ್ಪು ಹಾಕದ ಪಿ.ಎಸ್.ಐ. ತಮ್ಮ ಕರ್ತವ್ಯಪ್ರಜ್ಞೆ ಮೆರೆದಿದ್ದಾರೆ. ಇನ್ನೂ ಭಯಾನಕ ಸಂಗತಿಯೆಂದರೆ 21 ಮಂದಿ ಹಂತಕ ಪಡೆಯಲ್ಲಿ ಈಗಾಗಲೇ ಬಿಜಾಪುರ ಎಪಿಎಂಸಿ ಹಾಗೂ ಧಾರವಾಡದ ಟೌನ್ ಪೊಲೀಸ್ ಸ್ಟೇಷನ್ ದಾಬರಿ ಕೇಸ್‌ಗಳಲ್ಲಿ ಸಿಲುಕಿರುವವರೇ ಇದ್ದಾರೆ.

ಹೀಗೆ ಸಂಪೂರ್ಣ ಸಮಾಜದ ವಾತಾವರಣ ಭಯಭೀತವಾಗಿದ್ದರೂ ಇಲ್ಲಿನ ಜಿಲ್ಲಾ ಪೊಲೀಸ್ ವರಿಷ್ಠೆಯಾಗಿರುವ ಡಿ.ರೂಪಾ ಮಾತ್ರ ಅದ್ಯಾವ್ಯಾವೋ ಟ್ರೇನಿಂಗ್ ಅಂತ ಊರೂರು ಅಲೆಯುತ್ತಿರುತ್ತಾರೆ. ಗುಲಬರ್ಗಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿರುವ ಹೇತ್ಲಾಂಡಿ ಪದ್ಮನಯ ಯಾದಗಿರಿ ಜಿಲ್ಲೆಯ ಪೊಲೀಸ್ ಇನ್‌ಚಾರ್ಜ್ ತೆಗೆದುಕೊಂಡರೂ ಅಷ್ಟೇ, ಬಿಟ್ಟರೂ ಅಷ್ಟೇ ಎಂಬಂತಾಗಿದೆ.

ಆದ್ದರಿಂದ ಸದರಿ ಪೊಲೀಸರಿಂದ ಆಗದೆ ಇರುವ ಕೆಲಸವನ್ನು ಸರಕಾರ ಸಿಐಡಿಯಿಂದ ಮಾಡಿಸಿ, ಸರಿಯಾದ ತನಿಖೆ ನಡೆಸಿ, ಸದ್ಯ ಜೈಲಿನಲ್ಲಿ ಬಂಧಿತನಾಗಿರುವ ಅಮೀನ ರೆಡ್ಡಿಯ ಫೋನ್‌ಗಳನ್ನು ಟ್ಯಾಪ್ ಮಾಡಿದರೆ ಪ್ರಸ್ತುತ ಕೊಲೆ ಪ್ರಕರಣದ ಸುಪಾರಿ ಕಿಲ್ಲರ್‌ಗಳೆಂಬ ಮುಳ್ಳು ಕಂಟಿಯನ್ನು ಕಿತ್ತೊಗೆಯಬೇಕಿದೆ.

# ಪಿಎಫ್ಐ ಕಾರ್ಯಕರ್ತರ ಮೇಲೆ ಖೊಟ್ಟಿಕೇಸು

ಗೋರಿಪಾಳ್ಯದ ಪಾತಕಿಗಳ ತಾಕತ್ತು ಮತ್ತು ...ದ ಪರಿಚಯವುಳ್ಳ ಯಾರಿಗಾದರೂ ಮೊನ್ನೆ ... ಹಿಂಸೆ ಅಚ್ಚರಿ ಹುಟ್ಟಿಸುವುದಿಲ್ಲ.

...ರಂಜಾನ್ ಪ್ರಯುಕ್ತ ಧರ್ಮಾರ್ಥ ಚಂದಾ ...ಹಿಸುತ್ತಿದ್ದ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (...ಫ್ಐ) ಸಂಘಟನೆಯ ಕಾರ್ಯಕರ್ತರ ಮೇಲೆ ರೌಡಿ ...ಫ್ ಗ್ಯಾಂಗ್ ನಡುರಸ್ತೆಯಲ್ಲೇ ನಡೆಸಿದ ದಾಳಿ, ...ರು, ಮಚ್ಚು ಹಿಡಿದು ಸಿಕ್ಕಸಿಕ್ಕವರನ್ನೆಲ್ಲಾ ಕತ್ತರಿಸುತ್ತಿದ್ದ ... ಬಡ ಮುಸ್ಲಿಮರ ಚಿಂದಿಯೆದ್ದ ಮನೆ,





...ತಿಯಾದ ಆಟೋ, ವಾಹನಗಳ ರಾಶಿ ಮತ್ತು ...ಗೂ ಆಸ್ಪತ್ರೆಯಲ್ಲಿ ಜೀವಚ್ಛವವಾಗಿ ನರಳುತ್ತಿರುವ ...ಐ ನಾಯಕರ ದುರ್ಗತಿಯನ್ನು ನೋಡುತ್ತಿದ್ದರೆ; ...ಪಾಳ್ಯದ ದೌರ್ಭಾಗ್ಯದ ಸಂಕ್ಷಿಪ್ತ ಅಂದಾಜಾದರೂ ...ಗುತ್ತದೆ.

...ದ್ಯ ಬೆಂಗಳೂರಿನ ವಿವಿಧ ಆಸ್ಪತ್ರೆಗಳಲ್ಲಿ ಅರೆಜೀವ ...ತು ನರಳುತ್ತಿರುವ ಪಿಎಫ್ಐ ಕಾರ್ಯಕರ್ತರ ...ಯೇ ಹದಿನೈದನ್ನು ದಾಟಿದೆ.

...ದು ಗೋರಿಪಾಳ್ಯದ ರಕ್ಕಸ ಆರಿಫ್ ಪಾಷಾ ... ಕೆಎಫ್‌ಡಿ, ಪಿಎಫ್ಐ ಸಂಘಟನೆಗಳ ನಡುವಿನ ...ಯ ವೈಷಮ್ಯ.

...ಂದಾದರೆ ಆರಿಫ್ ಮತ್ತು ಅಲ್ತಾಫ್ ತಂಡಗಳ ...ರಸ್ತೆ ಕಾಳಗ ನಡೆಯುತ್ತಿತ್ತು, ಈಗದು ಬೇರೆಯದೇ ...ತಾಳಿದೆ. ಕೆಎಫ್‌ಡಿ ಅಂದರೆ ಕರ್ನಾಟಕ ಫೋರಮ್ ... ಡಿಗ್ನಿಟಿ, ಪಿಎಫ್ಐ ಅರ್ಥಾತ್ ಪಾಪ್ಯುಲರ್ ... ಆಫ್ ಇಂಡಿಯಾ ಮತ್ತು ಇವೆಲ್ಲವುಗಳ ರಾಜಕೀಯ ವೇದಿಕೆಯಾದ ಎಸ್‌ಡಿಪಿಐ ಅಂದರೆ ಸೋಷಿಯಲ್ ಡೆಮಾಕ್ರಾಟಿಕ್ ಪಾರ್ಟಿ ಆಫ್ ಇಂಡಿಯಾ ...ಟನೆಯೇ ಸದ್ಯ ಗೋರಿಪಾಳ್ಯದ ಆರಿಫ್ ಗ್ಯಾಂಗಿನ ...ಥ ಸೆಣಸಾಟಕ್ಕಿಳಿದಿರುವುದು.

...ಳೆದ ಎರಡು ವರ್ಷಗಳ ಹಿಂದಿನಿಂದ ಬೆಂಗಳೂರಿನ ...ಂ ಏರಿಯಾಗಳಲ್ಲಿ ಕಾರ್ಯಾಚರಣೆಗಿಳಿದದ್ದು ...ಐ. ಪಕ್ಕಾ ಇಸ್ಲಾಮಿಕ್ ತತ್ವಗಳ ಆಧಾರದ ಮೇಲೆ ...ಟನೆ ಆರಂಭಿಸಿದ ಪಿಎಫ್ಐನ ಸಿದ್ಧಾಂತ ಕಂಡೇ ...ಂ ಯುವಕರು ಮಾರು ಹೋದರು. ಮುಸ್ಲಿಂ ...ರಣಿಗಳು ಅಂದರೇನೆ ರೌಡಿಗಳು ಎಂಬ ಅಸಹ್ಯದ ...ಯ ವಿರುದ್ಧ ಪಿಎಫ್ಐ ಕಾರ್ಯಾಚರಣೆಗಿಳಿದಿತ್ತು, ...ಮಸೀದಿಗಳು ಮತ್ತು ಕುರಾನ್‌ನ ನೆರಳಲ್ಲೇ ಬಡ ...ಮರ ನೆರವಿಗೆ ನಿಂತ ಪಿಎಫ್ಐ ಕಾಲಕ್ರಮೇಣ ...ಷ್ಟು ಜನಪ್ರಿಯವಾಯಿತೆಂದರೆ; ಕಳೆದ ಪಾಲಿಕೆ ...ವಣೆಯಲ್ಲಿ ವಿವಿಧ ಪಕ್ಷಗಳಿಂದ ಸ್ಪರ್ಧಿಸಿದ್ದ ಮುಸ್ಲಿಂ ...ರ್ಥಿಗಳೇ ಮುಟ್ಟಿ ನೋಡಿಕೊಳ್ಳುವಂಥ ಪೆಟ್ಟು ಕೊಟ್ಟಿತ್ತು. ಬೆಂಗಳೂರಿನ ಮುಸ್ಲಿಂ ಏರಿಯಾಗಳ ಹನ್ನೊಂದು ವಾರ್ಡ್‌ಗಳ ಪೈಕಿ ಪಿಎಫ್ಐನ ಅಭ್ಯರ್ಥಿಗಳಿಗೆ ಅಚ್ಚರಿಯೆನಿಸುವಂತೆ ಓಟುಗಳು ಬಿದ್ದಿದ್ದವು. ರಾಯಪುರಂನಲ್ಲಿ ಪಿಎಫ್ಐ ಅಭ್ಯರ್ಥಿಯಾಗಿ ನಿಂತಿದ್ದ ತಿರುಮಲೇಶ್‌ಗೆ 1800 ಮತಗಳು ಬಿದ್ದರೆ ಡಿಜೆಹಳ್ಳಿಯಲ್ಲಿ ಪಿಎಫ್ಐ ಅಭ್ಯರ್ಥಿಯಾಗಿದ್ದ ಹೇಮಲತಾ 3500ರಷ್ಟು ಮತಗಳಿಸಿ ಕೂದಲೆಳೆಯಲ್ಲಿ ಸೋತಿದ್ದರು. ಪಿಎಫ್ಐ ಮುಸ್ಲಿಂ ಸಂಘಟನೆಯೆಂದು ಯಾರೆಷ್ಟೇ ಬೊಬ್ಬೆಯಿಟ್ಟರೂ ಅದು ಹಿಂದೂ ಅಭ್ಯರ್ಥಿಗಳನ್ನು ನಿಲ್ಲಿಸಿ ತನ್ನ ಧರ್ಮ ಸಹಿಷ್ಣುತೆಯನ್ನು ಸಾಬೀತುಮಾಡಿತ್ತು. ಯಲಚೇನಹಳ್ಳಿ, ನಾಗವಾರ, ಥಣಿಸಂದ್ರ, ಮನೋರಾಯನಪಾಳ್ಯದ ಅಲ್ತಾಫ್ ಪತ್ನಿ ಸೀಮಾಖಾನಮ್ ವಿರುದ್ಧವೂ ಅಭ್ಯರ್ಥಿ ಹಾಕಿದ್ದ ಪಿಎಫ್ಐಗೆ ಅಲ್ತಾಫ್ ವಿರುದ್ಧ 2200 ಮತಗಳು ಬಂದಿದ್ದವು.

ಇದರರ್ಥ ಪಿಎಫ್ಐ ಮತ್ತ ಎಸ್‌ಡಿಪಿಐ ಗೋರಿಪಾಳ್ಯದ ಯಾರೇ ರೌಡಿಯ ಪರವಾಗಲಿ ಪಕ್ಷದ ಪರವಾಗಲಿ ಇರಲಿಲ್ಲ. ಹಾಗೇ ಗೋರಿಪಾಳ್ಯದ ಪಾದರಾಯನಪುರ ವಾರ್ಡ್‌ಗೆ ಪಿಎಫ್ಐನ ಅಭ್ಯರ್ಥಿಯಾಗಿದ್ದದ್ದು ಪ್ರೊಫೆಸರ್ ನಾಜನಿ ಬೇಗಮ್!

ಆ ಕಾಲದಿಂದಲೂ ಪಾದರಾಯನಪುರ ವಾರ್ಡ್‌ಗೆ ಕೌನ್ಸಿಲರ್ ಆಗಿ ತನ್ನದೇ ರೌಡಿ ಪಡೆಯನ್ನು ಸಾಕಿ ಬೆಳೆಸಿದ್ದ ಆರಿಫ್ ಪಾಷಾ ಈ ಬಾರಿ ಜೆಡಿಎಸ್ ಅಭ್ಯರ್ಥಿಯಾಗಿ ನಿಲ್ಲಿಸಿದ್ದು ತನ್ನ ಪತ್ನಿ ಜರೀನಾಳನ್ನು. ಹಿಂದಿನ ಬಾರಿ ಈಕೆಯೇ ಕೌನ್ಸಿಲರ್ ಆಗಿದ್ದರಿಂದ ಈ ಬಾರಿಯೂ ಪತ್ನಿಯನ್ನು ಕೌನ್ಸಿಲರ್ ಮಾಡಿ ತಾನು ಗೋರಿಪಾಳ್ಯವನ್ನಾಳುವುದು ಆರಿಫ್‌ನ ಉದ್ದೇಶವಾಗಿತ್ತು. ಆರಿಫ್‌ನ ಮಗ ಇಮ್ರಾನ್ ಬೆಂಗಳೂರಿನ ನಟೋರಿಯಸ್ ರೌಡಿ. ಆರಿಫ್ ಅಣ್ಣ ಫಾರೂಕ್ ಪಾಷ, ಮಕ್ಕಳಾದ ಮೋಹಸಿನ್, ಸುಲ್ತಾನ್, ಮೌಸೀನ್, ಇರ್ಫಾನ್ ಇಮ್ರಾನ್ ಮುಂತಾದವರೆಲ್ಲ ಕಿರಾತಕರೇ. ಮೊಬೈಲ್ ಕಳ್ಳತನ, ಬ್ಯಾಂಡ್ ಹುಡುಗಿಯರ ದಂಧೆ, ಸ್ಕ್ರಾಪ್ ಕಳ್ಳತನ, ಕಾರು ಕಳುವು, ಗಂಧದ ಸ್ಮಗ್ಲಿಂಗ್- ಹೀಗೆ ಪಾಪಕೂಪದ ನಾನಾಮೂಲಗಳಿಂದ ದುಡ್ಡು ದೋಚಿಕೊಂಡೇ ರೌಡಿ ಪಟ್ಟಕ್ಕೆ ಬಂದ ಮಗ ಇಮ್ರಾನ್ ಮತ್ತು ಆತನ ರೌಡಿಪಡೆ ಯನ್ನು ಬಳಸಿ ತಾನು ಗೋರಿಪಾಳ್ಯವನ್ನಾಳುವುದು ಆರಿಫ್‌ನ ಹುನ್ನಾರವಾಗಿತ್ತು.


ಇಮ್ರಾನ್

ಈ ಕಾರಣಕ್ಕೇ ಅಲ್ತಾಫ್‌ನ ಇಬ್ಬರು ತಮ್ಮಂದಿರನ್ನು ಆರಿಫ್ ಗ್ಯಾಂಗ್ ಕೊಂದು ಹಾಕಿತ್ತು, ಅತ್ತ ಅಲ್ತಾಫ್ ಕಾನೂನುರಿತ್ಯ ಆರಿಫ್ ಗ್ಯಾಂಗನ್ನು ಜೈಲುಗಟ್ಟಲು ಏನೇನು ಬೇಕೋ ಎಲ್ಲವನ್ನೂ ಮಾಡುತ್ತಿದ್ದರೆ-ಇತ್ತ ಪಿಎಫ್ಐ ಕಾರ್ಯಕರ್ತರು ಸದ್ದಿಲ್ಲದೇ ಆರಿಫ್ ವಾರ್ಡಿನಲ್ಲಿ ಕಾರ್ಯಾಚರಣೆಗಿಳಿದಿದ್ದರು. ಇದರ ನೇತೃತ್ವ ವಹಿಸಿದ್ದು ಎಸ್‌ಡಿಪಿಐನ ಬೆಂಗಳೂರು ಅಧ್ಯಕ್ಷ ಮೌಲಿ ಇರ್ಫಾನ್. ಜೊತೆಗೆ ಪಿಎಫ್ಐನ ಬೆಂಗಳೂರು ಅಧ್ಯಕ್ಷ ತಾಹಿರ್ ಕೂಡ ಮುಸ್ಲಿಂ ಏರಿಯಾಗಳ ಯುವಕರನ್ನು ಸಂಘಟಿಸತೊಡಗಿದರು.

ಕಳೆದ ಪಾಲಿಕೆ ಚುನಾವಣೆಯಲ್ಲಿ ಆರಿಫ್ ಪತ್ನಿ ಜರೀನಾ ವಿರುದ್ಧ ಪಿಎಫ್ಐ ಪ್ರೊಫೆಸರ್ ನಾಜನಿ ಬೇಗಮ್‌ರನ್ನು ಕಣಕ್ಕಿಳಿಸಿದ್ದೇ ತಡ ಗೋರಿಪಾಳ್ಯದ ಮುಸ್ಲಿಮರ ನಿರ್ಧಾರವೇ ಬೇರೆಯಾಗಿತ್ತು, ಬೇರೆಬೇರೆ ವಾರ್ಡುಗಳಲ್ಲಿ ಬಹುತೇಕ ಅಭ್ಯರ್ಥಿಗಳು ಕೋಟಿಗಟ್ಟಲೇ ಸುರಿದರೆ ಪ್ರೊ. ನಾಜನಿ ಬೇಗಮ್ ಮಾತ್ರ ನಯಾಪೈಸೆ ಖರ್ಚು ಮಾಡಲಿಲ್ಲ. ಮಸೀದಿಗಳ ಮುಂದೆ ಪ್ರತಿ ಶುಕ್ರವಾರ ಕಾಣಿಕೆ ಡಬ್ಬಿ ಹಿಡಿದು ನಿಲ್ಲುತ್ತಿದ್ದ ಪಿಎಫ್ಐ ಕಾರ್ಯಕರ್ತರಿಗೆ ಜನರೇ ದುಡ್ಡು ಕೊಟ್ಟರು. ಬಹುಶಃ ಯಾರೂ ನಂಬಲಿಕ್ಕಿಲ್ಲ.

ಪಾಲಿಕೆ ಎಲೆಕ್ಷನ್ ಮುಗಿದು ನಾಜನಿ ಬೇಗಮ್ ಆರಿಫ್ ಪತ್ನಿಗಿಂತಲೂ 2000 ದಷ್ಟು ಮತಗಳ ಅಂತರದಿಂದ ಗೆದ್ದದ್ದು ಕೇವಲ 60 ಸಾವಿರ ರೂಪಾಯಿಗಳ ಖರ್ಚಿನಲ್ಲಿ!

ತನ್ನ ಪತ್ನಿಯನ್ನು ಗೆಲ್ಲಿಸಲು ಕೋಟಿಗಟ್ಟಲೇ ಸುರಿದಿದ್ದ ಆರಿಫ್ ಎಲ್ಲಿ ಕೇವಲ 60 ಸಾವಿರ ರೂಪಾಯಿಯಲ್ಲಿ ಕೌನ್ಸಿಲರ್ ಆದ ನಾಜನಿ ಬೇಗಮ್ ಎಲ್ಲಿ?

ನಾಜನಿ ಬೇಗಮ್ ಗೆಲುವಿನೊಂದಿಗೆ ಗೋರಿಪಾಳ್ಯದ ಆರಿಫ್ ಸಾಮ್ರಾಜ್ಯ ಪತನಗೊಂಡಿತ್ತು. ಸೋತು ಹುಚ್ಚನಂತಾಗಿದ್ದ ಆರಿಫ್ ಪಿಎಫ್ಐ ವಿರುದ್ಧ ಚುನಾವಣಾ ಫಲಿತಾಂಶದ ಮಾರನೇ ದಿನವೇ ದಾಳಿ ನಡೆಸಿದ. ತನ್ನ ಡ್ರೈವರ್ ತೆನಾಲಿ ಎಂಬಾತನನ್ನು ತನ್ನದೇ ಹುಡುಗರನ್ನು ಬಿಟ್ಟು ಕೊಲ್ಲಿಸಿ ಅದನ್ನು ಪಿಎಫ್ಐ ಕಾರ್ಯಕರ್ತರ ತಲೆಗೆ ಕಟ್ಟಿದ. ಜೆಜೆನಗರದ ಇನ್ಸ್‌ಪೆಕ್ಟರ್ ಕೋದಂಡರಿಗೆ ಶಾಸಕ ಜಮೀರ್ ಸಾಹೇಬರ ಭಯ. ಸಣ್ಣ ತನಿಖೆ ಕೂಡ ಮಾಡದೇ ಆರಿಫ್ ಕೊಟ್ಟ ದೂರಿನ ಮೇಲೆ ಪಿಎಫ್ಐ ಕಾರ್ಯಕರ್ತ ರನ್ನು ಜೈಲಿಗೆ ದಬ್ಬಿಬಿಟ್ಟರು.

ಹಾಗಂತ ಪಿಎಫ್ಐ ಜಗ್ಗಬೇಕಲ್ಲ. ಅದಕ್ಕೆ ಸಿದ್ಧಾಂತ ಮುಖ್ಯ. ರೌಡಿ ಆರಿಫ್ ವಿರುದ್ಧ ನಾಜನಿ ಬೇಗಮ್‌ರನ್ನು ಗೆಲ್ಲಿಸಿದ್ದು ಅದರ ಮೊದಲ ಹೆಜ್ಜೆಯಾಗಿತ್ತಷ್ಟೇ. ಗೋರಿಪಾಳ್ಯದುದ್ದಕ್ಕೂ ಕಾರ್ಯಕರ್ತರ ತರಬೇತಿ ಶಿಬಿರಗಳಾದವು. ಮೊನ್ನೆ ರಮಜಾನ್ ಉಪವಾಸ ಶುರುವಾಗುತ್ತಿದ್ದಂತೆ ಧರ್ಮಾರ್ಥ ಚಂದಾ ಸಂಗ್ರಹಿಸುವ ಕಾರ್ಯಕ್ರಮವನ್ನು ಪಿಎಫ್ಐ ಹಮ್ಮಿಕೊಂಡಿದೆ. ಹೀಗೆ ಅನುಕೂಲಸ್ಥ ಮುಸ್ಲಿಮರಿಂದ ಜಕಾತ್ ಸಂಗ್ರಹಿಸಿ ಅದನ್ನು ಬಡ ಮುಸ್ಲಿಮರ ನೆರವಿಗೆ ಬಳಸುವುದು ಪಿಎಫ್ಐ ಕಾರ್ಯಕರ್ತರ ಉದ್ದೇಶವಾಗಿತ್ತು. ಆಗಸ್ಟ್ 27 ರ ಶುಕ್ರವಾರದ ಪ್ರಾರ್ಥನೆ ಮುಗಿಸಿ ತಲಾ ನಾಲ್ಕು ಮಂದಿ ಕಾರ್ಯಕರ್ತರಂತೆ 20 ತಂಡಗಳಲ್ಲಿ ಪಿಎಫ್ಐ ಕಾರ್ಯಕರ್ತರು ಜಕಾತ್ ಸಂಗ್ರಹಣೆಗಿಳಿದಿದ್ದಾರೆ. ಈ ಪೈಕಿ ಅಲೀಂ, ನಾಸಿಕ್, ಖಾಲಿದ್ ಮುಂತಾದವರಿದ್ದ ಒಂದು ತಂಡ ಆರಿಫ್ ಮನೆಯಿದ್ದ 10 ನೇ ಕ್ರಾಸಿಗೆ ಬಂದಿದೆ. ತಮ್ಮನ್ನು ಪಾಲಿಕೆ ಚುನಾವಣೆ ಯಲ್ಲಿ ಸೋಲಿಸಿದ್ದಲ್ಲದೇ ತಮ್ಮ ರಸ್ತೆಯಲ್ಲೇ ಜಕಾತ್ ನಿಧಿ ಸಂಗ್ರಹಿಸುತ್ತಿದ್ದ ಪಿಎಫ್ಐ ಕಾರ್ಯಕರ್ತರನ್ನು ನೋಡಿದ್ದೇ ಆರಿಫ್‌ನ ಪಿತ್ಥ ಕೆರಳಿದೆ. ತನ್ನ ಮಕ್ಕಳಾದ ಸುಲ್ತಾನ್ ಮತ್ತು ಮೊಹಸೀನ್‌ರನ್ನು ಛೂಬಿಟ್ಟಿದ್ದಾನೆ.


ಆರಿಫ್

ಜಕಾತ್ ಸಂಗ್ರಹಣಾ ತಂಡವನ್ನು ಅಡ್ಡಗಟ್ಟಿ ಹೀನಾಮಾನ ಹೊಡೆದಿದ್ದಾರೆ ಆರಿಫ್‌ನ ಮಕ್ಕಳು. ಅದೇ ಹೊತ್ತಿಗೆ ಆರಿಫ್ ಕೂಡ ಲಾಂಗ್ ಹಿಡಿದು ಬಂದಿದ್ದೇ ಕಾರ್ಯಕರ್ತರನ್ನು ಅಟ್ಟಾಡಿಸಿದ್ದಾನೆ. ಒದೆ ತಿಂದ ಹುಡುಗರು ಪೊಲೀಸ್ ಠಾಣೆಗೆ ಬಂದು ದೂರು ಕೊಡುತ್ತಿದ್ದರೆ ಇತ್ತ ಆರಿಫ್ ಗ್ಯಾಂಗ್ ಸಿಕ್ಕ ಸಿಕ್ಕ ಪಿಎಫ್ಐ ಕಾರ್ಯಕರ್ತರನ್ನೆಲ್ಲ ಅಟ್ಟಾಡಿಸಲಾರಂಭಿಸಿದೆ. ಪಿಎಫ್ಐ ಕಾರ್ಯಕರ್ತರ ಪೈಕಿ ಇಮ್ರಾನ್‌ನ ತಲೆ ಸೀಳಿದರೆ, ರಫೀಕ್ ಎಂಬಾತನ ಹೊಟ್ಟೆಯೇ ಸೀಳಿ ಕಿಡ್ನಿ ತನಕ ಹರಿದಿದೆ. ವಸೀಮ್ ಖಾನ್, ಖಾಲಿದ್ ಪಾಷಾ, ಖಾಜಾ ಮುಂತಾದವರೆಲ್ಲ ರಕ್ತ ಸುರಿಸುತ್ತಾ ವಿವಿಧ ಆಸ್ಪತ್ರೆಗಳ ಪಾಲಾದರೆ ಇತ್ತ ಪಿಎಫ್ಐ ಕಾರ್ಯಕರ್ತರು, ಬೆಂಬಲಿಗರೆಲ್ಲ ಜೆಜೆನಗರ ಪೊಲೀಸ್ ಠಾಣೆಯೆದುರು ಸೇರಿ ಪ್ರತಿಭಟಿಸಲಾರಂಭಿಸಿದ್ದಾರೆ.

ಆಗಲೇ ಹುಷಾರಾಗಿ ಪೊಲೀಸರು ಆರಿಫ್ ಮತ್ತು ಆತನ ಗ್ಯಾಂಗನ್ನು ಬಂಧಿಸಿದ್ದರೆ ಇನ್ನಷ್ಟು ಅನಾಹುತವಾದರೂ ತಪ್ಪುತ್ತಿತ್ತು. ಪೊಲೀಸರಿಗೆ ಶಾಸಕ ಜಮೀರ್ ಮುಲಾಜಿದೆ ಅದೇ ಹೊತ್ತಿಗೆ ಪಿಎಫ್ಐನ ಬೆಂಗಳೂರು ನಗರಾಧ್ಯಕ್ಷ ತಾಹಿರ್ ಠಾಣೆಯೆದುರು ಬಂದಿದ್ದಾರೆ. ಈ ಹೊತ್ತಿಗಾಗಲೇ ಆರಿಫ್ ಗ್ಯಾಂಗ್ ಪಿಎಫ್ಐ ಕಾರ್ಯಕರ್ತರ ಮನೆ, ರಿಕ್ಷಾ, ಕಾರುಗಳನ್ನೆಲ್ಲ ಚಿಂದಿ ಮಾಡಿತ್ತಲ್ಲ; ಅದನ್ನು ನೋಡಲೆಂದು ತಾಹಿರ್ ಪಾದಯಾತ್ರೆ ಹೊರಟಿದ್ದಾರೆ. ಬಹುಶಃ ತಾಹಿರ್‌ಗೆ ಆರಿಫ್‌ನ ಕ್ರೌರ್ಯದ ಅರಿವಿರಲಿಕ್ಕಿಲ್ಲ. ನೊಂದ ಜನ ಮತ್ತು ಒಂದಷ್ಟು ಕಾರ್ಯಕರ್ತರ ಸಮೇತ ಆರಿಫ್ ಅಣ್ಣ ಫಾರೂಕ್‌ನ ಮನೆಯಿರುವ 13 ನೇ ಕ್ರಾಸಿಗೆ ಬಂದಿದ್ದಾರೆ. ಇದನ್ನೇ ನಿರೀಕ್ಷಿಸುತ್ತಿದ್ದ ಆರಿಫ್ ಮಗ ಇಮ್ರಾನ್ ತನ್ನ ಬಂದೂಕುದಾರಿ ಬಾಡಿಗಾರ್ಡುಗಳ ಜೊತೆ ಐವತ್ತು ಮಂದಿ ರೌಡಿಗಳ ಜೊತೆ ಹೊಂಚು ಹಾಕಿ ಕೂತಿದ್ದ.

ಪೊಲೀಸರ ಸಮೇತ ಪಾದಯಾತ್ರೆ ಬರುತ್ತಿದ್ದ ನಾಯಕ ತಾಹಿರ್ ತಂಡದ ಮೇಲೆ ತನ್ನ ಬಾಡಿಗಾರ್ಡ್‌ಗಳ ಬಂದೂಕೆತ್ತಿದ್ದೇ ಇಮ್ರಾನ್ ಎರ್ರಾಬಿರ್ರಿ ಗುಂಡು ಹಾರಿಸಿದ್ದ. ಜನ ಚೆಲ್ಲಾಪಿಲ್ಲಿಯಾಗಿ ಓಡುತ್ತಿದ್ದರೆ ಇಮ್ರಾನ್ ರೌಡಿ ಪಡೆ ಸಿಕ್ಕಸಿಕ್ಕವರನ್ನೆಲ್ಲಾ ಹಿಡಿದು ಕತ್ತರಿಸಿ ಹಾಕಿತ್ತು. ನಾಯಕ ತಾಹಿರ್‌ನನ್ನು ಅದ್ಯಾವ ಪರಿ ಕತ್ತರಿಸಿತೆಂದರೆ ತಲೆ ಸೀಳಿ, ಬೆನ್ನು ಮೂಳೆ ಮುರಿದು ಕೈಗಂಟೇ ಕಳಚಿಬಿದ್ದಿತ್ತು. ಇರ್ಫಾನ್‌ನ ಕತ್ತು, ಕಣ್ಣು, ಮುಖ ಬಿಡದೇ ಕುಯ್ದಿದ್ದರು. ಷರೀಫ್‌ರ ಬೆನ್ನು ಸೀಳಿತ್ತು. ಪಾದಯಾತ್ರೆ ಮೇಲೆ ನಡೆದ ಏಕಾಏಕಿ ದಾಳಿಯಿಂದ ರಸ್ತೆಗುಂಟ ಹರಿದ ರಕ್ತವೇ ಭೀಕರತೆಯನ್ನು ಹೇಳುತ್ತಿತ್ತು.

ಇದು ಗೊತ್ತಾಗಿದ್ದೇ ಸುತ್ತಮುತ್ತಲ ಏರಿಯಾಗಳ ಪಿಎಫ್ಐ ಕಾರ್ಯಕರ್ತರೆಲ್ಲ ಜೆಜೆನಗರ ಠಾಣೆಯೆದುರು ಸೇರಿ ಪ್ರತಿಭಟಿಸಿದ್ದಾರೆ. ದುರಂತವೆಂದರೆ ಪೊಲೀಸರು ಆರಿಫ್‌ನ ಮನೆಯನ್ನು ಕಾಯುತ್ತಿದ್ದರೇ ಹೊರತು ಆತನನ್ನು ಬಂಧಿಸಲಿಲ್ಲ. ಆತನ ಕಡೆಯ ರೌಡಿಗಳೆಂದು ಬಂಧಿಸಿದವರೆಲ್ಲ ಮುಗ್ಧರು ಮತ್ತು ಬಡ ಮುಸ್ಲಿಮರು. ಇನ್ನೂ ದುರಂತವೆಂದರೆ ಆರಿಫ್ ವಿರುದ್ಧ ದೂರು ನೀಡಲು ಬಂದ ಪಿಎಫ್ಐ ಕಾರ್ಯಕರ್ತರನ್ನೇ ಹಿಡಿದು ಪೊಲೀಸರು ಜೈಲಿಗೆ ಹಾಕಿದ್ದರು. ಕಮೀಷನರ್ ಬಿದರಿ ಆರಿಫ್ ಮೇಲೆ ಗೂಂಡಾ ಕಾಯ್ದೆ ಹಾಕಿದ್ದಾರೆ ನಿಜ. ಆದರೆ ಆತನ ಮಗನನ್ನಾಗಲಿ ಆತನ ರೌಡಿ ಪಡೆಯನ್ನಾಗಲಿ ಏಕೆ ಹಿಡಿಯದೇ ನಿಷ್ಕ್ರಿಯರಾಗಿದ್ದಾರೆ?


ಗಾಯಗೊಂಡ ಪಿಎಫ್ಐ ಕಾರ್ಯಕರ್ತರ ಪ್ರಾಣಕ್ಕೆ ಬೆಲೆಯಿಲ್ಲವೆ? ಮುಸ್ಲಿಂ ಸಂಘಟನೆ ಎಂಬ ಒಂದೇ ಕಾರಣಕ್ಕೆ ನ್ಯಾಯ ಕೇಳುವುದೇ ತಪ್ಪೆ? ಯಾವ ತಪ್ಪನ್ನೂ ಮಾಡದೇ ಠಾಣೆಯೆದುರು ಪ್ರತಿಭಟಿಸಿದ ಒಂದೇ ತಪ್ಪಿಗೆ ಆರಿಫ್ ಮತ್ತು ಆತನ ರೌಡಿ ಪಡೆಯ ಜೊತೆ ಒಂದೇ ತಕ್ಕಡಿಗೆ ಹಾಕಿ ಪಿಎಫ್ಐ ಕಾರ್ಯಕರ್ತರನ್ನು ತೂಗಬಹುದೆ?

ಅಥವಾ ಇದು ಬಿಜೆಪಿಯ ನ್ಯಾಯ ನಿರ್ಣಯ ವೈಖರಿಯೆ?

• ರಾ.ಸೋ.

## ಕತ್ತರಿಸುತ್ತಾನಂತೆ ನೆಲಮಂಗಲದ ಎಮ್ಮೆಲ್ಲೇ....

**ಗೋಹತ್ಯೆ ಮಾಡೋರ ಕೈ ಕತ್ತರಿಸಿ ಹಾಕಿ ಎಂದು ಪಕ್ಷಾಧ್ಯಕ್ಷ ಈಶ್ವರಪ್ಪನವರೇ ಕರೆ ನೀಡಿದ ಮೇಲೆ ಕನಿಷ್ಠ ಬಿಜೆಪಿ ಶಾಸಕರಾದರೂ ಅದನ್ನು ಪಾಲಿಸದಿದ್ದರೆ ಹೇಗೆ?**


...ದ್ದಲಿಂಗ


ನಾಗರಾಜ್

ಬಹುಶಃ ಮಚ್ಚೋ ಲಾಂಗೋ ಏನಾದರೂ ಸಿಕ್ಕಿಬಿಟ್ಟಿದ್ದರೆ ಈ ಹೊತ್ತಿಗಾಗಲೇ ನೆಲಮಂಗಲದ ಬಿಜೆಪಿ ಶಾಸಕ ನಾಗರಾಜು ಆ ಕೆಲಸ ಮಾಡಿ ಮುಗಿಸುತ್ತಿದ್ದರು! ಕಾರಣ ಮಾತ್ರ ಗೋಹತ್ಯೆಯಲ್ಲ; ಬದಲಿಗೆ ತನ್ನನ್ನು ಟೀಕಿಸಿ ಬರೆದ ಪತ್ರಿಕೆಯೊಂದರ ಸಂಪಾದಕನ ಕೈ ಕತ್ತರಿಸ್ತೀನಿ ಎಂದು ಎಮ್ಮೆಲ್ಲೇ ಸಾಹೇಬರು ನುಗ್ಗಿಬಿಟ್ಟರು. ಇದು ನಡೆದದ್ದು ಆಗಸ್ಟ್ 30 ರ ಸಂಜೆ. ನೆಲಮಂಗಲ ತಾಲ್ಲೂಕು ಸೋಲೂರು ಚರ್ಚ್ ಹಿಂದಿರುವ ಚಿಲುಮೆಮಠದಲ್ಲಿ ನಡೆದ ಕಾರ್ಯಕ್ರಮಕ್ಕೆ ಸಿದ್ಧಗಂಗೆ ಶ್ರೀ ಜೊತೆ ಮಂತ್ರಿ ರೇಣುಕಾಚಾರ್ಯ ಕೂಡ ಬಂದಿದ್ದರು. ಜೊತೆಗೇ ಸ್ಥಳೀಯ ಶಾಸಕ ನಾಗರಾಜು ಕೂಡ ವೇದಿಕೆಯಲ್ಲಿದ್ದರು. ಅದೇ ...ಗೆ ಯಾರೋ ಒಂದಿಬ್ಬರು ಬಂದಿದ್ದೇ 'ಗರುಡ ಬೇಟೆ' ಎಂಬ ಮಾಗಡಿ ಮೂಲದ ಪತ್ರಿಕೆಯೊಂದರ ಪ್ರತಿಗಳನ್ನು ಹಂಚಿದ್ದಾರೆ. ವೇದಿಕೆಯಲ್ಲಿದ್ದವರಿಗೂ ...ಗಳನ್ನು ಕೊಟ್ಟಿದ್ದಾರೆ.

...ಬಿಡಿಸಿ ನೋಡಿದರೆ ಗರುಡ ಬೇಟೆಯ ಒಳಪುಟದಲ್ಲಿ ನೆಲಮಂಗಲ ಶಾಸಕ ನಾಗರಾಜನ ಅವ್ಯವಹಾರಗಳ ವಿರುದ್ಧ ವಿಶೇಷ ವರದಿಯಿತ್ತು ... ಪಿತ್ಥ ನೆತ್ತಿಗೇರದೇ ಇರುತ್ತಾ? ಕಾರ್ಯಕ್ರಮದ ಮಧ್ಯೆಯೇ ಕೆಂಡಾಮಂಡಲರಾದ ನಾಗರಾಜು 'ಯಾವನಾ ಅವ್ನು ನನ್ನ ವಿರುದ್ಧ ಬರೆದೋನು?' ...ದ್ದೇ ಸಭಿಕರ ಮಧ್ಯೆ ಕೂತಿದ್ದ ಸಂಪಾದಕ ಸಿದ್ದಲಿಂಗನ ಮೇಲೆ ನುಗ್ಗಿಬಂದರು. 'ನೀನೇ ಏನೋ, —ಮ್ಮನ್ ಕೈ ಕತ್ತರಿಸ್ತೀನಿ. ನನ್ನ ಮೇಲೇ ...ರಿವಾ? ಕೈ ಇದ್ರೆ ತಾನೇ ನೀನು ಬರಿಯೋದು? ಎಂದು ಪುಡಿ ರೌಡಿಯಂತೆ ನುಗ್ಗಿದ ನಾಗರಾಜುವನ್ನು ಕೊನೆಗೆ ಮಂತ್ರಿ ರೇಣುಕಾಚಾರ್ಯನೇ ...ಂದು ಸಮಾಧಾನಪಡಿಸಬೇಕಾಯ್ತು! ಸದ್ಯ 'ಗರುಡ ಬೇಟೆ' ಸಂಪಾದಕ ಸಿದ್ದಲಿಂಗ ಶಾಸಕ ನಾಗರಾಜು ವಿರುದ್ಧ ಕುದೂರು ಪೊಲೀಸ್ ಠಾಣೆಗೆ ...ು ಕೊಟ್ಟಿದ್ದಾನೆ. ಎಫ್‌ಐಆರ್ ಕೂಡ ದಾಖಲಾಗಿದೆ. ತನ್ನ ದುರಾಚಾರವನ್ನು ಬರೆದಾಕ್ಷಣ ಕೈ ಕತ್ತರಿಸುತ್ತೇನೆಂದು ನುಗ್ಗಿದ ಶಾಸಕ ನಾಗರಾಜು ...ನಿಷ್ಠಾವಂತ ಬಿಜೆಪಿ ಶಾಸಕನಾಗಿ ಕನಿಷ್ಠ ಪಕ್ಷಾಧ್ಯಕ್ಷರ ಆದೇಶವನ್ನಾದರೂ ಪಾಲಿಸಬೇಕಲ್ಲವೆ?

...ದ್ಯ ಕೈ ಕತ್ತರಿಸಲಿಲ್ಲವಲ್ಲ ಅದೇ ಪುಣ್ಯ!

# ಮಂಡ್ಯ: ಇದು ಕರವೇ ಅಲ್ಲ! ಮಾರವೇ

'ಪತ್ರಿಕೆ'ಯ ಕಳೆದ ಸಂಚಿಕೆಯಲ್ಲಿ ಕರವೇ ರಾಜ್ಯಾಧ್ಯಕ್ಷ ನಾರಾಯಣ ಗೌಡನ ಬಗ್ಗೆ ಬರೆಯಲಾಗಿತ್ತು. ವಾಸ್ತವದಲ್ಲಿ ಈ ಸಂಘಟನೆಯ ಅರ್ಧಕ್ಕಿಂತ ಹೆಚ್ಚು ಜಿಲ್ಲಾ ಮತ್ತು ತಾಲೂಕು ಘಟಕಗಳ ಪದಾಧಿಕಾರಿಗಳ ಪರಿಸ್ಥಿತಿ ಇದೇ. ಇವರುಗಳಿಗೆಲ್ಲಾ ತಾಲೂಕು, ಜಿಲ್ಲಾ ಕೇಂದ್ರಗಳು ಸಿಕ್ಕಿದ್ದರೆ ನಾರಾಯಣ ಗೌಡನಿಗೆ ಬೆಂಗಳೂರೇ ಸಿಕ್ಕಿದೆ; ಅಷ್ಟೇ ವ್ಯತ್ಯಾಸ. ಆಯಾ ಊರಿನ ಘನತೆ, ವ್ಯವಹಾರಗಳು ಮತ್ತು ತಾಕತ್ತಿಗೆ ತಕ್ಕಂತೆ ಇವರುಗಳ ವಸೂಲಿ ವ್ಯವಹಾರಗಳು ಇವೆ. ಅವರಲ್ಲೇ ತಮಗೆ ತಮ್ಮ ಊರಿನ ವಸೂಲಿಯಷ್ಟೇ ಸಾಕಾಗದು ಎನ್ನಿಸಿದಾಗ ಅಂಥವರು ಬಂಡಾಯ ಘೋಷಿಸಿದ್ದಾರೆ.




ಚಿದಂಬರ

ಉದಾಹರಣೆಗೆ, ಚನ್ನಪಟ್ಟಣದ ರೇಷ್ಮೆ ಸೀಮೆ ರಮೇಶ್ ಕರವೇ ರಾಜ್ಯ ಉಪಾಧ್ಯಕ್ಷನಾಗಿದ್ದ ವ್ಯಕ್ತಿ. ಆದರೆ ಬರೀ ಚನ್ನಪಟ್ಟಣದ ಕಮಾಯಿಗಿಂತ ಹೆಚ್ಚಿನದ್ದರ ಮೇಲೆ ಈತನ ಕಣ್ಣಿದ್ದರಿಂದ, ಕರವೇ ಬಿಟ್ಟು ರೈತ ಜಯ ಕರ್ನಾಟಕದ ರಾಜ್ಯಾಧ್ಯಕ್ಷನಾದ. ಕಡೆಗೆ ರೈಯೇ ಗಾಬರಿ ಬೀಳುವ ಪ್ರಮಾಣಕ್ಕೆ ಈತನ ವ್ಯವಹಾರ ಬೆಳೆದದ್ದರಿಂದ ಹೊರಬಿದ್ದನೆಂದರೆ, ಇನ್ನು ಕರವೇ ಟ್ರೈನಿಂಗ್ ಯಾವ ಮಟ್ಟಕ್ಕೆ ಇದ್ದಿರಬಹುದು ಯೋಚಿಸಿ.

ಅದೇ ಸಾಲಿನ ಇನ್ನೊಬ್ಬ ವ್ಯಕ್ತಿ ಮೈಸೂರು ಕರವೇ ಜಿಲ್ಲಾಧ್ಯಕ್ಷ ಮೋಹನ್‌ಕುಮಾರ್ ಗೌಡ. ಈತನೂ ಕರವೇ ಬಿಟ್ಟು ಈಗ ತನ್ನದೇ ವಸೂಲಿ ಅಂಗಡಿಯಿಟ್ಟುಕೊಂಡಿದ್ದಾನೆ.

ಅವೆಲ್ಲಾ ಇರಲಿ, ಸದ್ಯದ ರೋಚಕ ವರ್ತಮಾನ ಮಂಡ್ಯ ಜಿಲ್ಲಾಧ್ಯಕ್ಷ ನಾಟಕದ ಸೀನರಿ ಮ.ಸೋ.ಚಿದಂಬರ್‌ದು. ಈತನ ಸಹೋದರ ರವಿಶಂಕರೇಗೌಡ ಹಿಂದೆ ನಗರಸಭಾ ಸದಸ್ಯನೂ ಆಗಿದ್ದ, ಹಣಕಾಸಿನಲ್ಲೂ ಸಾಕಷ್ಟು ಚೆನ್ನಾಗೇ ಇದ್ದ ಫ್ಯಾಮಿಲಿಯ ಚಿದಂಬರ್ ಜಿಲ್ಲಾಧ್ಯಕ್ಷನಾಗಬೇಕಾದರೆ, ನಾರಾಯಣ ಗೌಡನಿಗೆ 25 ಸಾವಿರ ಕೊಟ್ಟಿದ್ದನಂತೆ. ಆ ನಂತರ ಎಲ್ಲೂ ದೊಡ್ಡ ಪ್ರಮಾಣದಲ್ಲಿ ಚಿದಂಬರ್ ಹೆಸರು ಕೆಡಿಸಿಕೊಂಡಿರಲಿಲ್ಲ. ಈತನಿಗಿಂತ ಮದ್ದೂರಿನ ಕೋಡಿಹಳ್ಳಿ ಶ್ರೀನಿವಾಸ್ ಎಲ್ಲೆಡೆ ಮಿಂಚುತ್ತಿದ್ದದ್ದು ಮತ್ತು ಕಮಾಯಿಯಲ್ಲೂ ಆತನದ್ದೇ ಮುಂದು ಎಂಬುದು ಎಲ್ಲೆಡೆ ಕೇಳಿಬರುತ್ತಿದ್ದ ಮಾತು. 1 ಗುಂಟೆ ಜಮೀನೂ ಇರದ ಶ್ರೀನಿವಾಸ್ ಕರವೇ ಹೆಸರಿನಲ್ಲಿ ಮಿಂಚಲು ಶುರು ಮಾಡಿದ ಮೇಲೆ, ಎರಡು ದೊಡ್ಡ ಬಂಗಲೆಗಳು ಮತ್ತು ದೊಡ್ಡ ಕಾರೊಂದನ್ನು ಸಂಪಾದಿಸಿದ್ದು ನಾರಾಯಣ ಗೌಡನ ಟ್ರೈನಿನಲ್ಲೇ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿಯೇ.

ಚಿದಂಬರ್ ರಾಜರಾಜೇಶ್ವರಿ ಡ್ರಾಮಾ ಸೀನರಿಯೆಂಬ ಅಂಗಡಿಯನ್ನು ಪೇಟೆಬೀದಿಯಲ್ಲಿ ಇಟ್ಟುಕೊಂಡಿದ್ದ. ಕರವೇ ಜಿಲ್ಲಾಧ್ಯಕ್ಷನಾದ ಮೇಲೆ ಅಂತಹ ದೊಡ್ಡ ವ್ಯವಹಾರಗಳಲ್ಲೇನೂ ಕೈಹಾಕಿದಂತೆ ಕಾಣುವುದಿಲ್ಲವಾದರೂ, ಸಂಜಯ್ ವೃತ್ತದಲ್ಲಿ ಡಾ.ರಾಜ್ ಪ್ರತಿಮೆ ಹಾಕಿಸುತ್ತೇವೆಂದು ಸಾಕಷ್ಟು ದುಡ್ಡು ಎತ್ತಿದ್ದನೆಂದು ಮಂಡ್ಯದಲ್ಲಿ ಬಹುತೇಕರು ಹೇಳುವ ಮಾತು. ಮಂಡ್ಯ ಮೆಡಿಕಲ್ ಕಾಲೇಜಿನಲ್ಲಿ ಡಾ.ಉಪೇಂದ್ರಕುಮಾರ್‌ನ ಬೇಜವಾಬ್ದಾರಿಯಿಂದ ರೋಗಿಯೊಬ್ಬ ಸತ್ತಾಗ, ಅದರಲ್ಲೂ ಬಿಡದೆ ಈತ ದುಡ್ಡುಕಿತ್ತಿದ್ದು ಹೊರಬಂತು. ಅಲ್ಲಿಂದ ಮುಂದೆ ಚಿದಂಬರ್ ಕೂಡಾ ಮಾಮೂಲಿ ರಕ್ಷಣಾ ವೇದಿಕೆ ಗಿರಾಕಿಯೇ ಎಂಬುದು ಸಾಬೀತಾಯಿತು.



ನಾರಾಯಣಗೌಡ

ಮೊನ್ನೆ ಮಂಡ್ಯದಲ್ಲಿ ಮಾರ್ವಾಡಿ ಪ್ರಕರಣವೊಂದರಲ್ಲಂತೂ ಚಿದಂಬರ್ ಆಡಿದ ಆಟಗಳಿಗೆ ಯಾವ ಡ್ರಾಮಾಸೀನರಿಯೂ ಅಗತ್ಯವಿರಲಿಲ್ಲ. ಮಂಡ್ಯದ ಹಳ್ಳಿಗಳ ರೈತರು, ಮಹಿಳೆಯರಿಗೆ ಸುಮಾರು 4 ಕೋಟಿ ರೂ.ಗಳಷ್ಟು ವಂಚನೆ ಮಾಡಿ ಓಡಿಹೋಗಿದ್ದ ಮಾರ್ವಾಡಿಯೊಬ್ಬನ ಮನೆಗೆ ದಾಳಿಯಿಟ್ಟ, ದುಡ್ಡು ಕಳೆದುಕೊಂಡ ಜನ, ಅವನ ಮನೆಯಲ್ಲೇ 4 ದಿನ ಮಲಗಿ ಬಿಟ್ಟಿದ್ದರು. ಆಗ ಎಲ್ಲಿಂದಲೋ ಧುತ್ತನೆ ಅಲ್ಲಿಗೆ ಒಕ್ಕರಿಸಿದ ಚಿದಂಬರ್, ತಾನು ಕನ್ನಡ ನಾಡು-ನುಡಿ ಉಳಿಸುವ ಮಹನೀಯನೆಂದು ಹೇಳಿ, ಒಂದು ತಿಂಗಳಲ್ಲಿ ದುಡ್ಡು ಕಳೆದುಕೊಂಡ ಎಲ್ಲರಿಗೂ ಶೇ.60ರಷ್ಟು ಹಣವನ್ನು ಕೊಡಿಸುವ ಭರವಸೆ ನೀಡಿದ. ಜನ ನಂಬ ಮಾರ್ವಾಡಿಯ ಮನೆ ಖಾಲಿ ಮಾಡಿದರೆ, ಚಿದಂಬರ್ ಮಾರ್ವಾಡಿಯ ಜೊತೆಗೇ ಕೈಜೋಡಿಸಿದ.

ಅವನ ಬಂಗಲೆಯನ್ನು 60 ಲಕ್ಷಕ್ಕೆ ಮಾರಿಸಿ, ಉಳಿದ ಒಂದಷ್ಟು
ಚಿನ್ನಾಭರಣಗಳನ್ನು ಸುಮಾರು 20 ಲಕ್ಷಗಳಿಗೆ ಮಾರಿಸಿ ಎಲ್ಲಾ
ಹಣವನ್ನೂ ತನ್ನ ಸುಪರ್ದಿಗೆ ತೆಗೆದುಕೊಂಡ. ಓಡಿಹೋಗಿದ್ದ
ಮಾರ್ವಾಡಿಯ ಅಪ್ಪ ಸಂಪತ್‌ರಾಜ್ ಮತ್ತು ತನ್ನ ಹೆಸರಿನಲ್ಲಿ ಆಕ್ಸಿ
ಬ್ಯಾಂಕಿನಲ್ಲಿ ಜಂಟಿ ಖಾತೆ ತೆಗೆದು ಆಗಸ್ಟ್ 2ರಂದು ದುಡ್ಡು ಹಂಚ
ಮಂಡ್ಯ ಪ್ರವಾಸಿಮಂದಿರಕ್ಕೆ ಬಂದರು. ಅಲ್ಲಿ ತಮ್ಮ ಹಣ, ಒಡವೆ
ವಾಪಸ್ ಪಡೆಯಲು ಬಂದ ಜನರು ಚಿದಂಬರ್‌ನ ಆಟ ನೋಡಿ
ಗಾಬರಿ ಬಿದ್ದರು. 32 ಸಾವಿರ ಕಳೆದುಕೊಂಡವರಿಗೆ 918 ರೂ.ಚೆಕ
18 ಸಾವಿರ ಕೊಡಬೇಕಾದವರಿಗೆ 2 ಸಾವಿರ ಹೀಗೆ ಬೇಕಾಬಿಟ್ಟಿ
ಚೆಕ್‌ಗಳ ವಿತರಣೆ ನಡೆಯಿತು.

ಜನರು ಬಾಯಿಗೆ ಬಂದದ್ದು ಬೈದದ್ದಲ್ಲದೇ
ಕರ್ನಾಟಕ ಜನಪರ ವೇದಿಕೆಯವರನ್ನು
ಸಂಪರ್ಕಿಸಿದರು. ಜನಪರ ವೇದಿಕೆಯವರು ಹೆ
ನೋಡಿದರೆ ಅಲ್ಲಿ ಕೋಟ್ಯಾಂತರ ರೂ.ಗಳ ದೊ
ಕರ್ಮಕಾಂಡವೇ ಬಯಲಿಗೆ ಬಂದಿತು. ಇದ್ದ
ಹಂಚುವವರೆಗೆ ಸುಮ್ಮನಿದ್ದು, ನಂತರ ಪೊಲೀ
ದೂರೂ ದಾಖಲಾಯಿತು. ಕಳೆದ ವಾರ ಇದರ
ತನಿಖೆ ಆರಂಭಿಸಿದ ಸಿಪಿಐ ಜಯಮಾರುತಿ
ಚಿದಂಬರ್‌ನನ್ನು ಬಂಧಿಸಿದ್ದಾರೆ. ಜೈಲಿಗೆ
ಹೋಗಬೇಕಾದವನು ಜಸ್ಟ್‌ಮಿಸ್ ಆಗಿ
ಜಾಮೀನು ಪಡೆದುಕೊಂಡು ಇದೀಗ ಹೊರಗ
ಬಂದಿದ್ದಾನೆ.


ಕರವೇಯ ಈ ಪುಂಡ ವಂಚಕರು ಕನ್ನಡ
ನಾಡುನುಡಿ, ನೆಲ ಜಲ ಸಂಪತ್ತು, ಕನ್ನಡಿಗ
ಎಂದೆಲ್ಲಾ ಬಾಯಿಬಡಿದುಕೊಳ್ಳುತ್ತಲೇ, ಇವರು
ಮಾಡಿದ್ದು ಮಾತ್ರ ದ್ರೋಹ. ಕನ್ನಡಿಗರಿಗೇ
ದ್ರೋಹ! ಇದರಿಂದಲೇ ಕರವೇಯವರಿಗೆ ಮ
ಜನ ಹಾದಿಬೀದಿಗಳಲ್ಲಿ ನಿಮ್ಮದು ಕರ್ನಾಟಕ ರಕ್ಷಣಾ ವೇದಿಕೆ ಅಲ್ಲ
ಬದಲಾಗಿ ಮಾ.ರ.ವೇ. ಅರ್ಥಾತ್ ಮಾರ್ವಾಡಿ ರಕ್ಷಣಾ ವೇದಿಕೆ
ಎಂದು ಪುನರ್ ನಾಮಕರಣ ಮಾಡಿಕೊಳ್ಳಿ ಎಂದು ಜರಿಯುತ್ತಿದ್ದಾ

ಇದು ನಾರಾಯಣ ಗೌಡನ ಶಿಷ್ಯರ ಜಿಲ್ಲಾ (ಅ)ವ್ಯವಹಾರಗಳು!

• ಲಕ್ಷ್ಮಣ್ ಚೀರನಹ
lakshmancheeranahally@gmail.c

# ಹುಬ್ಬಳ್ಳಿ: ಸಿಆರ್‌ಪಿಎಫ್ ಯೋಧ ಹೆಂಡತಿ ಮೇಲಿನ ಸಿಟ್ಟಿಗೆ ಮಾವನ ಫ್ಯಾಮಿಲಿಯನ್ನೇ ಮಟಾಶ್ ಮಾಡಿದ!

ಕೈಯಲ್ಲೊಂದು ರಿವಾಲ್ವರ್ ಹಿಡಿದುಕೊಂಡು ಸಿಕ್ಕಸಿಕ್ಕವರನ್ನೆಲ್ಲಾ ಶೂಟ್ ಮಾಡುತ್ತಾ "ಐ ಆಮ್ ಗಾಡ್, ಗಾಡ್ ಇಸ್ ಗ್ರೇಟ್" ಎಂದು ಉಪೇಂದ್ರ ಹೊಡೆದಿದ್ದನ್ನು 'ಎ' ಸಿನಿಮಾದಲ್ಲಿ ನೋಡಿದ್ದೇವೆ. ಆದರೆ ಆ ಸಿನಿಮಾದಲ್ಲಿ ಆದಂತೆ ಇಲ್ಲೊಬ್ಬ ಸಿಆರ್‌ಪಿಎಫ್ ಮಿಲಿಟರಿ ಯೋಧ ತನ್ನ ಹೆಂಡತಿ ತವರಿನಿಂದ ಗಂಡನ ಮನೆಗೆ ಹಿಂದಿರುಗಿ ಬರೋಲ್ಲಾ ಅಂದಿದ್ದನ್ನೇ ಕಾರಣವನ್ನಾಗಿಸಿಕೊಂಡು ಮದುವೆ ಮಾಡಿದ ಸೋದರ ಸಂಬಂಧಿ ಮಾವನ ಇಡೀ ಫ್ಯಾಮಿಲಿಯನ್ನೇ ಶೂಟೌಟ್ ಮಾಡಿದ್ದಾನೆ. ಚಿಕ್ಕ ಚಿಕ್ಕ ಮಕ್ಕಳ ಮೇಲೂ ಎಲ್ಲೆಂದರಲ್ಲಿ ಗುಂಡು ಹಾರಿಸಿದ್ದಾನೆ. ಹಾಗಂತ ಇವನೇನು ಮೆಂಟಲ್ ಮಂಜನೋ, ಡೆಡ್ಲಿ ಸೋಮನೋ ಅಲ್ಲ. ದೇಶದ ಗಡಿ ಕಾಯೋ, ಶಾಂತಿ ಕಾಪಾಡೋ ಯೋಧನೀತ. ರಜೆ ತೆಗೆದುಕೊಂಡು ಊರಿಗೆ ಬಂದು ನಾಲ್ಕೇ ದಿನದಲ್ಲಿ ತನ್ನ ಸಂಬಂಧಿಗಳದ್ದೇ ಮೂರು ಹೆಣ ಉರುಳಿಸಿ, ಇನ್ನಿಬ್ಬರು ಬದುಕಿದ್ದೂ ಸತ್ತಂತೆ ಎಂಬಂತಹ ಸ್ಥಿತಿಗೆ ಅವರನ್ನು ನೂಕಿದ್ದಾನೆ. ಶೂಟೌಟ್ ಮಾಡಿ ಶೂರನಂತೆ ಎಸ್ಕೇಪ್ ಆಗಿದ್ದ ಯೋಧ ಈಗ ದಾವಣಗೆರೆ ಪೊಲೀಸರ ಅತಿಥಿಯಾಗಿದ್ದಾನೆ.



ಶಂಕ್ರಪ್ಪ

ಹುಬ್ಬಳ್ಳಿ ಹತ್ತಿರದ ಕುಂದಗೋಳ ತಾಲೂಕಿನ ಬೆಟದೂರ ಗ್ರಾಮದ ಯೋಧ ಶಂಕ್ರಪ್ಪ ತಿಪ್ಪಣ್ಣ ಕೊರವರ ರಜದ ಮೇಲೆ ಊರಿಗೆ ಬಂದಿದ್ದ. ಆತನ ಹೆಂಡತಿ ಗಾಳಿಶ್ರೀ ಅತ್ತೆ ಮಾವನೊಂದಿಗೆ ಜಗಳವಾಡಿ ಅಪ್ಪರಲ್ಲೇ ತವರು ಸೇರಿದ್ದಳು. ಎಷ್ಟೇ ಒತ್ತಾಯಮಾಡಿ ಕರೆದರೂ ಬೆಟದೂರಿಗೆ ಕಾಲಿಡಲ್ಲಾ ಎಂದು ಗದರಿದ್ದಳು. ಅವಳ ಈ ನಿರಾಕರಣೆಗೆ ಸೋದರ ಸಂಬಂಧಿ ಮಾವ ಯಲ್ಲಪ್ಪ ಭಜಂತ್ರಿ ಮತ್ತವನ ಹೆಂಡತಿ ಗೀತಾ ಕಾರಣ ಎಂದು ಸಿಟ್ಟಿಗೆದ್ದು ಕಳೆದ ರವಿವಾರ 29ರ ಬೆಳಗಿನ ಜಾವ 3 ಗಂಟೆಗೆ ಅವರ ಮನೆಗೆ ನುಗ್ಗಿ ಶೂಟೌಟ್ ಮಾಡಿದ್ದಾನೆ. ಅದರಲ್ಲಿ ಯಲ್ಲಪ್ಪ ಭಜಂತ್ರಿ, ಅವನ ಮಕ್ಕಳಾದ ಒಂಬತ್ತು ವರ್ಷದ ಐಶ್ವರ್ಯ ಹಾಗೂ ಆರು ವರ್ಷದ ಸೋಮಪ್ಪ ಪ್ರಾಣ ಬಿಟ್ಟಿದ್ದಾರೆ. ಹೆಂಡತಿ ಗೀತಾ ಅಲ್ಲಿಂದ ಪರಾರಿಯಾದರೆ ಇನ್ನೊಬ್ಬ ಮಗ ಪಂದನ ಎಡ ಪಕ್ಕೆಗೆ ಗುಂಡು ತಾಕಿಸಿಕೊಂಡು ಹುಬ್ಬಳ್ಳಿ ಕಿಮ್ಸ್‌ನಲ್ಲಿ ಹಾಸಿಗೆ ಹಿಡಿದಿದ್ದಾನೆ.

ಶಂಕ್ರಪ್ಪ ಮಿಲಿಟರಿಗೆ ಸೇರುವುದಕ್ಕೂ ಮೊದಲು ತನ್ನ ಸೋದರ ಮಾವನ ಮಗಳನ್ನು ಪ್ರೀತಿಸುತ್ತಿದ್ದ. ಆಕೆಯನ್ನು ವಿವಾಹವಾಗಬೇಕು ಎಂದುಕೊಂಡಿದ್ದ. ಅಷ್ಟರಲ್ಲೇ ಸಿಆರ್‌ಪಿಎಫ್‌ಗೆ ಆಯ್ಕೆಯಾಗಿ ಕಾಶ್ಮೀರ ಸೇರಿದ ಶಂಕ್ರಪ್ಪನಿಗೆ ತನ್ನ ಪ್ರೀತಿಯನ್ನು ಗಟ್ಟಿಗೊಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಈ ಸಂಬಂಧಕ್ಕೆ ಮನೆಯವರಿಂದಲೂ ವಿರೋಧವಾಗಿತ್ತು, ಹಾಗಾಗಿ ಆಕೆಯನ್ನು ಬೇರೊಂದು ಕಡೆ ಮದುವೆ ಮಾಡಿ ಕೊಟ್ಟುಬಿಟ್ಟರು. ಶಂಕ್ರಪ್ಪ ಕಾಶ್ಮೀರದಿಂದ ರಜೆ ಮೇಲೆ ಬರುವಷ್ಟರಲ್ಲೇ ಬೆಟದೂರ ಗ್ರಾಮದಲ್ಲೇ ಇರುವ ಮಾವ ಯಲ್ಲಪ್ಪ ಭಜಂತ್ರಿ ಮತ್ತವನ ಹೆಂಡತಿ ಗೀತಾ ಇದನ್ನೆಲ್ಲಾ ಮಾಡಿ ಮುಗಿಸಿದ್ದರು. ಶಂಕ್ರಪ್ಪನಿಗೆ ಬೇರೆ ಕಡೆ ಉತ್ತಮ ಸಂಬಂಧ ಹುಡುಕುವ ಆಲೋಚನೆ ಅವರದಾಗಿತ್ತು, ಆದರೆ ಮುಂದೆ ನಡೆದಿದ್ದೇ ಬೇರೆ.

ತನ್ನ ಪ್ರೀತಿಗೆ ಅಡ್ಡಿಯಾಗಿ ತನ್ನ ಆಶೆಗಳನ್ನು ಹಾಳುಗೆಡವಿದರು ಎಂದು ತರ್ಕಿಸಿದ ಯೋಧ ಶಂಕ್ರಪ್ಪ ಸೇಡಿಗೆ ಹೊಂಚು ಹಾಕಿದ್ದ. ಇದಕ್ಕೆ ಬಲಿಯಾದವಳು ಗಾಳಿಶ್ರೀ. ಯಲ್ಲಪ್ಪನ ತಂಗಿ ರೇಣುಕಾ ಅವರ ಮಗಳು ಅಪ್ರಾಪ್ತ (15) ಯುವತಿ ಗಾಳಿಶ್ರೀಯನ್ನು ಸೇಡಿಗಾಗಿ ಪ್ರೀತಿಸಬೇಕು ಅಂದುಕೊಂಡ. ಆದರೆ ಶಂಕ್ರಪ್ಪನ ಜಾತಕವನ್ನೆಲ್ಲಾ ಬಾಲ್ಯದಿಂದ ಕಂಡಿದ್ದ ಗಾಳಿಶ್ರೀ ಇವನನ್ನು ಕಂಡರೆ ಕ್ಯಾಕರಿಸಿ ಉಗಿಯುತ್ತಿದ್ದಳು. ಹೈಸ್ಕೂಲ್ ವಿದ್ಯಾರ್ಥಿನಿಯಾಗಿದ್ದ ಗಾಳಿಶ್ರೀ ನೋಡಲು ಸುಂದರಿ. ಅಷ್ಟೇ ಮೃದು ಸ್ವಭಾವದವಳು. ತನ್ನನ್ನು ಪ್ರೀತಿಸಲು ಒಪ್ಪದ ಗಾಳಿಶ್ರೀಯನ್ನು ಹೊತ್ತೊಯ್ದು ಬಲಾತ್ಕಾರ ಮಾಡಿದ್ದಾನೆ. ಅಷ್ಟಕ್ಕೂ ಸುಮ್ಮನಾಗದೆ ಮುಂದೆ ಅದ್ಯಾರನ್ನ ಮದುವೆಯಾಗ್ತಿಯೋ ನೋಡತಿನಿ ಎಂದೂ ಬೆದರಿಕೆ ಹಾಕಲು ಶುರು ಮಾಡಿದ್ದಾನೆ. ಇವನ ಕಾಟ ತಾಳದೆ ಕೊನೆಗೆ ಮೇ 9 ರಂದು ಅಪ್ರಾಪ್ತ ವಯಸ್ಸಿನ ಗಾಳಿಶ್ರೀಯನ್ನು ಶಂಕ್ರಪ್ಪನಿಗೆ ಕೊಟ್ಟು ಮದುವೆ ಮಾಡಿದ್ದಾರೆ.

ಮಾವ ಯಲ್ಲಪ್ಪ ಮತ್ತು ಗೀತಾ ಮುಂದೆ ನಿಂತು ಒಲ್ಲದ ಮನಸ್ಸಿನಿಂದಲೇ ಧಾರೆ ಎರೆದು ಕೊಟ್ಟಿದ್ದಾರೆ. ಗಾಳಿಶ್ರೀ ತಂದೆ ಶಿವಪ್ಪ ಬಳ್ಳಾರಿಗಂತೂ ಈ ಸಂಬಂಧ ಎಳ್ಳಷ್ಟೂ ಇಷ್ಟವಿರಲಿಲ್ಲ. ಆದರೂ ವಿಧಿ ಇಲ್ಲದೆ ಅವಳ ಹಣೆ ಬರಹ ಎಂದು ಆಕೆಯನ್ನು ಬೆಟದೂರಿಗೆ ಕಳುಹಿಸಿಕೊಟ್ಟಿದ್ದರು.


## ಟಾರ್ಚರ್ ತಾಳದೆ ಹಿಂದಿರುಗಿದಳು

ಮದುವೆ ಆದ ನಂತರ ಸ್ವಲ್ಪ ದಿನದಲ್ಲೇ ಯೋಧ ಶಂಕ್ರಪ್ಪ ಜ
ಕಾಶ್ಮೀರಕ್ಕೆ ತೆರಳಿದ. ಆದರೆ ಇತ್ತ ಶಂಕ್ರಪ್ಪನ ತಂದೆ ಮತ್ತು ತಾಯಿ ಅ
ಕಾಯಕವನ್ನು ಮುಂದುವರೆಸಿದರು. ಅಪ್ರಾಪ್ತ ವಯಸ್ಸಿನಲ್ಲಿ ಬಲಾತ
ಮದುವೆಯಾದ ಗಾಳಿಶ್ರೀಗೆ ಸಂಸಾರದ ಜ್ಞಾನವಾದರೂ ಹೇಗೆ ಬಂದೀ
ಅಂತಹುದರಲ್ಲಿ ಅತ್ತೆ ಲಕ್ಷ್ಮವ್ವ ಮತ್ತು ಮಾವ ತಿಪ್ಪಣ್ಣ ಪ್ರತಿ ದಿನಾ ಅ
ಜೀವಾ ಹಿಂಡಿದ್ದಾರೆ. ತವರಿನಿಂದ ಹಣ ತರುವಂತೆ ಚಿತ್ರಹಿಂಸೆ ಕೊಟ್ಟಿ
ಇದರಿಂದ ರೋಸಿಹೋದ ಗಾಳಿಶ್ರೀ ಅದೇ ಊರಲ್ಲಿದ್ದ ಯಲ್ಲಪ್ಪ ಮ
ಗೀತಾಳ ಮನೆ ಸೇರಿದ್ದಾಳೆ. ಹೇಗಾದರೂ ಮಾಡಿ ತನ್ನನ್ನು ಪಾರು ಮ
ಎಂದು ಗೋಗರೆದಿದ್ದಾಳೆ. ಬೆಟದೂರ ಗ್ರಾಮದಲ್ಲಿ ಸ್ವಲ್ಪ ಮರ್ಯಾದಸ್ಥನಾ
ಯಲ್ಲಪ್ಪ ಅವಳಿಗೆ ಎಷ್ಟೇ ತಿಳಿ ಹೇಳಿದರೂ ಆಕೆ ಕೇಳದೆ ಕೊನೆಗೆ ತನ್ನ ತ
ಹುಬ್ಬಳ್ಳಿಗೆ ಬಂದು ಸೇಫಾದಳು.

## ಶೂಟೌಟ್‌ಗಾಗೇ ರಜಾ ಹಾಕಿ ಬಂದ!

ಮದುವೆ ಮುಗಿಸಿಕೊಂಡು ಸಿಆರ್‌ಪಿಎಫ್‌ಗೆ ವಾಪಸ್ಸು ಹೋಗಿದ್ದ ಶಂ
ಎರಡು ತಿಂಗಳಲ್ಲಿ ಆದ ಬೆಳವಣಿಗೆಯನ್ನೆಲ್ಲಾ ತನ್ನ ತಂದೆತಾಯಿಗಳಿಂದ ತಿ
ಕೊಂಡಿದ್ದ. ಅವರು ಗಾಳಿಶ್ರೀ ಮತ್ತು ಯಲ್ಲಪ್ಪನ ಮೇಲೆ ಎಲ್ಲಾ ತ
ಹೊರೆಸಿದ್ದರು. ಹೀಗಾಗಿಯೇ ಯೋಧ ಶಂಕ್ರಪ್ಪ ಊರಿಗೆ ಬರುವ ಮೊ
ಕೊಲೆ ಮಾಡುವ ಸ್ಕೆಚ್ಚು ಹಾಕಿಕೊಂಡಿದ್ದ.

ಮೊದಲು ಹುಬ್ಬಳ್ಳಿಗೆ ಬಂದವನೇ ವೀರಾಪೂರ ಓಣಿಯಲ್ಲಿರುವ ಹೆ



ಮನೆಗೆ ತೆರಳಿದ್ದಾನೆ. ಬೆಟದೂರಿಗೆ
ಎಂದು ಕರೆದಿದ್ದಾನೆ. ಆದರೆ ಅವನ ಒ
ಮಣಿಯದೇ ಆತನನ್ನು ಸ್ಪಷ್ಟವಾಗಿ ನಿರಾ
ನಿನ್ನ ಸಂಬಂಧವೇ ಬೇಡ ಎಂದು ಉ
ದ್ದಾಳೆ. ಆಗಲೇ ಶುರುವಾಗಿದ್ದು ಶಂಕ
'ಪವಾಡ'ಗಳು.

ಸತತ 3 ದಿನಾ ಕುಡಿದು ಗಾಳಿ
ಮನೆ ಮುಂದೆ ಗಲಾಟೆ ಮಾಡಲು ಶ
ಹಚ್ಚಿಕೊಂಡ. ಮನೆಮಂದಿಗೆಲ್ಲಾ ಬ
ತೋರಿಸಿ ಕೊಲ್ಲುವ ಬೆದರಿಕೆ ಹಾ
ಇದರಿಂದ ಭಯಭೀತರಾದ ಬ

# ನಕಲಿ ಡ್ರಿಂಕ್ಸ್ ಕಿಂಗ್ ರಂಗಸ್ವಾಮಿ ಜೈಲುಪಾಲು...!


ಂಡ್ಯದ ಹೊಳಲು ಸರ್ಕಲ್‌ನ ಬಾರೊಂದರಲ್ಲಿ ಸಪ್ಲೈಯರ್ ಆಗಿ ನಂತರ ಆದೇ ಬಾರ್‌ನ ಕನಾಗಿ, ಸಾರಾಯಿ ಗುತ್ತಿಗೆದಾರನಾಗಿ, ನಂತರ ಇಡೀ ಕ್ಕೆ ನಕಲಿ ಸಾರಾಯಿಯನ್ನು ಕುಡಿಸುತ್ತಾ ಮೆರೆದಾಡಿದ ಡ್ರಿಂಕ್ಸ್ ಕಿಂಗ್ ಸಾರಾಯಿ ರಂಗ ಅಲಿಯಾಸ್ ಮಿಯನ್ನು ಮಂಡ್ಯದ ಪೊಲೀಸರು ಬಂಧಿಸಿದ್ದಾರೆ!

## ರಂಗಸ್ವಾಮಿ ಹಿಂಗಿದ್ದ

ಗಸ್ವಾಮಿ ಹುಟ್ಟಿನಿಂದ ಚಿನ್ನದ ಚಮಚದಲ್ಲಿ ಊಟ ಬೆಳೆದವನೇನಲ್ಲ. ಆದರೆ ಈಗ ಕೋಟಿಕೋಟಿ ಮತ್ತು ಅವ್ಯವಹಾರ ನಡೆಸಬಲ್ಲ ಕುಳ. ಅಷ್ಟೇ ಸಗಾಗದ ವೈರಿಗಳನ್ನು ಲಕ್ಷಲಕ್ಷ ಸುಪಾರಿ ಕೊಟ್ಟು ಲ್ಲ ಕ್ರಿಮಿನಲ್!. ರಂಗ ಬೆಂಗಳೂರಿನ ಮಾಗಡಿಯ ಕೋ ಹಳ್ಳಿಯವ. 30 ವರ್ಷಗಳ ಹಿಂದೆ ಮಂಡ್ಯಕ್ಕೆ ಉದ್ಯೋಗ ಅರಸುತ್ತಾ, ಸಿಕ್ಕಿದ್ದು ಜ್ಯೋತಿ ವೈನ್ಸ್ ಬಾರೊಂದರಲ್ಲಿ ಸಪ್ಲೈಯರ್ ಕೆಲಸ. ಸಪ್ಲೈಯರ್ ಮಾಡುತ್ತಲೇ, ಸರಾಯಿ ದಂಧೆಕೋರರ ಸಹವಾಸ ರಂಗ ತನ್ನ ಕ್ರಿಮಿನಲ್ ಬುದ್ಧಿಯಿಂದ ಬಾರ್ ಮೈತುಂಬ ಸಾಲ ಹೊತ್ತುಕೊಂಡು ಪರಾರಿಯಾಗು ಮಾಡಿಬಿಟ್ಟ. ನಂತರ ಯಾವ ಜ್ಯೋತಿ ವೈನ್ಸ್‌ನಲ್ಲಿ ರ್ ಆಗಿ ಹೊಟ್ಟೆ ಹೊರೆದುಕೊಳ್ಳುತ್ತಿದ್ದನೋ ಬಾರ್‌ಗೆ ತಾನೇ ಮಾಲೀಕನಾಗಿಬಿಟ್ಟ! ಅಷ್ಟರಲ್ಲಾ ಸಾರಾಯಿ ದಂಧೆಕೋರರ ಎಲ್ಲಾ ಗುಣಗಳನ್ನು ಮಾಡಿಕೊಂಡಿದ್ದ ರಂಗಸ್ವಾಮಿ ತನ್ನದೇ ಬಾರ್‌ನಲ್ಲಿ ಮತ್ತು ನಕಲಿ ವೈನ್‌ಗಳನ್ನು ಕುಡಿಸತೊಡಗಿದ.


## ನಕಲಿ ಡ್ರಿಂಕ್ಸ್ ಕಿಂಗ್

ಜ್ಯೋತಿ ಬಾರ್‌ನ ಮಾಲೀಕನಾದ ಮೇಲೆ, ಮತ್ತು ನಕಲೀ ವೈನ್ ಮಾರಾಟ ಮಾಡಿ ಸಿದ ಹಡಬಿಟ್ಟಿ ದುಡ್ಡಿನಲ್ಲಿ ಒಂದರ ಮೇಲೊಂದು ನನ್ನು ತೆಗೆಯತೊಡಗಿದ. ರಾಜ್ಯದ ಹಲವು ಜಿಲ್ಲೆಗಳ ಗುತ್ತಿಗೆಯನ್ನೂ ಸಹ ಹಿಡಿದ. ಜನಕ್ಕೆ



ರಂಗಸ್ವಾಮಿ

ಸಾರಾಯಿಗಿಂತ ಹೆಚ್ಚಾಗಿ ನಕಲಿ ಸಾರಾಯಿಯನ್ನು ಕುಡಿಸಿದ್ದೇ ಹೆಚ್ಚು, ಆದಕ್ಕೇ ಜನರು ಸೆಕೆಂಡ್ಸ್ ರಂಗ ಅಂತಲೂ ಈತನನ್ನು ಕರೆಯುತ್ತಿದ್ದರು. ಸಾರಾಯಿ ವ್ಯವಹಾರ ವಿಸ್ತರಣೆಯಾದ ನಂತರ ಮತ್ತಷ್ಟು ಹಡಬಿಟ್ಟಿ ಹಣ ಸಂಪಾದಿಸತೊಡಗಿದ. ಅಷ್ಟರಲ್ಲಾಗಲೇ ಸಾರಾಯಿ ಗುತ್ತಿಗೆದಾರನಾಗಿದ್ದ ಹನಕೆರೆಯ ಸಾರಾಯಿ ನಾಗೇಂದ್ರನಿಗೂ ಸವಾಲಾಗುವಷ್ಟು ಬೆಳೆಯ ತೊಡಗಿದ್ದ. ರೈತರ ನೀರಾ ಚಳುವಳಿಯ ಸಂದರ್ಭದಲ್ಲಿ ಈ ರಂಗಸ್ವಾಮಿ ತನ್ನದೇ ಖಾಸಗಿ ಗೂಂಡಾಪಡೆಗಳನ್ನು ಕಟ್ಟಿಕೊಂಡು ಮಂಡ್ಯ, ಗದಗ್ ರಾಯಚೂರು, ಬಿಜಾಪುರ, ಗುಲ್ಬರ್ಗ, ಹಾಸನ ಸೇರಿದಂತೆ ರಾಜ್ಯದ ಹಲವು ಜಿಲ್ಲೆಗಳಲ್ಲಿ ರೈತರ ಮೇಲೆ ತನ್ನ ಗೂಂಡಾಪಡೆಗಳನ್ನು ಬಿಟ್ಟು ಪೀಡಿಸ ತೊಡಗಿದ. ಈ ಗೂಂಡಾ ಪಡೆಗೆ ಬಳಕೆಯಾದವರೆಂದರೆ, ಪಾತಕಿಗಳಾದ ಜಡೇಜಾ ರವಿ, ಅಶೋಕ ಪೈ, ಬಯ್ಯಾಸ್ವಾಮಿ, ಬಂಗಾರಪ್ಪರಂತಹ ಹಲವು ಪಾತಕಿಗಳು. ಇದಕ್ಕೆ ಸರಿಸಮಾನವಾಗಿ ಖಾಸಗಿ ಪಡೆ ಕಟ್ಟಿದ್ದು ಮತ್ತೊಬ್ಬ ಸಾರಾಯಿ ಗುತ್ತಿಗೆದಾರ ಸಾರಾಯಿ ನಾಗೇಂದ್ರ. ಈತನ ಪಡೆಯಲ್ಲಿದ್ದವರು ಮತ್ತದೇ ಪಾತಕಿಗಳಾದ ಶಂಕ್ರ, ಶಿವರಾಮ, ದತ್ತನಂತಹ ನಟೋರಿಯಸ್‌ಗಳು. ಈ ಇಬ್ಬರು ಸಾರಾಯಿ ದಂಧೆಕೋರರದ್ದು ಒಂದೇ ಕನವಲಿಕೆ, ತಮ್ಮ ಸಾರಾಯಿ ಸಾಮ್ರಾಜ್ಯ ವಿಸ್ತರಣೆ. ಇದಕ್ಕೆ ಇವರು ಬಳಸಿದ್ದು ಭೂಗತ ಪಾತಕಿಗಳನ್ನು.






## ಸಾರಾಯಿ ರಂಗ V/s ಸಾರಾಯಿ ನಾಗೇಂದ್ರ


ಮಂಡ್ಯದಲ್ಲಿ ಪಾತಕ ಲೋಕ ಪರಿಚಯಿಸಿದ್ದರ ಕೀರ್ತಿ ಮಾಜಿ ಸಚಿವ ಆತ್ಮಾನಂದನ ಫ್ಯೂಡಲ್ ಫ್ಯಾಮಿಲಿಗೆ ಸಲ್ಲುತ್ತದೆ. ಆದರೆ ಇದಕ್ಕೆ ನೀರು, ಗೊಬ್ಬರ ಹಾಕಿ ಸಮೃದ್ಧಿ ಮಾಡಿದ್ದು ಇದೇ ಸಾರಾಯಿ ರಂಗ, ಸಾರಾಯಿ ನಾಗೇಂದ್ರನ ಹಡಬಿಟ್ಟಿ ದುಡ್ಡು.

ರಂಗಸ್ವಾಮಿ ಮತ್ತು ನಾಗೇಂದ್ರ ಮೊದಮೊದಲು ಒಟ್ಟೊಟ್ಟಿಗೆ ತಮ್ಮ ಜಂಟಿ ವ್ಯವಹಾರ ನಡೆಸಿ, ನಂತರ ದೂರವಾದವರು. ಇದು ತಮ್ಮ ವೃತ್ತಿ ವೈಷಮ್ಯಕ್ಕೆಂದು ಮತ್ತೆ ಹೇಳಬೇಕಾಗಿಲ್ಲ. ತಮ್ಮ ಸಾರಾಯಿ ದಂಧೆಯ ತೆವಲುಗಳಿಗೆ ಪಾತಕಿಗಳನ್ನ ಚೆನ್ನಾಗಿ ಬಳಸಿಕೊಂಡವರು ಇದೇ ರಂಗ ಮತ್ತು ನಾಗೇಂದ್ರ. ಆದರೆ ವಿಪರ್ಯಾಸ ಅಂದರೆ ತಮ್ಮ ಹಣದಿಂದಲೇ ಬೆಳೆದ ಪಾತಕಿಗಳಿಂದಲೇ ಸಾರಾಯಿ ನಾಗೇಂದ್ರ ಮೈಸೂರಿನಲ್ಲಿ ತನ್ನ ಹೆಂಡತಿ ಎದುರೇ ಜಡೇಜಾ ರವಿ ಹತ್ಯೆಯ ಪ್ರತೀಕಾರಕ್ಕೆ ಬಲಿಯಾಗಿದ್ದು, ರಂಗಸ್ವಾಮಿಯೇ ಸಾಕಿದ ಪೈ ಕಡೆ ಹುಡುಗರಿಂದ ರಂಗಸ್ವಾಮಿಯ ಮಗ ಮಹೇಶ್ ಅನ್ಯಾಯವಾಗಿ ಹತ್ಯೆಯಾಗಿದ್ದು.

ಶಂಕ್ರ, ಶಿವರಾಮ ಎಂಬ ಪಾತಕಿ ಸಹೋದರರನ್ನು ಮತ್ತು ದತ್ತನನ್ನು ನಾಗೇಂದ್ರ ಫೈನಾನ್ಸ್ ಮಾಡಿ ಪೋಷಿಸಿದರೆ, ಜಡೇಜಾ ರವಿ, ಅಶೋಕ ಪೈ, ಬಂಗಾರಪ್ಪ ಶಿವ, ಕಪ್ಪೆಗಳೆಂಬ ಪರಮ ಪಾತಕಿಗಳನ್ನ ರಂಗಸ್ವಾಮಿ ಪೋಷಿಸಿದ.

ರಂಗಸ್ವಾಮಿ ತನ್ನೆಲ್ಲಾ ವ್ಯವಹಾರಗಳನ್ನು ಕಾನೂನು ಬದ್ಧಗೊಳಿಸಿಕೊಳ್ಳಲು ಬಹಳಷ್ಟು ಪ್ರಯತ್ನ ಮಾಡಿ ವಿಫಲನಾದ. ತನ್ನ ವೈರಿ ನಾಗೇಂದ್ರ ನಂತೆ ತಾನೂ ರಾಜಕಾರಣಿಯಾಗಬೇಕೆಂಬ ಹಟಕ್ಕೆ ಬಿದ್ದು ಮೊದಲಿಗೆ ದುಬೈನ ಜಫ್ರುಲ್ಲಾನ ಜೊತೆ ಸೇರಿ ದಲಿತ, ಹಿಂದುಳಿದ, ಅಲ್ಪಸಂಖ್ಯಾತರ ಒಕ್ಕೂಟ ಅಂತೆಲ್ಲಾ ಮಾಡಿ, ಕಾಂಗ್ರೆಸಿಂದ ಟಿಕೆಟ್ ಖರೀದಿಸಿ ತನ್ನ ಮಗನನ್ನು ಬೂದನೂರು ಜಿ.ಪಂ.ಕ್ಷೇತ್ರದಿಂದ ಗೆಲ್ಲಿಸಿಕೊಂಡ. ಅಷ್ಟರಲ್ಲಾಗಲೇ ತನ್ನ ಸಾರಾಯಿ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದ ಅಶೋಕನನ್ನು ದೂರ ಮಾಡಿಕೊಂಡಿಯಾಗಿತ್ತು, ತನ್ನ ಮಗ ಶ್ರೀನಿವಾಸ್‌ನನ್ನು ಕಲ್ಲಹಳ್ಳಿಯಿಂದ ಕೌನ್ಸಿಲರ್ ಮಾಡಲು ಎದುರಾಳಿಯಾಗಲಿದ್ದ ಅಶೋಕ್ ಪೈಯನ್ನು ಬಡ್ಡಿಪಾಪಮ್ಮಳ ಕೇಸ್‌ನಲ್ಲಿ ಸಿಕ್ಕಿಸಿ ಪೈ ಕೌನ್ಸಿಲರ್ ಆಗುವ ಆಸೆ ಕೊಚ್ಚಿಹೋಗುವಂತೆ ಮಾಡಿದ. ಇದಕ್ಕೆ ಪೊಲೀಸ್ ಇಲಾಖೆಯನ್ನೇ ಬಳಸಿಕೊಂಡಿದ್ದ ಎಂಬ ಆರೋಪಗಳಿವೆ.





ನಾಗಣ್ಣ

ನಂತರ ಅಶೋಕ್ ಪೈಯನ್ನು ಮುಗಿಸಲು ಜಡೇಜಾ ರವಿಯ ಮೂಲಕ ಬಂಗಾರಪ್ಪನ ಟೀಂ ಬಿಟ್ಟ. ಇಡೀ ಟೀಂ ಪೊಲೀಸರ ಬಲೆಗೆ ಬಿದ್ದು ಅಶೋಕ ಪೈ ಜೀವ ಉಳಿದಿತ್ತು. ಈ ವಾರ್ ಇಲ್ಲಿಗೆ ಮುಗಿಯಲಿಲ್ಲ, ಅಶೋಕ ಪೈ ಸುಮ್ಮನೆ ಕುಳಿತುಕೊಳ್ಳಲಿಲ್ಲ, ಜಡೇಜಾನಿಂದ ಹತ್ಯೆಗೊಳಗಾಗಿದ್ದ ಸಹೋದರರಾದ ಶಂಕ್ರ ಮತ್ತು ಶಿವರಾಮ, ಮನು, ಚೇತನ ಮತ್ತು ಬೆಂಗಳೂರಿನ ಕೋತಿರಾಮನ ಕಡೆಯ ಹಳೆ ಪಾತಕಿಗಳೊಂದಿಗೆ ಸೇರಿ ಜಡೇಜಾರವಿಯನ್ನು ಮುಗಿಸಿದ ಪೈ ಮತ್ತು ಇಡೀ ಟೀಂ ಜೈಲುಪಾಲಾಯಿತು.

ಇದರಲ್ಲಿ ಜಡೇಜಾನನ್ನು ಮುಗಿಸಲು ಪೈಗೆ ಸಾರಾಯಿ ನಾಗೇಂದ್ರನೇ ಫೈನಾನ್ಸ್ ಮಾಡಿದ್ದನೆಂದು ಹುಯಿಲೆಬ್ಬಿಸಿ ಜಡೇಜಾ ಅಕ್ಕನ ಮಗ ಡೇಂಜರ್ ಶಿವನಿಗೆ ಎತ್ತಿಕಟ್ಟಿದ. ನಾಗೇಂದ್ರ ಮೈಸೂರಿನ ರಾಮಕೃಷ್ಣ ಆಶ್ರಮಕ್ಕೆ ತನ್ನ ಮಗನನ್ನು ನೋಡಿಬರಲು ಹೆಂಡತಿ ವಿದ್ಯಾಳ ಜೊತೆ ಹೋಗಿದ್ದಾಗ ವಿಲವಿಲ ಒದ್ದಾಡಿ ಜೀವಬಿಡುವಂತೆ ಮಾಡಿದ್ದು ಇದೇ ಖತರ್ನಾಕ್ ರಂಗಸ್ವಾಮಿ.

2008ರ ವಿಧಾನಸಭಾ ಚುನಾವಣೆಯಲ್ಲಿ ಬಿಎಸ್‌ಪಿಯಿಂದ ಟಿಕೆಟ್ ಖರೀದಿಸಿ ಮೇಲುಕೋಟೆ ಕ್ಷೇತ್ರದಲ್ಲಿ ಚುನಾವಣೆಗೆ ನಿಂತು ಎಮ್ಮೆಲ್ಲೆಯಾಗುವ ಕನಸು ಕಂಡಿದ್ದ ರಂಗಸ್ವಾಮಿ. ಆದರೆ ಚುನಾವಣೆ ನಡೆಯುವ ಮುನ್ನ ರಂಗಸ್ವಮಿಯನ್ನೇ ಮುಗಿಸುವಂತೆ ಪೈ ಜೈಲಿನಿಂದಲೆ ಸ್ಕೆಚ್ ಹಾಕಿದ್ದ. ಅದು ಜಸ್ಟ್‌ಮಿಸ್ ಆಗಿ ಹರಿಪ್ರಿಯಾ ಹೋಟೆಲ್ ಮುಂದೆ ಜಿ.ಪಂ. ಸದಸ್ಯ ಮಗ ಮಹೇಶ್ ತಲೆ ಉರುಳಿತು. ಅತ್ತ ಚುನಾವಣೆಯಲ್ಲೂ ಹೀನಾಯವಾಗಿ ಸೋತ, ಇತ್ತ ಪ್ರೀತಿಯ ಮಗನನ್ನು ಕಳೆದುಕೊಂಡ.

## ಬಂಧನ ಯಾಕೆ?

ತನ್ನ ದಂಧೆಗೆ ಪಾತಕಿಗಳನ್ನು ಬಳಸಿಕೊಂಡು ವಿರೋಧ ಕಟ್ಟಿಕೊಂಡಿದ್ದ, ಹಲವು ಕೊಲೆಗಳಿಗೆ ಕಾರಣನಾಗಿದ್ದ, ತನ್ನ ವೈರಿಗಳನ್ನು ತೆರೆಮರೆಯಲ್ಲಿ ನಿಂತು ಮುಗಿಸಲು ಫೈನಾನ್ಸ್ ಫೀಡ್ ಮಾಡಿದ್ದರೂ ಬಚಾವಾಗುತ್ತಿದ್ದ ನಕಲಿ ಸಾರಾಯಿ ದಂಧೆಕೋರ ರಂಗಸ್ವಾಮಿಯನ್ನು 27-08-10ರಂದು ಮಂಡ್ಯದ ಪೊಲೀಸರು ಬಂಧನ ಮಾಡಿದ್ದಾರೆ.

ಅಶೋಕ ಪೈನನ್ನು ಮಂಡ್ಯ ಕೋರ್ಟ್‌ನಲ್ಲಿ ಮುಗಿಸಲು ಸಂಚು ರೂಪಿಸಿದಕ್ಕೆ, ಸಾರಾಯಿ ನಾಗೇಂದ್ರನ ತಮ್ಮ ಮಹೇಶ್‌ನನ್ನು ಮುಗಿಸಲು ಮಚ್ ಚೋರನಿಗೆ 50 ಸಾವಿರಗಳನ್ನು ಪಿಸ್ತೂಲು ಖರೀದಿಸಲು ನೀಡಿದ್ದಕ್ಕೆ ಬಲವಾದ ಸಾಕ್ಷ್ಯಗಳು ಸಿಕ್ಕಿವೆ. ಪಿಸ್ತೂಲಿಂದ ಅಮರಾವತಿ ಪೆಟ್ರೋಲ್‌ಬಂಕ್ ಬಳಿ ಹೆಚ್.ಪಿ.ಮಹೇಶ್ ಮೇಲೆ ಹತ್ಯಾಯತ್ನ ನಡೆಸಿದ್ದು, ನಂತರ ಹಾಸನದ ಬಯ್ಯಸ್ವಾಮಿಯನ್ನು ಮುಗಿಸಲು ಹೋಗಿ ಅಮಾಯಕ ಅಪ್ಜಲ್ ಪಾಷಾನ ಕೊಲೆಯಾಗಿದ್ದರ ಹಿಂದೆ ರಂಗನ ಕೈವಾಡವಿದೆ. ಇದೆಲ್ಲದರ ರೂವಾರಿ ಡೇಂಜರ್ ಶಿವನಿಗೆ ಫೈನಾನ್ಸ್ ಮಾಡಿದ್ದಕ್ಕಾಗಿ ಈ ಎಲ್ಲಾ ಪ್ರಕರಣಗಳಲ್ಲಿನ ಆರೋಪಿಗಳನ್ನು ಮತ್ತು ಸಾಕ್ಷ್ಯಗಳನ್ನು ಬಳಸಿಕೊಂಡು ಸರ್ಕಲ್ ಇನ್ಸ್‌ಪೆಕ್ಟರ್ ಜಯಮಾರುತಿಯವರು ರಂಗಸ್ವಾಮಿ ಜೈಲಿಗೆ ಹೋಗುವಂತೆ ಮಾಡಿದ್ದಾಗಿದೆ.

ರಂಗಸ್ವಾಮಿಯ ಮೇಲೆ ಜಡಿದಿರುವ ಕೇಸ್ ಸಾಮಾನ್ಯವಲ್ಲ, ಐಪಿಸಿ ಮತ್ತು ಶಸ್ತ್ರಾಸ್ತ್ರ ಕಾಯ್ದೆ ಕಲಂಗಳನ್ನು ಜಾಮೀನು ಸಿಗದ ಹಾಗೆ ಮಾಡಲಾಗಿದೆ. ರಂಗಸ್ವಾಮಿಯ ದೋಸ್ತ್ ಪತ್ರಕರ್ತ ದಿಲೀಪ್ ಎನ್ನುವವನೂ ಸಿಕ್ಕಿಬಿದ್ದಿದ್ದಾನೆ.

ಹಿಂದಿಗಿಂತ ಮಂಡ್ಯ ಪೊಲೀಸರು ಎಚ್ಚರದಿಂದಲೇ ಕೆಲಸ ಮಾಡಿದ್ದಾರೆ. ಆದರೆ ಜೈಲುಗಳಿಂದಲೇ ಎಲ್ಲಾ ಸ್ಕೆಚ್ಚುಗಳು ರೂಪುಗೊಂಡು ಹೊರಗೆ ಪಿಸ್ತೂಲುಗಳ ಮೊರೆತ ನಡೆಯಲು, ಲಾಂಗುಗಳು ಝಳಪಿಸಲು ಜೈಲು ಅಧಿಕಾರಿಗಳ ಶಾಮೀಲಿದೆ ಎನ್ನುವ ಆರೋಪಗಳಿವೆ. ಮಂಡ್ಯದ ಭೂಗತ ಪಾತಕಿಗಳಲ್ಲಿ ಜೈಲುಗಳಲ್ಲೇ ತಲೆಗಳುರುಳುವ ಮಾತುಗಳು ಕೇಳಿಬರುತ್ತಿವೆ. ಒಂದಂತೂ ಸತ್ಯ ಮಂಡ್ಯದ ಭೂಗತ ಲೋಕ ಮಾತ್ರ ಸುಮ್ಮನಿಲ್ಲ! ಇದಕ್ಕೆ ಏನನ್ನೋಣ...????

• ವರದಿಗಾರ

---

ಮಲಿ ಗಾಳಿಶ್ರೀಯೊಂದಿಗೆ ನೇರವಾಗಿ ಹತ್ತಿರದ ಪೊಲೀಸ್ ಠಾಣೆಗೆ ಹೋಗಿ ಶಂಕ್ರಪ್ಪನ ವಿರುದ್ಧ ಕೊಟ್ಟರು.

ವಿಷಯ ತಿಳಿದ ಕೂಡಲೇ ಕುಡಿದ ಅಮಲಿನಲ್ಲಿ ಠಾಣೆಗೆ ವಕ್ಕರಿಸಿದ ಶಂಕ್ರಪ್ಪ ಅಲ್ಲಿ ಹೆಂಡತಿ ಯನ್ನು ಎಳೆದಾಡಿ ತನ್ನ ಬಂದೂಕಿನ ಮುಂದಿರುವ ಂದ ಅವಳನ್ನು ಕೊಲೆ ಮಾಡಲು ಮುಂದಾದ. ಇದ್ದ ಇಬ್ಬರು ಮಹಿಳಾ ಪೇದೆಗಳು ರುದ್ಧ ಕ್ರಮಕ್ಕೆ ಮುಂದಾದಾಗ ಆತ ದ್ದ ಚೀಲವೊಂದನ್ನು ಅಲ್ಲಿಯೇ ಎಸೆದು ಾದ. ಇದೆಲ್ಲಾ ನಡೆದಿದ್ದು 29ರ -30ರ ಸುಮಾರಿಗೆ. ಆತ ಎಸೆದು ಆ ಚೀಲದಲ್ಲೂ ಎರಡು ಸುತ್ತು ಗಳು ಸಿಕ್ಕಿವೆ.



ಗಾಳಿಶ್ರೀ

ಬೆಳವಣಿಗೆಯಿಂದ ಆಕ್ರೋಶಗೊಂಡ ಇದಕ್ಕೆಲ್ಲಾ ಯಲ್ಲಪ್ಪ ಮತ್ತು ಅವನ ಗೀತಾಳೇ ಕಾರಣ ಎಂದು ಭಾವಿಸಿ ಅಲ್ಲಿಂದ 10 ದೂರವಿರುವ ಬೆಟದೂರಿಗೆ ನಡೆದುಕೊಂಡೇ ದ್ದಾನೆ. ನಸುಕಿನ 3 ಗಂಟೆ ಸುಮಾರಿಗೆ ಯಲ್ಲಪ್ಪನ ಬಾಗಿಲು ತಟ್ಟಿದ್ದಾನೆ. ಬಾಗಿಲು ತೆರೆದ ಗೀತಾ ಮಾಡತೀಯಾ? ಹೇಗಿದ್ದೀಯಾ? ಈಗ ಹೇಗೆ ಎಂದು ಕೇಳುವಷ್ಟರಲ್ಲೇ ಬ್ಯಾಗಿನಿಂದ ರಿವಾಲ್ವರ್ ಯಲ್ಲಪ್ಪನ ತಲೆ ಚೂರು ಮಾಡಿದ್ದಾನೆ. ಅಲ್ಲಿಯೇ ಆತನ ಮಗ ಸೋಮಪ್ಪನಿಗೂ ಶೂಟ್ ನೆ. ಇದರಿಂದ ಗಾಬರಿಗೊಂಡ ಐಶ್ವರ್ಯ (9) (6)ರ ಮೇಲೂ ಗುಂಡಿನ ಮಳೆಗರೆದಿದ್ದಾನೆ. ಗಲೇ ಗೀತಾ ಪಕ್ಕದ ಮನೆಯಲ್ಲಿ ಅವಿತುಕೊಂಡಿ ಬದುಕಿದ್ದಾಳೆ. ಇಷ್ಟೆಲ್ಲಾ ಅವಾಂತರವಾದರೂ ದೂರ ಗ್ರಾಮ ಸುಖ ನಿದ್ರೆಯಲ್ಲಿತ್ತು, ಯಾರಿಗೂ ಇದರ ಸುಳಿವೇ ಸಿಕ್ಕಿಲ್ಲ, ಶೂಟೌಟ್ ಮಾಡಿದ ಶೂರ ಶಂಕ್ರಪ್ಪ ಗ್ರಾಮದ ಒಬ್ಬರ ಬೈಕ್ ತೆಗೆದುಕೊಂಡು ಎಸ್ಕೇಪ್ ಆಗಿದ್ದಾನೆ.

ಸದಾ ಶಂಕ್ರಪ್ಪನ ಹಿತವನ್ನೇ ಬಯಸಿ ಆತ ಮಾಡಿದ ಎಲ್ಲಾ ಹಲ್ಕಾ ದಂಧೆಗಳನ್ನು ಮುಚ್ಚಿ ಸ್ವತಃ ತಾನೇ ನಿಂತು ಆತನಿಗೆ ಮದುವೆ ಮಾಡಿಸಿದ್ದ ಸೋದರ ಸಂಬಂಧಿ ಮಾವ ಯಲ್ಲಪ್ಪನ ಮೇಲೂ ಶಂಕ್ರಪ್ಪ ಸಂಶಯ ಪಟ್ಟಿದ್ದಾನೆ. ತವರಿಗೆ ಮರಳಿದ ಹೆಂಡತಿ ಗಾಳಿಶ್ರೀ ಬೆಟದೂರಿಗೆ ಬರಲು ನಿರಾಕರಿಸಿದ್ದೇ ತಡ "ಯಲ್ಲಪ್ಪನೊಂದಿಗೆ ನಿನ್ನ ಸಂಬಂಧವಿದೆ" ಎಂದು ಗದರಿದ್ದಾನೆ.

ಅಸಲಿಗೆ ಈ ಶಂಕ್ರಪ್ಪ ಸಿಆರ್‌ಪಿಎಫ್ ಸೇರುವುದಕ್ಕೂ ಮೊದಲು ಪಕ್ಕಾ ರೌಡಿ ಆಗಿದ್ದಾತ. ಹುಬ್ಬಳ್ಳಿ ಸೆಟ್ಲಮೆಂಟ್ ಏರಿಯಾ ದರಲ್ಲಿ ಈಗಲೂ ಇವನ ಹೆಸರೂ ಚಾಲ್ತಿಯ ಲ್ಲಿದೆ. ಶಂಕ್ರಪ್ಪನ ತಂದೆ ತಿಪ್ಪಣ್ಣ ಕೂಡಾ ಸೆಟ್ಲಮೆಂಟ್ ಏರಿಯಾದಲ್ಲಿ ಮೆರೆದವನೇ. ಈ ಹಿಂದೆ ಹುಬ್ಬಳ್ಳಿಯಲ್ಲಿ ಹಾಡುಹಗಲೇ ಕುಡಗೋಲಿನಿಂದ ಒಬ್ಬನನ್ನು ಕೊಚ್ಚಿ ನಾಲ್ಕು ವರ್ಷ ಪರಾರಿಯಾಗಿದ್ದ. ಕೊನೆಗೆ ಪೊಲೀಸರ ಕೈಗೆ ಸಿಕ್ಕು ಒಂದು ವರ್ಷ ಜೈಲುವಾಸ ಅನುಭವಿಸಿ ಬಂದಿದ್ದಾನೆ ಶಂಕ್ರಪ್ಪನ ತಂದೆ.

ಬೆಟದೂರಲ್ಲಿ ಶೂಟೌಟ್ ಮಾಡಿ ಎಸ್ಕೇಪಾಗಿದ್ದ ಯೋಧ ಶಂಕ್ರಪ್ಪ ದಾವಣಗೆರೆಯಲ್ಲಿ ಪೊಲೀಸರಿಗೆ ಸಿಕ್ಕಿ ಬಿದ್ದಿದ್ದಾನೆ. ಅಲ್ಲಿಯೂ ಎರಡು ಬಾರಿ ಫೈರ್ ಮಾಡಿದ್ದಾನೆ. ಇದರಿಂದ ಕಾನಸ್ಟೇಬಲ್ ಮಂಜುನಾಥ ಗಾಯಗೊಂಡಿದ್ದಾರೆ. ಮಾವ, ಅಮಾಯಕ ಮಕ್ಕಳನ್ನು ಕೊಂದ ಇಂತವನಿಂದ ಹೆಂಡತಿ ದೂರ ಉಳಿಯದೇ ಜೊತೆಗೆ ಸಂಸಾರ ಮಾಡುವುದು ಸಾಧ್ಯವೇ?


- ಹುರುಳಿಕುಪ್ಪಿ ವಿನಯ

### ...ಹಿಳಾ ...ಣೆಯ ...ರ್ಲಕ್ಷ್ಯ

ಗಾಳಿಶ್ರೀ ಹುಬ್ಬಳ್ಳಿಯ ಮಹಿಳಾ ಠಾಣೆಯಲ್ಲಿ ಶಂಕ್ರಪ್ಪನ ವಿರುದ್ಧ ದೂರು ದಾಖಲಿಸಿದ್ದಳು. ಆದರೆ ಠಾಣೆಯ ಪೊಲೀಸರು ಅದನ್ನು ಸೀರಿಯಸ್ಸಾಗಿ ತೆಗೆದುಕೊಳ್ಳಲೇ ಇಲ್ಲ, ಮಹಿಳಾ ಪೊಲೀಸರಿಗೆ ರಿವಾಲ್ವರ್ ತೋರಿಸಿ ಓಡಿಹೋದ ಶಂಕ್ರಪ್ಪನ ಕುರಿತು ಎಲ್ಲ ಠಾಣೆಗಳಿಗೆ ಶೀಘ್ರವಾಗಿ ಮಾಹಿತಿ ರವಾನಿಸಿದ್ದರೆ ಈ ದುರಂತ ನಡೆಯುತ್ತಲೇ ಇರಲಿಲ್ಲ, ಮಹಿಳಾ ಠಾಣೆಯ ಅಧಿಕಾರಿ ಶ್ರೀಮತಿ ಛಲವಾದಿ ಮೇಡಮ್‌ಗೆ 'ಸ್ಪೈಡ್‌ಮನಿ' ಬಗ್ಗೆ ಕಾಳಜಿಯೇ ಹೊರತು ಅಪರಾಧಿಗಳ ಬಂಧನವಲ್ಲ, ಮಹಿಳೆಯರ ರಕ್ಷಣೆಯಲ್ಲ...

# ಮಲೆಮಹದೇಶ್ವರ ಬೆಟ್ಟದಲ್ಲಿ ಬ್ರಾಹ್ಮಣೀಕರಣದ ಸಂಚು!

ಶರಣ ತತ್ವಗಳ ತಳಹದಿಯಲ್ಲಿ ರೂಪುತಳೆದಿರುವ ಮಲೈಮಹದೇಶ್ವರ ಬೆಟ್ಟದಲ್ಲಿ ಪುರೋಹಿತಶಾಹಿಯ ಪಾರುಪತ್ಯೆಗೆ ಚಾಲನೆ ದೊರೆತಿದೆ. ಇದರನ್ವಯ ಬೆಟ್ಟದ ಬಾಜಿನಲ್ಲೊಂದು ಅನ್ನಪೂರ್ಣೇಶ್ವರಿಯ ಗುಡಿ ತೆರೆಯುವ ಹುನ್ನಾರ ನಡೆದು ಲಾಗಾಯ್ತಿನ ಪರಂಪರೆಯನ್ನು ಮುಸುಕಾಗಿಸುವ ಪ್ರಯತ್ನಗಳೂ ನಡೆದಿವೆ. ಇಂತಹುದೊಂದು ಘನಕಾರ್ಯದ ಮುಂದಾಳತ್ವವನ್ನು ಖುದ್ದು ಮುಜರಾಯಿ ಇಲಾಖೆಯ ಮುಖಂಡಿಗಳೇ ವಹಿಸಿದ್ದರೆ, ದೇವಳದ ಇಓ ವಿಜಯಾ ಎಂಬಾಕೆ ಪೌರೋಹಿತ್ಯದ ಜವಾಬ್ದಾರಿ ಹೊತ್ತು ಕೃತಾರ್ಥಳಾಗಿದ್ದಾಳೆ!



ಆರ್.ನರೇಂದ್ರ
ಶಾಸಕರು,
ಹನೂರು ವಿಧಾನಸಭಾ ಕ್ಷೇತ್ರ


ಈ ಮಲೈಮಹದೇಶ್ವರ ಬೆಟ್ಟಕ್ಕೆ ಪಾರಂಪರಿಕ ಜಾಡ್ಯಗಳ ವಿರುದ್ಧದ್ದೊಂದು ಇತಿಹಾಸವಿದೆ. ಇವತ್ತು ಮೇಲ್ವರ್ಗದ ಮಂದಿ ಹಾಗೂ ಪುರೋಹಿತಶಾಹಿ ಮನಸ್ಸುಗಳು ಯಾವ್ಯಾವುದನ್ನು ಅಸಹ್ಯ ಅಂತ ದೂರವಿಟ್ಟಿದೆಯೋ ಅದನ್ನೆಲ್ಲ ಸಹ್ಯವಾಗಿಸಿ ಬದುಕಿದ ಪರಂಪರೆ ಬೆಟ್ಟಕ್ಕಿದೆ. ಪುರೋಹಿತಶಾಹಿಗಳಿಂದ ದೂರವಿಟ್ಟಿದ್ದ ಸಮುದಾಯಗಳಿಗೆಲ್ಲಾ ಧಾರ್ಮಿಕ ಚೈತನ್ಯ ನೀಡಿ ಸೆಳೆದುಕೊಂಡ ಹೆಚ್ಚುಗಾರಿಕೆಯೂ ಇದೆ. ಆದುದರಿಂದಲೇ ದಲಿತ-ಶೂದ್ರ ಸಮುದಾಯದ ನೆಚ್ಚಿನ, ವೈವಿಧ್ಯಮಯ ಕ್ಷೇತ್ರವಾಗಿ ಮೇಳೈಸುತ್ತಿದೆ.

ಇಷ್ಟೆಲ್ಲಾ ವೈವಿಧ್ಯತೆಯ ಬುಡಕ್ಕೆ ಪುರೋಹಿತಶಾಹಿಯ ಕೊಡಲಿ ಬೀಸಿ ಹಾಳುಗೆಡಹುವ ವ್ಯವಸ್ಥಿತ ಸ್ಕೆಚ್ಚೊಂದು ಚಾಲ್ತಿಗೆ ಬಂದಿದೆ. ಅದು ಅನ್ನಪೂರ್ಣೇಶ್ವರಿ ದೇವಿಯ ಪ್ರತಿಷ್ಠಾಪನೆಯೆಂಬ ನಾಟಕದೊಂದಿಗೆ ಅನಾವರಣಗೊಂಡಿದೆ. ಅನ್ನಪೂರ್ಣೇಶ್ವರಿಯ ವಿಚಾರಕ್ಕೆ ಬಂದರೆ, ನಾಡಿನಲ್ಲಿರುವ ಈ ಗುಡಿಗಳೊಳಕ್ಕೆ ದಲಿತರು-ಶೂದ್ರರಿಗೆ ಪ್ರವೇಶವಿಲ್ಲ. ಒಂದು ವೇಳೆ ದೇವರ ದರ್ಶನಕ್ಕೆ ಅವಕಾಶ ನೀಡಿದರೂ ಬಟ್ಟೆ ಬಿಚ್ಚಿ ಜನಿವಾರದ ಇರುವಿಕೆಯನ್ನು ಖಚಿತಪಡಿಸಿಕೊಳ್ಳುವ ಕರ್ಮ ಕಡ್ಡಾಯವೆಂಬಂತಾಗಿದೆ.

ಇಂಥಾ ಪೀಡೆಯನ್ನು ಶರಣ ಸಂಸ್ಕೃತಿಯ ಮಲೈಮಹದೇಶ್ವರ ಬೆಟ್ಟಕ್ಕೂ ವಿಸ್ತರಿಸುವ ಅಂಗವಾಗಿಯೇ ಅನ್ನಪೂರ್ಣೇಶ್ವರಿ ಪ್ರತಿಷ್ಠಾಪನೆಯ ನಾಟಕ ಶುರುವಾಗಿದೆ. ಇಓ ವಿಜಯಾ ತನ್ನ ಮೂಲ ಬ್ರಾಹ್ಮಣ ಬುದ್ಧಿಗನುಗುಣವಾಗಿ ಈ ಕರ್ಮಕಾಂಡಕ್ಕೆ ಚಾಲನೆ ನೀಡಿದ್ದಾಳೆ. ಇದರನ್ವಯ ಬೆಟ್ಟದ ಬಾಜಿನಲ್ಲಿ ಅಂತರ ಗಂಗೆತೀರದಲ್ಲಿರುವ ಬಲಮುರಿ ಗಣಪತಿ ಮಂಟಪದ ಪಕ್ಕದಲ್ಲಿ ಅನ್ನಪೂರ್ಣೇಶ್ವರಿಯನ್ನು ಪ್ರತಿಷ್ಠಾಪಿಸಲು ಯೋಜಿಸಲಾಗಿತ್ತು. ಇದಕ್ಕೆ ಮುಜರಾಯಿ ಇಲಾಖೆಯ ಕಮಿಷನರ್ ಕಚೇರಿಯ ರಾಮಣ್ಣ ನಾಯಕ್ ಎಂಬ ನಾಲಾಯಕ್ ಆಸಾಮಿಯೂ ಸಾಥ್ ನೀಡಿದ್ದ.

ಅದೃಷ್ಟವೆಂಬಂತೆ ಈ ಸಂಚು ಭಕ್ತರಿಗೆಲ್ಲಾ ಸಕಾಲದಲ್ಲಿ ತಿಳಿದುಹೋಗಿದೆ. ದೇವಾಲಯದ ಮಾಜಿ ಧರ್ಮದರ್ಶಿ ಹಾಗೂ ತಾಲ್ಲೂಕು ಪಂಚಾಯ್ತಿ ಸದಸ್ಯ ತಿಮ್ಮಜಿಪುರ ಪುಟ್ಟಣ್ಣ ಬಹಿರಂಗ ವಿರೋಧ ವ್ಯಕ್ತಪಡಿಸಿದ್ದಾರೆ. ವಿಜಯಾ ಆಗಲಿ, ಮುಜರಾಯಿ ಇಲಾಖೆಯಾಗಲಿ, ಆಡಳಿತ ಮಂಡಳಿ ಪ್ರಮುಖರು, ಊರ ಮುಖಂಡರು ಹಾಗೂ ಭಕ್ತಾದಿಗಳನ್ನಾರನ್ನೂ ಲೆಕ್ಕಕ್ಕೆ ತೆಗೆದುಕೊಂಡಿಲ್ಲ. ಇದರಿಂದಾಗಿ ಈ ಎಲ್ಲಾ ಜನರೂ ಸಹ ಅನ್ನಪೂರ್ಣೇಶ್ವರಿ ಪ್ರತಿಷ್ಠಾಪನೆಗೆ ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ. ಈ ಸಂಚಿನ ವಿರುದ್ಧ ಸಾಲೂರು ಮಠದ ಗುರುಸ್ವಾಮಿ ಹಾಗೂ ಮಹಾದೇವ ಸ್ವಾಮಿಗಳೂ ಸಹ ಕ್ಲಾಸು ತೆಗೆದುಕೊಂಡಿದ್ದಾರೆ.

ಈ ಅನ್ನಪೂರ್ಣೇಶ್ವರಿ ವಿಗ್ರಹ ಪ್ರತಿಷ್ಠಾಪನೆ ದಲಿತ-ಶೂದ್ರ ಪರಂಪರೆಯೊಂದರ ಮೇಲಿನ ಪುರೋಹಿತಶಾಹಿಯ ದಾಳಿಯೆಂಬುದರಲ್ಲಿ ಸಂದೇಹವಿಲ್ಲ. ತೀರಾ ಬೆಟ್ಟದ ಇತಿಹಾಸ ಹಾಗೂ ರೀತಿ ರಿವಾಜುಗಳನ್ನು ಕೆದಕುತ್ತಾ ಹೋದರೆ, ಈ ದೇವಾಲಯದ ವ್ಯಾಪ್ತಿಯಲ್ಲಿ ಬೇರೆ ಯಾವುದೇ ದೇವಾಲಯ ನಿರ್ಮಾಣ ಮಾಡಬಾರದೆಂಬ ಶಾಸನವೇ ಇದೆ. ಇಲ್ಲಿನ ಪ್ರತಿಯೊಂದು ಸ್ಥಳವೂ ಮಹದೇಶ್ವರನ ಮಹಿಮೆಯ ಪ್ರತೀಕವೆಂಬಂತಿವೆ. ಇಲ್ಲಿ ಯಾವುದೇ ಮಡಿವಂತಿಕೆಯಾಗಲಿ, ಜಾತಿ ಲೆಕ್ಕದ ಕಂದಾಚಾರವಾಗಲೀ ಇಲ್ಲ. ದಲಿತರು-ಶೂದ್ರರೆಲ್ಲ ಪುರೋಹಿತಶಾಹಿಯ ಹೀನ ಪೊರೆಯಾಚೆಗೆ ಅಪ್ಪಟ ಧಾರ್ಮಿಕ ವಾತಾವರಣವೊಂದನ್ನಿಲ್ಲಿ ಉಸಿರಾಡುತ್ತಿದ್ದಾರೆ.



ಮಲೆಮಹದೇಶ್ವರಬೆಟ್ಟದ ದೇವಸ್ಥಾನ

ದುರಂತವೆಂದರೆ, ಜುಟ್ಟು, ಜನಿವಾರಗಳ ತಿರುಗಣೆಗೆ ಬದ್ಧಿರುವ ಮುಜರಾಯಿ ಇಲಾಖೆಗೆ ಬೆಟ್ಟದ ಅಪರೂಪದ ಐತಿಹ್ಯ ಅರ್ಥವಾಗುತ್ತಿಲ್ಲ. ಆದುದರಿಂದಲೇ ಇಲ್ಲಿ ಬೇರೆ ದೇವಸ್ಥಾನಗಳ ನಿರ್ಮಾಣಕ್ಕೆ ಅನುಮತಿ ನೀಡಿ ಅನಾಹುತ ಮಾಡಹೊರಟಿದೆ. ಇದನ್ನು ಸಮಗ್ರ ರೀತಿಯಲ್ಲಿ ಪ್ರತಿಭಟಿಸದೇ ಹೋದಲ್ಲಿ ಸರ್ಕಾರದ ವ್ಯವಸ್ಥಿತ ಅಜೆಂಡಾಗಳು ಜಾರಿಯಾಗಿ ದಮನಿತರ ಸ್ವಾಭಿಮಾನದವರ ಪ್ರತೀಕದಂತಿರುವ ಬೆಟ್ಟ ಪುರೋಹಿತಶಾಹಿಗಳ ಅಡ್ಡೆ ಆಗುವುದರಲ್ಲಿ ಸಂದೇಹವಿಲ್ಲ.



ಪುಟ್ಟಣ್ಣ
ತಾ.ಪಂ ಸದಸ್ಯ ಮತ್ತು
ಮಾಜಿ ಧರ್ಮದರ್ಶಿ, ಮ.ಬೆಟ್ಟ

ವಿಪರ್ಯಾಸ ನೋಡಿ, ಒಂದಿಡೀ ಸಂಸ್ಕೃತಿಯನ್ನೇ ಬುಡಮೇಲು ಮಾಡಿ ಮತ್ತಾವುದೋ ಕಂದಾಚಾರ ಹೇರಲು ಸಂಚುಗಳು ದಿನನಿತ್ಯ ನಡೆಯುತ್ತಿವೆ. ಇದೆಲ್ಲವನ್ನು ಇಓ ವಿಜಯಾ ಎಂಬಾಕೆ ವ್ಯವಸ್ಥಿತವಾಗಿ ಮಾಡಿ ಕೂದಲು ಕೊಂಕದಂತೆ ಹಾಯಾಗಿದ್ದಾಳೆ. ಭಕ್ತ ಜನತೆ ಪ್ರತಿಭಟಿಸಿದರೂ ಕೂಡಾ ಮುಜರಾಯಿ ಇಲಾಖೆಯನ್ನು ಮುಂದಿಟ್ಟುಕೊಂಡು ಬಚಾವಾಗುತ್ತಿದ್ದಾಳೆ.

## ಭ್ರಷ್ಟೆ ವಿಜಯಮ್ಮ!

ಈ ಭ್ರಷ್ಟ ಮಹಿಳೆಯ ಬಗ್ಗೆ ಈ ಹಿಂದೆಯೂ ಬರೆದಿದ್ದೇವೆ. ಆದರೀಕೆಯ ದಪ್ಪ ಚರ್ಮ ಒಳ್ಳೆಯದಕ್ಕೆ ಸ್ಪಂದಿಸುವಂತೆ ಕಾಣಿಸುತ್ತಿಲ್ಲ. ಒಂದೆಡೆ ಪುರೋಹಿತಶಾಹಿಯ ಆಜ್ಞೆಯನ್ನು ಶಿರಸಾವಹಿಸಿ ಪಾಲಿಸುತ್ತಿರುವ ವಿಜಯಾ ಮತ್ತೊಂದೆಡೆ ಭ್ರಷ್ಟಾಚಾರದಿಂದಲೇ ಬೆಟ್ಟದ ಪಾವಿತ್ರ್ಯವನ್ನು ಹಳ್ಳ ಹಿಡಿಸುತ್ತಿದ್ದಾಳೆ.

ಇಡೀ ಬೆಟ್ಟದ ಆಡಳಿತ ಮಂಡಳಿಯ ಇಓ ಆಗಿ ಶನಿಯಂತೆ ವಕ್ಕರಿಸಿರುವಾಕೆ ವಿಜಯಾ. ಪಕ್ಕಾ ಸರ್ವಾಧಿಕಾರಿ ಗುಟ್ಟಿನಲ್ಲಿ ಮೆರೆಯುತ್ತಿರುವ ಈಕೆ ಅನ್ನಪೂರ್ಣೇಶ್ವರಿ ವಿಗ್ರಹ ಪ್ರತಿಷ್ಠಾಪನೆ ಸಂಬಂಧ ಕೆಲ ಖಾಸಗಿ ಉದ್ಯಮಿಗಳಿಂದ ಹಣ ಪೊಡೆದುಕೊಂಡಿರುವ ಬಗ್ಗೆಯೂ ಗುಲ್ಲೆದ್ದಿದೆ. ಪ್ರತಿಯೊಂದರಲ್ಲೂ ಕಾಸು ಕೀಳುವ ಜಾಯಮಾನದವಳಾದ ಈಕೆ ಬೆಟ್ಟದ ಕುಡಿಯುವ ನೀರಿನಿಂದ ಹಿಡಿದು ವಸತಿಯ ವರೆಗೆ ಎಲ್ಲವನ್ನೂ ಹದಗೆಡಿಸಿದ್ದಾಳೆ.

ಇನ್ನೂ ಆಘಾತಕಾರಿ ಅಂಶವೆಂದರೆ, ವಾರ್ಷಿಕ 15 ಕೋಟಿ ಆದಾಯದಲ್ಲಿ ಅಖಂಡ ಐದು ಕೋಟಿಯಷ್ಟು ಮಂಗಮಾಯವಾಗುತ್ತಿದೆ. ಇದರ ಹಿಂದೆ ವಿಜಯಾಳ ಕೈಚಳಕವಿರುವುದು ಖಚಿತ.

ಯಾವುದಕ್ಕೂ ಸಂಬಂಧಿಸಿದವರು ಈಕೆಯ ವಿರುದ್ಧವೊಂದು ಸರಿಯಾದ ತನಿಖೆ ನಡೆಸಬೇಕಿದೆ.



ವಿ.ವಿಜಯ
ಕಾರ್ಯನಿರ್ವಾಹಕಾಧಿಕಾರಿ
ಮಹದೇಶ್ವರ ಬೆಟ್ಟ

## ಸರ್ಕಾರಿ ನೀತಿಗಳೇ ಬ್ರಾಹ್ಮಣ್ಯಮಯ!

ಹೌದು, ಸರ್ಕಾರದ ಕಡೆಯಿಂದ ಜಾರಿಯಲ್ಲಿರುವ ಬಹುತೇ ನೀತಿ-ನಡಾವಳಿಗಳು ಬ್ರಾಹ್ಮಣ್ಯ ಬಿತ್ತುವ ಹುನ್ನಾರಗಳನ್ನೊಳಗೊಂಡಿ ಇದಕ್ಕೆ ಧಾರ್ಮಿಕ ದತ್ತಿ ಇಲಾಖೆಯೂ ಹೊರತಾಗಿಲ್ಲ.

ಈ ಪುರೋಹಿತವರ್ಗದ 'ಕಡತ'ಗಳಲ್ಲಿ ಆಗಮ ಪೂಜಾ ವಿಧ ಅಂತೊಂದಿದೆ. ಇದರಡಿಯಲ್ಲಿ ಏಳು ಸಬ್ ಡಿವಿಷನ್ನುಗಳೂ ಇದ್ದಾ ಧಾರ್ಮಿಕ ದತ್ತಿ ಇಲಾಖೆ ಒಂದು ದೇವಳವನ್ನು ಪರಿಗಣಿಸಬೇಕಾದರೆ ಏಳು ಡಿವಿಷನ್ನುಗಳಲ್ಲಿ ಒಂದನ್ನಾದರೂ ಪಾಲಿಸುತ್ತಿರಬೇಕು. ಇವುಗಳ ಹೋಮ-ಪ್ರತಿಷ್ಠಾಪನೆ ಮುಂತಾದ ಪಕ್ಕಾ ಬ್ರಾಹ್ಮಣ್ಯದ ಆಚರಣೆಗಳ ಸೇರಿರುತ್ತವೆ.

ಗಮನಿಸಬೇಕಾದ ವಿಚಾರವೆಂದರೆ, ದಲಿತ, ಶೂದ್ರ ಸಂಸ್ಕೃತಿ ದೇವಾಲಯಗಳಲ್ಲಿ ಹೋಮ-ಪ್ರತಿಷ್ಠಾಪನೆಯಂಥ ಆಚರಣೆಗಳು ಅಸ್ತಿತ್ವದಲ್ಲಿ ಇದರಲ್ಲಿ ಮಾರಮ್ಮ, ಬೀರಮ್ಮ ಮುಂತಾದ ಸ್ಥಳೀಯ ದೇವರುಗಳ ಸೇರುತ್ತಾರೆ. ಧಾರ್ಮಿಕದತ್ತಿ ಇಲಾಖೆಯೆಂಬುದು ಮೇಲ್ನೋಡ ದೇವರುಗಳ ದೇವರೆಂದೇ ಪರಿಗಣಿಸುವುದಿಲ್ಲ! ಪುರೋಹಿತಶಾಹಿಯೆಂಬುದು ದೇವರನ್ನ ಸಹ ಅಸ್ಪೃಶ್ಯತೆಯ ಪರಿಧಿಯಲ್ಲಿಟ್ಟಿರುವುದಕ್ಕೆ ಇದೇ ಸ್ಪಷ್ಟ ಸಾಕ್ಷಿ.

ಸರ್ಕಾರಿ ಇಲಾಖೆಗಳೇ ಈ ಪರಿ ಮೌಢ್ಯ ಕುರುಡು ಕಂದಾಚಾರಗಳ ಶರಣಾಗಿರುವಾಗ ದೇವರ ಮೇಲೂ ಸಹ ಪುರೋಹಿತಶಾಹಿ ದಬ್ಬಾಳ ನಡೆಯುತ್ತಲೇ ಇರುತ್ತದೆ.

ಇದನ್ನು ಮೊದಲು ಸರಿ ಮಾಡಬೇಕಿದೆ.

ಈಕೆ ಅದೆಂಥಾ ಖತರ್‌ನಾಕ್ ತಲೆಗಾರಿಕೆಯವಳೆಂದರೆ, ಬೆಟ್ಟದ ಪರಂಪ ವಿರುದ್ಧವಾದುದನ್ನು ನಡೆಸಿ ಪುರೋಹಿತಶಾಹಿಗಳಿಂದಲೂ ಭೇಷ್ ಅನ್ನಿಸಿಕೊಂ ಸ್ವಂತದ ತಿಜೋರಿಯನ್ನು ತುಂಬಿಸಿಕೊಳ್ಳುತ್ತಿದ್ದಾಳೆ. ಬೆಟ್ಟದ ಪರಂಪರೆಯ ಇಲ್ಲಿ ಯಾವುದೇ ಹೋಮಹವನಗಳನ್ನು ನಡೆಸುವಂತಿಲ್ಲ. ಆದರೆ ವಿಜ ಕಳೆದ ವಾರ ನಿರ್ಭೀತಿಯಿಂದ ಹೋಮವೊಂದ ನಡೆಸೇಬಿಟ್ಟಿದ್ದಾಳೆ.

ಯಾರ ಒಪ್ಪಿಗೆಯ ಮರ್ಜಿಗೂ ಕಾಯದ ಈಕೆ ವಿಕಾ ಬೆಟ್ಟದ ಆವರಣದೊಳಗೆ ಹೊಗೆ ಎಬ್ಬಿಸಿದ್ದಾಳೆ. ಇದಕ್ಕೆ 'ಅಷ್ ತ್ತರ ಹೋಮ' ಅಂತ ಹೆಸರಿಟ್ಟು ಅಖಂಡ ನಾಲ್ಕು ಲಕ್ಷದ ಹುಂಡಿ ಹಣವನ್ನು ವ್ಯಯಿಸಿ ಬಿಟ್ಟಿದ್ದಾಳೆ. 'ಬೆಟ್ಟದ ಪರಂಪ ವಿರುದ್ಧವಾಗಿ ಭಕ್ತರ ದುಡ್ಡನ್ನು ಯಾಕಮ್ಮ ಪೋಲು ಮಾಡಿ ಅಂದರೆ ವಿಜಯಾ ಕೊಡುವ ಉತ್ತರ ಭಲೇ ಮಜವಾಗಿ ಅವರ ಪ್ರಕಾರ ಸಾಕ್ಷಾತ್ ಮಲೈಮಹದೇಶ್ವರ ಬೆಟ್ಟ ಅದೆಂತಹುದೋ ಭೀಕರ ದುಷ್ಟಶಕ್ತಿಯೊಂದು ವಕ್ಕರಿಸಿದೆಯ ಇದನ್ನು ಹೋಗಲಾಡಿಸಬೇಕಾದರೆ ಭಯಂಕರ ಹೋಮ ನಡೆ ಬೇಕಿತ್ತಂತೆ. ಹೀಗಂತ ಧರ್ಮಸ್ಥಳದ ಧರ್ಮದರ್ಶಿ ವೀರೇ ಹೆಗ್ಗಡೆಯೇ ಹೇಳಿದ್ದಾರಂತೆ!

ವೀರೇಂದ್ರ ಹೆಗ್ಗಡೆಯೇನಾದರೂ ವಿಜಯಾಳ ಮಾತಿನಂತೆ ಈ ವಿಚಾರ ಮೂಗು ತೂರಿಸಿದ್ದರೆ ಈ ದುಷ್ಟ ಸಂಚಿನಲ್ಲಿ ಅವರೂ ಸಹ ಪಾಲುದಾರರೆಂ ಅರ್ಥ. ಈ ಆಸಾಮಿಗೆ ಹೋಮಹವನ ನಡೆಸುವ ಉಮೇದಿಯಿ ಧರ್ಮಸ್ಥಳದಲ್ಲೇ ಮಾಡಿಕೊಳ್ಳಲಿ. ಅದು ಬಿಟ್ಟು ಒಂದು ಕ್ಷೇತ್ರದ ಪರಂಪರಾ ನೈಜ ನಡಾವಳಿಗಳಿಗೇ ಕುಂದುಂಟಾಗುವಂತೆ ಪ್ರಚೋದನೆ ನೀಡುವು ತರವಲ್ಲ. ದುಷ್ಟಶಕ್ತಿ ಅಟಕಾಯಿಸಿಕೊಳ್ಳುವುದು, ಅದಕ್ಕೊಂದು ಪರಿಹಾರ ಇವರೆಲ್ಲ ಯಾವ ಕಾಲದಲ್ಲಿದ್ದಾರೆ? ಇವರಿಗೆ ತೆವಲುಗಳಿದ್ದರೆ ಅಲ್ಲೇ ಇರ ಆದರೆ ಆಧುನಿಕ ಮನೋಭಾವದತ್ತ ತೆರೆದುಕೊಳ್ಳುತ್ತಿರುವವರನ್ನೂ ಯ ಕುಲಗೆಡಿಸುತ್ತಿದ್ದಾರೆ?

ಇನ್ನು ಮತ್ತೆ ಅನ್ನಪೂರ್ಣೇಶ್ವರಿ ದೇವಾಲಯ ನಿರ್ಮಾಣದ ಬಗ್ಗೆ ಒಂದೆರ ಮಾತು. ಮಲೈ ಮಹದೇಶ್ವರ ಬೆಟ್ಟದ ಐತಿಹ್ಯವನ್ನು ಕಡೆಗಣಿಸಿ ದೇವಿ ವಿಗ್ರಹ ಪ್ರತಿಷ್ಠಾಪಿಸಲು ಈ ಜನ ಮುಂದಾಗಿದ್ದಾರಲ್ಲಾ? ಹೊರನಾಡಿನಲ್ ಕಟೀಲಿನಲ್ಲೋ ಶೂದ್ರ ಆಚರಣೆಗಳಿರುವ ದೇವರ ಗುಡಿ ನಿರ್ಮಿಸಲು ಮುಂದಾ ಇವರೆಲ್ಲ ಸುಮ್ಮನಿರುತ್ತಾರಾ? ಇದು ಪ್ರಮುಖ ಪ್ರಶ್ನೆ.

ಕೊಳ್ಳೇಗಾಲ ಮಾತ್ರವಲ್ಲ, ನಾಡಿನ ಸಮಸ್ತ ದಲಿತ ಶೂದ್ರರು ತ ಧಾರ್ಮಿಕ ಸಂಸ್ಕೃತಿಯ ಮೇಲಾಗುತ್ತಿರುವ ಈ ಹಲ್ಲೆಯನ್ನು ಪ್ರತಿಭಟಿಸಬೇಕಿ ಬ್ರಾಹ್ಮಣ್ಯ ಹೇರಿಕೆಯ ಈ ಸಂಚು ಎಲ್ಲರಿಗೂ ಮನವರಿಕೆಯಾಗಿ ಈ ಸೋಂ ಇನ್ನಷ್ಟು ಹಬ್ಬದಿರುವಂತೆ ಕಡಿವಾಣ ಹಾಕಬೇಕಾದ ತುರ್ತು ಎದುರಾಗಿದೆ

● ಚಿಕ್ಕಮಾಳಿಗ


## ಅನುಚಿತವಲ್ಲದಿದ್ದರೆ ಒಂದು ಪ್ರಾರ್ಥನೆ

ಸಿಕ್ಕಿಬಿಟ್ಟರೆ ಒಂದಣು ಸುಳಿವು
ಒಪ್ಪಿಸಿಬಿಡುವೆ ಕಣ್ರೆಪ್ಪೆಗಳ ಬಡಿತ
ಬೆಳಗಿನ ಇಬ್ಬನಿ ಹನಿಗಳಿಗೆ

ವಿವರಿಸುವಿರಾ ಯಾರಾದರೂ? ಪ್ರಾಜ್ಞನಲ್ಲ ನಾನು
ಎಷ್ಟು ಹುಟ್ಟು ಮರುಹುಟ್ಟು ಬೇಕು ನಿನ್ನನರಿಯಲು?
ಹೇಗೆ ಎಣಿಸಲಿ ಈ ಮೃದು ಚಿಟ್ಟೆಗಳ ಹೃದಯದ ಮಿಡಿತ?
ಕಾಣಿಸದು ನನಗೇನು
ನೀನಿರುವೆ ಎಲ್ಲೆಲ್ಲು

ಈ ವಿಶಾಲ ಕಡಲಲ್ಲಿ ನೀಲ ಬಾಂದಳದಲ್ಲಿ
ಆಗಬಯಸುವೆ ನಿನ್ನ ವಾರಸುದಾರ
ಅನುಚಿತವಲ್ಲದಿದ್ದರೆ ಒಂದು ಪ್ರಾರ್ಥನೆ
ದಯವಿಟ್ಟು ಕಳಿಸಿಕೊಡು
ಕೆಲವಾದರೂ ಸೂಚನೆಗಳನ್ನು.

ಗುಜರಾತಿ ಮೂಲ-
ಹಿತೇನ್ ಮನ್‌ಹರ್‌ಲಾಲ್ ಆನಂದಪರ
ಕನ್ನಡಕ್ಕೆ: ಡಾ. ಸಿ. ರವೀಂದ್ರನಾಥ್



# ...ಕ್ಕೆರೆ ಜವರೇಗೌಡ ಜಾತಿ ಜಗಳ ಮಾಡುಸ್ತನಂತೆ ನಿಜವೇ?

...ಟ್ಟನಪ್ಪೋ ಕೆಟ್ಟನೋ ಜವರೇಗೌಡ ಕೆಟ್ಟನೊ, ...ಮಾತು ಕೇಳಿಕೊಂಡು ಹಾಳುಬಿದ್ದು ಹೋದನೊ." ...ಮು ಕೋಲುಯ್ಯವ ಧಾಟಿಯ ಪದ ಹಾಡುತ್ತ ...ಪಾಟಿಸ್ಸೆ.

...ತಪ್ಪ, ನಿನಿಗೆ ಜವರೇಗೌಡ ಗೊತ್ತೇ?" ಎಂದ.

...ಮ ಲು ಸೀ ಮೆ

## ...ಹಟ್ಟಿಪುರಾಣ

▸▸ಬಿ. ಚಂದ್ರೇಗೌಡ

...ವರೇಗೌಡ ಗೊತ್ತಿಲವೇನ್ಲ ನನಿಗೆ. ಚನ್ನಾಪುರದ ...ಡನ ಮನೆ ಹೆಣ್ಣು ತಂದು ಮದಿವಾಗಿದ್ದ. ...ಡ ಜರಾಸಂಧನ ಪಾರ್ಟು ಮಾಡನೂ ಅಂದ್ರೆ ...ಲಿ ಯಾವನೂ ಅಂಗೆ ಮಾಡ್ತಿರಲಿಲ್ಲ. ಅವುನಿಗೆ ...ಮಕ್ಕಳಿದ್ದೊ. ಅದರಲ್ಲಿ ಹಿರಿ ಹುಡುಗಿ ತಂದು ...ಡ ಮದಿವಾದ. ಇವುನಿಗೂ ಐದಾರು ...ಾ. ಅಣೆ ಅತ್ರ ಐದಾರ್‍ಕರೆ ದರಖಾಸ್ತು ಜಮೀನು ...ಅಲ್ಲೆ ಒಂದು ಬಾವಿನೂ ಕಿತ್ತಗಂಡು ನೂರಾರು ...ಸಿ ನೆಟ್ಟ. ಅಂತೂ ಒಕ್ಕಲತನ ಉಳಿಸಿಗಂಡು ...ಅವುನೆ" ಎಂದು ಕಾಳಮಾವ ಸ್ಥಳೀಯ ಸಭ್ಯ ...ಜವರೇಗೌಡನ ಕುಟುಂಬ ವೃತ್ತಾಂತವನ್ನೇ ...ರವಿದ. ಕಿಸಕ್ಕೆಂದು ನಕ್ಕ ವಾಟಿಸ್ಸೆ.

...ನಿಲ್ಸು ದ್ವಡಪ್ಪ, ನಾನು ಕೇಳಿದ್ದು ಲೋಕಲ್ ...ಡನ ಮ್ಯಾಟ್ರಲ್ಲ. ಕುಯೆಂಪು ಮೈಸೂರಿಗೆ ...ದ್ದೂ ಅವುರಿಗೆ ಶನಿಮಾತ್ಮನ ತರ ಗಂಟು ...ಗಂಟು ಮಾಡಿಕಂಡು ಈಗ ಉಪವಾಸ ...ಕುರೊ ದೇ ಜವರೇಗೌಡನ ಮ್ಯಾಟ್ರು ನಾನು

...ನೊ ತಿಂದು ಹ್ವಟ್ಟೆಕೆಟ್ಟಿತ್ತೇನೊ, ಉಪವಾಸ ...ಬುಡು."

...ಟ್ಟಗೇಳಿದೆ ದೊಡಪ್ಪ. ಆದರೆ ತಿಂದಿರೋನು ...ಡಲ್ಲ ಅವುನ ಮಗನಂತೆ."

...ಪ ಡೀಟೈಲಾಗೇಳೊ. ನಾವು ತಿಳಕಳನ" ಎಂದ

...ಮೊ ಪರಪೆಕ್ಟಾಗಿ ಗೊತ್ತಿಲ್ಲ ಕಣೊ ಉಗ್ರಿ. ಆದ್ರೆ ...ಮಾತ್ರ ಗೊತ್ತು. ಈ ನಮ್ಮ ಜವ್ರೇಗೌಡ ..."

...ಬುವಚನ ಬಳಸಿ ಮಾತಾಡೊ."

...ತಪ್ಪ ನಿನಿಗೂ ಸಾಬರ ಗಾಳಿ ಬೀಸ್ತೆ ಮಂಗಳೂರ ...ಬರು ಯಾವನೇ ಸಾಬಿ ಅರೆಸ್ಟಾಗಲಿ, ಜೈಲಿಗೋಗಲಿ, ಅವುರ ಬಗ್ಗೆ ಬಹುವಚನ ಬಳಸಿ ಅಂತ ಹೇಳ್ತಾಯಿದ್ದರಂತೆ."

"ಬಹುವಚನ ಬಳಸೊ ಅಂತ ಕ್ಯಲಸ ಮಾಡಿದ್ರೆ ಬಳುಸ್ಲೆ ಬೇಕಾಯ್ತದೆ. ಬಾಂಬಿಟ್ಟು ಜನ ಸಾಯಸದು, ಕ್ವಲೆ ಮಾಡದು, ಕಳ್ಳತನ ಮಾಡಿದೋರನ್ನೆಲ್ಲ ಮಹನೀಯರು, ಸನ್ಮಾನ್ಯ ಲ್ಯಾಡೆನ್‌ರವರು, ಗೌರವಾನ್ವಿತ ದಾವೂದ್‌ರವರು ಅನ್ನಕಾಯ್ತದೇನೊ" ಎಂದ ಉಗ್ರಿ.

"ಅಲ್ಲಿಗೆ ನಾನು ದೇ ಜವರೇಗೌಡ್ರು ಬಗ್ಗೆ ಏಕವಚನ ಬಳಸಕ್ಕೆ ನೀನು ಪರಮಿಷನ್ ಕೊಟ್ಟಂಗಾಯ್ತು, ಪಾರ್ ಯುವರ್ ಕೈಂಡ್ ಇನ್‌ಪರ್‌ಮೇಶನ್, ನಾವು ನಮ್ಮ ದೇವರಿಗೇ ಏಕವಚನ ಬಳುಸ್ತಿವಿ ಗೊತ್ತೆ! ಶ್ರೀಕೃಷ್ಣ ಅವರು, ಈಶ್ವರ ಅವರು, ಬ್ರಹ್ಮ ಅವರು ಅಂತ ಯಾವತ್ತು ಮಾತಾಡಿದ್ದಿವೀ? ಅಂತ ಮಾತ್ರ ಗಾಂಧೀಜಿಗೆ ಗಾಂಧಿ ಅಂತಿವಿ. ಇನ್ನ ಇವುರ್‍ಯಲ್ಲ ಯಾವ ಗ್ವಂಜಾಂತುಗಳು."

"ಇರ್ಲಿ ಹೇಳೊ ಅತ್ತಗೆ."

"ಜವರೇಗೌಡನಿಗೆ ಶಶಿಧರ ಪ್ರಸಾದ ಅಂತ ಒಬ್ಬ ಮಗಿದ್ದ."

"ಈಗಿಲ್ಲವೆ?"

"ಈಗ ಇದ್ದೂ ಇಲ್ದಂಗಾಗ್ಯವುನೆ. ಅವುನ್ನ ಈ ಜವರೇಗೌಡ ಮೈಸೂರು ಯೂನಿವರ್ಸಿಟಿ ವೈಸ್ ಛಾನ್ಸಲರ್ ಮಾಡಬೇಕಾದ್ರೆ ಆಡಬಾರದ ಆಟನ್ಯಲ್ಲ ಆಡಿ, ಮಾಡಬಾರದ ಕ್ಯಲಸನ್ಯಲ್ಲ ಮಾಡಿದ."

"ದ್ಯಾವೇಗೌಡ್ರು ಕುಮಾರಸ್ವಾಮಿಯ ಮುಖ್ಯಮಂತ್ರಿ ಮಾಡಿದ್ರಲ್ಲ ಅಂಗೆ ಅನ್ನು."

"ಪರಪೆಕ್ಟ್ ಎಗ್‌ಜಾಂಪಲ್ಲು. ಅಂಗೆ ತಿಳಕೊ. ಅಂತೂ ಶಶಿಧರ ಪ್ರಸಾದ್ ವೈಸ್ ಚಾನ್ಸಿಲರಾದ ಮ್ಯಾಲೆ, ಸುಮಾರು ಜನಕೆ ಕ್ಯಲಸ ಕೊಟ್ಟನಂತೆ. ಅದು ಯಂಥೋರಿಗೆ ಅಂತೀ? ಯಾರು ಆ ಕ್ಯಲಸ ಮಾಡಕ್ಕೆ ಯೋಗ್ಯರಲ್ಲವೊ ಅಂಥೋರಿಗ್ಯಲ್ಲ ಕ್ಯಲಸ ಕೊಟ್ಟು ಕಾಸ ಈಸಗಂಡನಂತೆ."

"ಜವರೇಗೌಡನ ಮಗ ಅಂಥ ಕ್ಯಲಸ ಮಾಡಿದ್ನೆ?" ಎಂದ ಕಾಳಮಾವ.


"ಮಾಡಿ ರೆಡ್‌ಹ್ಯಾಂಡಲ್ಲಿ ಸಿಗಾಯ್ಕಂಡಿದ್ದನಂತೆ ದ್ವಡಪ್ಪ. ಅದ್ಕೆ ಸರಕಾರ ಎನ್‌ಕ್ವಯಿರಿ ಮಾಡಿ ಅವುನ್ನ ಜೈಲಿಗಾಕಬೇಕು ಅನ್ನುವಾಗ ಈ ಜವರೇಗೌಡ ಹೋಗಿ 'ನನ್ನ ಮಗ ಅಂಥೋನಲ್ಲ, ಅವುನ್ನೇನಾದರೂ ಜೈಲಿಗಾಕಿದ್ರೆ ನಮ್ಮೂರಿಂದ ನಮ್ಮ ಜಾತಿ ಜನ ಕರಸಿ ಹ್ವಡದಾಟ ಮಾಡುಸ್ತಿನಿ ಹುಶಾರು', ಅಂತ ಉಪಾಸ ಕುಂತಿದ್ದನಂತೆ"

"ದ್ವಡ್ಡ ವಿದ್ವಾಂಸಾಗಿದ್ದಕಂಡು ಅವುನಿಗೇನು ಬಂತೊ?"

"ಅಂಗೇ ನೋಡಿದ್ರೆ ಯಲ್ಲಾ ವಿದ್ವಾಂಸರೂ ಇರದೆ ಅಂಗೆ ಕಣೊ ಉಗ್ರಿ. ವಿದ್ಯೆನೆ ಬ್ಯಾರೆ, ಹುಟ್ಟುಗುಣನೆ ಬ್ಯಾರೆ. ಇದೇ ಜವರೇಗೌಡ ಕುವೆಂಪು ಮನೆ ಬಾಗಲಲ್ಲಿ ನಿಂತಗಂಡು, ಅವರ ಮನೆವಳಿಕೆ ಲಿಂಗಾಯಿತ್ರು ಬ್ರಾಂಬ್ರು ಬರದಂಗೆ ಮಾಡಿದನಂತೆ. ಇದರಿಂದ ಸಿಟ್ಟಾದೋರ್‍ಯಲ್ಲ, ಕುವೆಂಪು ಒಂದು ಜಾತಿ ಕವಿ ಅಂತ ಸುಳ್ಳು ಸುದ್ದಿ ಹಬ್ಬಿಸಿದರಂತೆ. ಆಗ ಕುವೆಂಪು ಇದ್ಯಲ್ಲದರಿಂದ್ಲೂ ಪಾರಾಗಕ್ಕೆ ಅಂತ ವಿಶ್ವಮಾನವರಾಗಿ ಬುಟ್ರಂತೆ. ಆದ್ರು ಈ ಜವ್ರುರೇ ಅವುರ ಹೆಸರಲ್ಲೊಂದು ಟ್ರಸ್ಟ್ ಮಾಡಿ ಜಾಗ ಹಿಡುದು ಕಾಂಪ್ಲೆಕ್ಸ್ ಕಟ್ಟಿ ಬಾಡಿಗೆನೂ ಎಣಿಸಿಗತ್ತಾಯಿದ್ದನಂತೆ."

"ಓ ವಳ್ಳೆ ವ್ಯವಾರಸ್ತನೆ ಬುಡಂಗರೆ."

"ವ್ಯವಾರಸ್ತ ಅಂತ ಕೇಳ್ತಿಯಾ. ಆದ ತಿಳಕಂಡೆ ಕುವೆಂಪು ಮಗ ತೇಜಸ್ವಿ ಜವ್ರುರೇಗೌಡ ಅಂದ್ರು ಸಾಕು ಉರುದು ಬೀಳೋರಂತೆ. ಕುವೆಂಪು ತೀರಿಕೊಂಡಾಗ ಅವರ ಸವಕೊಡದೆ ಮೈಸೂರಲ್ಲೇ ಧಪನ್ ಮಾಡಿ, ರಾಘವೇಂದ್ರ ಸ್ವಾಮಿ ಗದ್ದುಗೆ ತರ ಮಾಡಿಕಂಡು, ವಿಶ್ವಮಾನವ ಜವರೇಗೌಡ ಮಠ ಅಂತ ಮಾಡಿಕಂಡು, ವಟ್ಟೆವರಿಯೊ ಪ್ಲಾನಾಕಿದ್ದನಂತೆ ಈ ಜವರೇಗೌಡ. ಆಗ ತೇಜಸ್ವಿ ಏನು ಮಾಡಿದ್ರು ಕುಯೆಂಪು ಸಭಾ ಕೊಡದೆ ಅವರೂರಿಗೆ ತಗಂಡೋಗಿ ಕಾಷ್ಟ ಮಾಡಿ ಗೋರಿ ಮಾಡಿದರಂತೆ. ಇಲ್ದೆಯಿದ್ರೆ ಮೈಸೂರಲ್ಲಿ ಕುವೆಂಪು ಸಮಾಧಿ ಮಾಡಿ, ಪಕ್ಕದಲ್ಲೇ ಇವುನೆದ್ದಿನ್ನ ಮಾಡೀ, ಆಮ್ಯಾಲೆ ಇವುಂದೂ ತಯಾರಾಗದು."



"ಈಗಂಗರೆ ಅವ್ರುನ ಮಗ್ನ ಜೈಲಿಗಾಕ್ತರೇನ್ಲ?" ಎಂದಳು ಜುಮ್ಮಿ.

"ಯಂಗಾಕ್ತರಕ್ಕ, ಮೈಸೂರು ಯೂನಿವರ್ಸಿಟಿಲಿ ಇಂಥ ಕ್ಯಲಸ ಮಾಡಿ ಬುಟ್ಟೊದ ಶಶಿಧರ ಸಾಯಿಬಾಬನ ಸ್ಕೂಲಲ್ಲಿ ಕ್ಯಲಸ ಮಾಡ್ತಯಿದ್ದನಂತೆ. ಆ ಸಾಯಿಬಾಬನಿಗೆ ಈಗಿರೊ ರಾಜ್ಯಪಾಲನೂ ಭಕ್ತನಂತೆ. ಇದ ತಿಳಕಂಡ ಜವರೇಗೌಡ ಹೋಗಿ ಸಾಯಿಬಾಬನ ಕಾಲಿಗೆ ಬಿದ್ದು, ಅವುನಿಂದ ರಾಜ್ಯಪಾಲನಿಗೇಳಿಸಿ, ಸರಕಾರ ಶಶಿಧರನ್ನ ಜೈಲಿಗಾಕದಂಗೆ ಮಾಡಿದ್ದನಂತೆ."

"ಅಲ್ಲಾ ಈ ರಾಜ್ಯಪಾಲನಿಗೇನು ಬಂತು?"

"ಏನು ಬಂತು ಅಂದ್ರೆ ಸಾಯಿಬಾಬನ ಭಕ್ತರ್‍ಯಲ್ಲ ಇರದೆ ಅಂಗಲವೇನೊ. ಯಾವಾಗ್ಲು ಸಮಾಜಕ್ಕೆ ನೀತಿ ಹೇಳತರೆ, ತಾವು ಮಾತ್ರ ಹೇಲ್ ತಿಂತರೆ. ಆ ಗುಂಪಿಗೆ ಸೇರಿದೋರು ಇವರ್‍ಯಲ್ಲ."

"ಅಂತು ಬಿಜೆಪಿಗಳಿಗೆ ವಳ್ಳೆ ಸುದ್ದಿನೆ ಸಿಕ್ತು ಬುಡು."

"ವಳ್ಳೆ ಸುದ್ದಿಯಂತಿಯಾ. ರಾಜ್ಯಪಾಲನ ವಿರುದ್ಧ ಬುದ್ಧಿಜೀವಿಗಳು ಬದ್ದಿರದ ನೋಡಿ ಬಿಜೆಪಿಗಳಿಗೆ ಹೋಳಗೆ ಶೀಕರಣೆ ತಿಂದಂಗಾಯ್ತಾ ಅದೆ. ಈಶ್ವರಪ್ಪಂತೂ ನಾಲಗೆ ಸವುರತ ಅವುನೆ."

"ಅಲ್ಲಾ, ನನ್ನ ಮಗ ತೆಪ್ಪ ಮಾಡಿದ್ರೆ ಅವುನಿಗೆ ಸಿಕ್ಸೆ ಆಗ್ಲಿ ಅಂತ ಈ ಜವರೇಗೌಡ ಮನೇಲಿದ್ರೆ ಎಷ್ಟು ಚನ್ನಾಗಿರದು" ಎಂದ ಕಾಳಮಾವ.

"ಅದು ನಿನ್ನ ಲೋಕದ ನ್ಯಾಯ ದ್ವಡಪ್ಪ, ಜವರೇಗೌಡ, ದ್ಯಾವೇಗೌಡ ಇವರ ಲೋಕದಲ್ಲಿ ಶಶಿಧರ ಅಂದ್ರೆ ಜವರೇಗೌಡ, ಕುಮಾರಣ್ಣ ಅಂದ್ರೆ ದೇವೇಗೌಡ, ಪಾಪ ಇವುರಿಗೆ ಮಕ್ಕಳಿಗೇನಾರ ಆದ್ರೆ ಜೀವ ಚುಳ್ ಅಂತದೆ. ಅವುರಿಗಂದ ಮಾತು, ತಮಿಗೇ ಅಂದಂಗಾಯ್ತದೆ. ಅವುರ ಮಾಡಿದ ಕ್ಯಲಸ ತಾವೇ ಮಾಡಿದ್ದು ಅನಸ್ತದೆ. ಅದ್ಕೆ ತಾವು ಮಾಡಿದ ಸಾಧನೆ, ಗಳ್ಸಿರೊ ಹೆಸರು ಯಲ್ಲನೂ ಮರತು, ಮೋರಿಗೆ ಬಿದ್ದೋಯ್ತವೆ ದಡ್ಡ ಬಡ್ಡೆತ್ತವು."

"ದ್ಯಾವೇಗೌಡ್ರು ಪೇಪ್ರಿಗೆ ಏನೇನೊ ಬರಿತಯಿದ್ದರಂತೆ ನಿಜವೇನೊ?"

"ಊ ಕಣೊ ಉಗ್ರಿ. ನಾನು ನೋಡಿದೆ. ಚನ್ನಾಗಿ ಬರದವುರೆ. ಇಷ್ಟು ಒಳ್ಳೆ ದೇವೇಗೌಡನ್ನ ಜನ ತಪ್ಪು ತಿಳಕಂಡಿದ್ರಲ್ಲ ಅನ್ನಂಗೆ ಬರದವುರೆ. ಸದ್ಯ ರಾಮಕೃಷ್ಣ ಹೆಗಡೆನೂ ನಾನು ರಾಮಲಕ್ಷ್ಮಣರಂಗಿದ್ದೋ, ಶಕುಂತಲಕ್ಕನ್ನೇ ಸೀತಕ್ಕ, ನಿಜಲಿಂಗಪ್ಪನೆ ದಶರಥ, ರಘುಪತಿನೆ ಆಂಜನೇಯ, ಸಿದ್ದರಾಮಯ್ಯ ಸುಗ್ರೀವ ಅಂತ ಬರಕಂದಿಲ್ಲ. ಅದಕಿಂತ ದ್ಯಾವೇಗೌಡ್ರು ಪ್ರಧಾನಿಯಾದೇಟಿಗೆ ಹೆಗಡೆನ ಪಾರ್ಟಿಯಿಂದ ತೆಗದಾಕಿ ಆ ಕಾರಣಕ್ಕೆ ಚಿಕ್ಕಮಗಳೂರಲ್ಲಿ ಸಭೆ ಮಾಡಕ್ಕೆ ಅಂತ ಹ್ವಂಟಿದ್ದ ರಮೇಶ್ ಬಂದಗದ್ದೆ ಮಾನು ತೀರಿಕಂಡಿದ್ದ ಎಲ್ಲೂ ಕಾಣಿಸಿಲ್ಲ ಮಣ್ಯಾತ್ಮ."

"!!"

●

## ...ನ್ನಾ ಸಾವು



...ಮೊನ್ನೆ ಬ್ರೆಜಿಲ್‌ನ ಕಾರ್ ರೇಸಿನ ಛಾಂಪಿಯನ್ ...ನ್ ಸೆನ್ನಾ ಯುರೋಪಿನ ಮಹಾನ್ ಕಾರ್ ...ಕ 'ಫಾರ್ಮುಲಾ ಒಂದು' ರೇಸಿನಲ್ಲಿ 250 ...ಗಿಂತ ಹೆಚ್ಚು ವೇಗವಾಗಿ ಕಾರ್ ಬಿಟ್ಟು ...ನಲ್ಲಿ ಹತೋಟಿ ತಪ್ಪಿ ಎದುರಿನ ಕಲ್ಲುಗೋಡೆಗೆ ...ಮು ತಲೆ ಒಡೆದುಕೊಂಡು ಸತ್ತ. ಇದಾದದ್ದು ...ಯಲ್ಲಿ. ಬ್ರೆಜಿಲ್ ದೇಶ ಸೆನ್ನಾ ಸಾವಿನಿಂದ ...ಗಿದಂತೆ ಕುಸಿಯಿತು. ಫುಟ್‌ಬಾಲ್‌ನಲ್ಲಿ ...ರೇಸ್‌ನಲ್ಲಿ ಅದ್ಭುತ ಸ್ಟಾರ್‌ಗಳನ್ನು ರೂಪಿಸಿದ ...ಗೆ ಈಗ ಇದ್ದ ಒಬ್ಬನೇ ಸ್ಟಾರ್: ಸೆನ್ನಾ.... ...ರ್ಷದ ಈ ಹುಡುಗ ಮೂರು ಸಲ ವಿಶ್ವ ...ಯನ್ ಆಗಿದ್ದ, ಬ್ರೆಜಿಲ್‌ನ ಆತ್ಮಾಭಿಮಾನದ ಸಂಕೇತವಾಗಿದ್ದ.

...ನ್ನಾ ತೀರಿಕೊಂಡಾಗ ಅನೇಕರು ಅನೇಕ ರೀತಿಯಲ್ಲಿ ತಮ್ಮ ದುಃಖ ತೋಡಿಕೊಂಡರು. ಕೆಲವರು ...ವಿಲಿಯಮ್ಸ್-ರೆನಾಲ್ಟ್ ಕಾರನ್ನು ಟೀಕಿಸಿದರು, ಕೆಲವರು ಇಟಲಿಯ ಇಮೋಲಾ ರೇಸ್ ರಸ್ತೆಯ ...ನ್ನು ಟೀಕಿಸಿ ಅಲ್ಲಿಯ ಕಲ್ಲುಗೋಡೆಗೆ ಬದಲು ಟೈರ್, ಕುಶನ್ ಇರಬೇಕಿತ್ತೆಂದರು, ಕೆಲವರು ...ಸೆನ್ನಾಗಳನ್ನು ಬಲಿ ತೆಗೆದುಕೊಳ್ಳುತ್ತೀರಿ' ಎಂದು ವ್ಯವಸ್ಥಾಪಕರಿಗೆ ಛೀಮಾರಿ ಹಾಕಿದರು... ಆದರೆ ...ನೋಡರೆ ಬುಲ್ ಫೈಟಿಂಗ್, ಬಾಕ್ಸಿಂಗ್, ಕಾರ್ ರೇಸಿಂಗ್‌ನಲ್ಲಿ ಹಣವಿದ್ದಷ್ಟೇ ವೈಭವ, ಖ್ಯಾತಿ, ಸೊಕ್ಕು ...ಸೇರಿದೆ; ಸಾವಿನ ಅಪಾಯ ಇರುವುದರಿಂದಲೇ ಇದು ಪ್ರಖ್ಯಾತ ಕ್ರೀಡೆ. ಯಾರೂ ಸಾಯಲಾರದ, ...ಸುರಕ್ಷಿತ ಕಾರ್ ರೇಸ್.... ಯಾರೂ ನೋಡುವುದಿಲ್ಲ. 250 ಮೈಲಿ ಅಥವಾ 400 ಕಿಲೋಮೀಟರ್ ...ಲ್ಲಿ ಹೋಗುವ ವೀರಾಧಿವೀರ ಸಾಯಬಹುದು ಅಥವಾ ಸಾಯದಿರಬಹುದು-ಅದೇ ಇಲ್ಲಿಯ ...ಪ, ಅದೇ ಇಲ್ಲಿಯ ರಂಜನೆ ಕೂಡ.

## ಎಷ್ಟು ಬೇಡಿದರೂ ಬಾರದವಳು....


ಈ ಬದುಕಿನ ದೊಡ್ಡ ಜೋಕ್ ಮತ್ತು ಖುಷಿ ಏನೆಂದರೆ, ಸದ್ಯ ನಾವು ಯಾವುದಕ್ಕಾಗಿ ಕನಸಿ ಕಾತರಿಸುತ್ತೇವೆಯೋ ಅದು ಸಿಕ್ಕುವುದಿಲ್ಲ! ನಾವು ಮದುವೆಯಾಗಬೇಕೆಂದಿದ್ದ ಹುಡುಗಿಯನ್ನೇ ತೆಗೆದುಕೊಳ್ಳಿ. ಇವಳನ್ನು ನಾವು ನೋಡಿದ್ದೇ ದೂರದಿಂದ. ಆದ್ದರಿಂದಲೇ ನಾವು ಇವಳ ಬಗ್ಗೆ ಊಹಿಸತೊಡಗಿದ್ದು. ಅಷ್ಟರಲ್ಲಿ ನಾವು ಬಲ್ಲ ಜ್ಞಾನಿಗಳು, ಸಂತರು, ಅನುಭವಸ್ಥ ಗೆಳೆಯರು ನಮಗೆ ಎಚ್ಚರಿಕೆ ನೀಡಿದ್ದರು-ಆ ಹುಡುಗಿಯ ಬಗ್ಗೆ ಸ್ವಲ್ಪ ಜಾಗ್ರತವಾಗಿರು! ಆಕೆ ನಿನ್ನ ಮನಸ್ಸಿಗೆ ಪದೆಪದೇ ಬರುತ್ತಿದ್ದಾಳೆ! ಸಂಸಾರವೆಂಬುದು ಕಡುಕಷ್ಟ. ಇವತ್ತು ಅಪ್ಸರೆಯಂತೆ ಮಿಂಚುವವಳು ನಾಳೆ ಎಲ್ಲರಂತೆ ಆಗುತ್ತಾಳೆ. ಅವಳೂ ಸ್ನಾನ ಮಾಡಬೇಕು, ಉಣ್ಣಬೇಕು, ಉಚ್ಚೆ ಹೊಯ್ಯಬೇಕು, ದ್ರವಿಸಬೇಕು. ಕಂಡದ್ದು ಒಂದಾದರೆ, ಇನ್ನು ನಾಲ್ಕು ಇಂದ್ರಿಯಗಳು ಅನುಭವಿಸಬೇಕಾದ್ದು ನೂರಾರು ಬಗೆಯ ಗೋಳುಗಳು.... ಇವರೆಲ್ಲ ಬಗೆಬಗೆಯಾಗಿ ಹೇಳಿದರೂ ನಮ್ಮ ಉತ್ತರ, 'ಈ ಸಂತ ಗೊಡ್ಡುಗಳಿಗೇನು ಗೊತ್ತಿದೆ? ಇವಳು ನನ್ನಲ್ಲಿ ತಾತ್ಸಾರ ಹುಟ್ಟಿಸಲಾರಳು. ಇವಳನ್ನು ನೋಡಿದರೇ ಕಿನ್ನರಲೋಕ ತೆರೆದುಕೊಂಡಂತಾಗುತ್ತದೆ. ಇವಳ ಒಂದೇ ನೋಟ ಸಾಕು, ಮತ್ತೇನೂ ಬೇಡ. ಅಲ್ಲದೆ ಈಕೆ ಎಷ್ಟು ಅಚ್ಚುಕಟ್ಟು, ಎಷ್ಟು ವ್ಯಾಮೋಹಿ, ಎಂಥ ಕ್ಷಮಾನಿಧಿ.....'

ಹೀಗೆ ನಡೆಯುತ್ತದೆ ಕನಸು. ಇವಳಿಗಾಗಿ ಹುನ್ನಾರಗಳು, ಇವಳನ್ನು ಮೆಚ್ಚಿಸಲು ಕಲೆ, ಕತೆ, ಅಭಿನಯ, ಕುಸ್ತಿ, ಎಲ್ಲವೂ ಈಕೆಯನ್ನು ನಿರುತ್ಸಾಹಿಯನ್ನಾಗಿ ಮಾಡುತ್ತದೆ. ಕಲೆ, ಕತೆ ಇತ್ಯಾದಿಯನ್ನೆಲ್ಲ ನಮಗಿಂತ ಬೇರೆಯವರು ಚೆನ್ನಾಗಿ ಮಾಡಬಲ್ಲರು. ಅಥವಾ ಈಕೆಯ ಚಿಗುರುವ ಮನಸ್ಸಿಗೆ ('ದಡ್ಡಿ' ಎನ್ನಲಾದೀತೆ?) ಅವರ ಕಲೆಯೇ ಹೆಚ್ಚು ಆಕರ್ಷಕ. ಆದ್ದರಿಂದ ಆಕೆ ದೂರ ಸರಿಯುತ್ತಲೇ ಹೋಗುತ್ತಾಳೆ. ನನ್ನ ಮಗ್ಗುಲಲ್ಲಿದ್ದು ತಲೆ ಒತ್ತಬೇಕಾದವಳು, ನನ್ನ ಕಲೆಯನ್ನು ಹೊಗಳಬೇಕಾದವಳು, ಸ್ಫೂರ್ತಿಗೆ ಪುಂಗಿ ಊದಬೇಕಾದವಳು, ರಸಿಕತೆಗೆ ದೀಪ ಹಚ್ಚಬೇಕಾದವಳು, ಬರುವುದೇ ಇಲ್ಲ, ದೂರ ಹೋಗಿದ್ದಾಳೆ. ಆದರೆ ಯಾವುದೂ ನಿಲ್ಲುವುದಿಲ್ಲ, ಹಾರಾಡುವ ಆಕೆಯ ಬದಲು ನಡೆದಾಡುವ ಈಕೆ ಬಂದಿದ್ದಾಳೆ. ಬ್ಯಾಗ್ ಕೈಯಲ್ಲಿಟ್ಟು ರೇಷನ್ ಶಾಪ್‌ಗೆ ತಳ್ಳುತ್ತಾಳೆ. ಸಿಂಬಳ ಸುರಿಯುವ ಮಗುವನ್ನು ಹೆಗಲಿಗೇರಿಸಿ ಸ್ಕೂಲಿಗೆ ಕಳಿಸುತ್ತಾಳೆ.

'ಆಕೆ' ಹಾಗಲ್ಲ, ಇಂಥ ಗೋಳುಗಳೆಲ್ಲ ಇಲ್ಲದವಳು. Pure, lovely, radiant. ಮುಪ್ಪಿನಲ್ಲಿ ಕೂಡ ಆಕೆಗೆ ಬಚ್ಚುಬಾಯಿ ಇಲ್ಲ.

ಬರಲೇ ಇಲ್ಲ ಆಕೆ. ಆದ್ದರಿಂದಲೇ ಸುಂದರಿ!

ಮೇ 25,1994



# ಅವನು ಅತಿಭ್ರಷ್ಟ ಸಾಲದ್ದಕ್ಕೆ ಪೆದ್ದ


ಈ ಮಾತುಗಳನ್ನು ಯಾರು, ಯಾರಿಗೆ ಹೇಳಿದರು?

ಯಾರು: ವಿಪಕ್ಷ ನಾಯಕ ಸಿದ್ಧರಾಮಯ್ಯ

ಯಾರಿಗೆ: ಕೆ.ಎಸ್. ಈಶ್ವರಪ್ಪನವರನ್ನು ಕುರಿತು ಮಾಧ್ಯಮಗಳಿಗೆ.

(ಉತ್ತರನ ಪೌರುಷ ಒಲೆ ಮುಂದೆ; ಸಿದ್ಧರಾಮಯ್ಯ ಪೌರುಷ ಮಾಧ್ಯಮಗಳ ಎದುರು! ಸನ್ಮಾನ್ಯರ ಎದುರೇ ಇಂತಹ ಮಾತುಗಳನ್ನಾಡಲು ಕೆಚ್ಚದೆಬೇಕಲ್ಲ! ಅಂಗಾಂಗಗಳ ರಕ್ಷಣೆಯ ದೃಷ್ಟಿಯಿಂದ ಹೀಗೆ ಮಾಡುವ ಅನಿವಾರ್ಯವಾಯಿತೋ ಏನೊ!)

## ಅಣಕ



▶ ಎಚ್.ಎಲ್. ಕೇಶವಮೂರ್ತಿ

ಪ್ರತಿಕ್ರಿಯೆ: ಈ ಹೇಳಿಕೆಗೆ ನಮ್ಮ ವಿರೋಧ ಇದೆ. ಇದನ್ನು ನಾವು ತೀವ್ರವಾಗಿ ಪ್ರತಿಭಟಿಸುತ್ತೇವೆ.

ಕಾರಣ.....

ರಾಜ್ಯ ಭಾಜಪ ಅಧ್ಯಕ್ಷರೂ ಆಗಿರುವ ಸನ್ಮಾನ್ಯ ಕೆ.ಎಸ್. ಈಶ್ವರಪ್ಪನವರು ಶಿವಮೊಗ್ಗದಲ್ಲಿ ಮಾಡಿರುವ, ಹಾಗೂ ಮಾಡಲು ಉದ್ದೇಶಿಸಿರುವ ಅಪಾರ ಆಸ್ತಿಯನ್ನು ಯಾರೂ ಅಲ್ಲಗಳೆಯುವಂತಿಲ್ಲ. ಅಲ್ಲಿ ಯಾವುದೇ ಹೊಸ ಕಟ್ಟಡ ಆಗಲಿ ಅದು ಸನ್ಮಾನ್ಯ ಯಡ್ಯೂರಪ್ಪನವರ ಅಥವಾ ಸನ್ಮಾನ್ಯ ಈಶ್ವರಪ್ಪನವರ ವಂಶಜರದ್ದಾಗಿರುತ್ತದೆ ಎಂಬುದು ನಿಸ್ಸಂಶಯ. ಅವರು ಭ್ರಷ್ಟರು ಇರಬಹುದು. ಆದರೆ ಪೆದ್ದರಂತೂ ಖಂಡಿತ ಅಲ್ಲ!

ಭ್ರಷ್ಟಾಚಾರ ಹಾಗೂ ಪೆದ್ದುತನ ಒಂದೆಡೆ ಇರಲು ಸಾಧ್ಯ ಇಲ್ಲ. ಅವು ಎಣ್ಣೆ ಸೀಗೆಗಾಯಿ ಇದ್ದಂತೆ. ಭ್ರಷ್ಟ ಪೆದ್ದನಾಗಿರಲು ಸಾಧ್ಯ ಇಲ್ಲ. ನಿಮ್ಮ ಹೇಳಿಕೆ ಅರ್ಧ ಸತ್ಯವೇ ಪರಂತು ಪೂರ್ಣ ಸತ್ಯವಂತೂ ಅಲ್ಲ. ಇಂತಹ ಹೇಳಿಕೆ ನೀಡುವುದರ ಮುಖಾಂತರ ಅವರಿಗೆ ಅವಮಾನ ಮಾಡಬೇಡಿ. ನಿಮ್ಮ ಹೇಳಿಕೆ ಸನ್ಮಾನ್ಯರ ಮೇಧಾಶಕ್ತಿಯನ್ನೇ ಶಂಕಿಸುತ್ತದೆ. ಈ ಕಾರಣದಿಂದಾಗಿ ನಿಮ್ಮ ವಿರುದ್ಧ ಮಾನನಷ್ಟ ಮೊಕದ್ದಮೆ ಬೇಕಾದರೂ ಹೂಡಬಹುದಾಗಿದೆ.

ಸನ್ಮಾನ್ಯ ಈಶ್ವರಪ್ಪನವರೇನು ಅನ್ನುತ್ತಾರೋ....

ಅದರ ಅವಶ್ಯಕತೆ ನಮಗಿಲ್ಲ! ನನ್ನನ್ನು ಹೀಯಾಳಿಸಿದವರ ನಾಲಿಗೆ ಕೀಳ್ತೀನಿ, ಕೈ ಕತ್ತರಿಸ್ತೀನಿ, ಕಾಲು ಮುರೀತಿನಿ ಎನ್ನುತ್ತಾ ಲಾಂಗ್ ಝಳಪಿಸಿದರು ಸನ್ಮಾನ್ಯ ಈಶ್ವರಪ್ಪನವರು!

ಲಾಂಗ್ ಎತ್ತಿ ಹಿಡಿದು ಅವರು ನಿಂತಿರುವ ಭಂಗಿ ಥೇಟ್ ಚಾಮುಂಡಿಬೆಟ್ಟದ ಮಹಿಷಾಸುರ ಇದ್ದಂಗೇ ಇತ್ತು!

ತಕ್ಷಣ ಎಚ್ಚರ ಆಯಿತು. ಹಾಳಾದ ಕನಸು. ಕೆ.ಎಸ್. ಈಶ್ವರಪ್ಪನವರು ಯಡ್ಯೂರಪ್ಪನವರ ವಿರುದ್ಧ ಏಕವಚನ ಪ್ರಯೋಗ ಮಾಡಿದರೆ ಅವರ ನಾಲಿಗೆ ಸೀಳ್ತೀನಿ, ಗೋಹತ್ಯೆ ಬೆಂಬಲಿಸಿದವರ ಕೈ ಕತ್ತರಿಸ್ತೀನಿ ಅನ್ನೋದನ್ನೇ ಯೋಚಿಸುತ್ತಾ ನಿದ್ದೆಗೆ ಜಾರಿದ್ದೆ-

ಅಲ್ಲಾ ಓಬೀರಾಯನ ಕಾಲದವರ ತರಹಾನೆ ಇನ್ನೂ ಕತ್ತಿ ಲಾಂಗುಗಳಲ್ಲೇ ಇದ್ದಾರಲ್ಲ ಸನ್ಮಾನ್ಯ ಈಶ್ವರಪ್ಪನವರು. ವಿರೋಧಿಗಳ ಎದೆಗೆ ಗುಂಡು ಹಾಕುಸ್ತೀನಿ ಅಂತಾನೋ ಇಲ್ಲ ವಿರೋಧಿಗಳ ಸಭೆಗೆ ಆತ್ಮಹತ್ಯಾದಳ ನುಗ್ಗುಸ್ತೀನಿ ಅಂತಾನೋ ಹೇಳಿದ್ದರೆ ಸಮಕಾಲೀನ ವ್ಯವಸ್ಥೆಗೆ ಹೊಂದಿಕೊಳ್ಳುತ್ತಿರಲಿಲ್ಲವೆ? ಇನ್ನಾದರೂ ಸನ್ಮಾನ್ಯರು ಲಾಂಗು ಬಿಟ್ಟು ರಿವಾಲ್ವರ್ ಹಿಡಿಯಲಿ. ಆಗ ಮಚ್ಚು ಎಸೆದು ರಿವಾಲ್ವರ್ ಹಿಡಿದ ಮಹಿಷಾಸುರ ಸಮಕಾಲೀನನಾಗಿ ನೋಡೋಕೆ ಎರಡು ಕಣ್ಣು ಸಾಲದು ಅಲ್ವಾ.....

ಆಹಾ ಜಾತಿಯೇ ಏನು ನಿನ್ನ ಮಹಿಮೆ!

'ದೇಜಗೌ ಮತ್ತು ವಿಶ್ವೇಶತೀರ್ಥ ಇಬ್ಬರೂ ಒಂದೆ' ಅಂದೆ.

'ಯಾವುದರಲ್ಲಿ?' ಎಂದು ಕೇಳಿದ ಗೆಳೆಯ.

'ಉಪವಾಸ ಕೂರುವುದರಲ್ಲಿ' ಎಂದೆ.

ಗೆಳೆಯ ಪ್ರತಿಭಟಿಸಿದ.

'ವಿಶ್ವೇಶತೀರ್ಥರು ಉಪವಾಸ ಕೂರ್ತೀನಿ ಅಂತಾರೆ. ದಿನಾಂಕ ಹತ್ತಿರ ಬಂದಂತೆ ಮುಂದೂಡ್ತಾರೆ. ಇವರು ಹಾಗಲ್ಲ' ಅಂದ.

'ಕಾಲ ಕೂಡಿಬರದೆ ಇರಬಹುದು' ಎಂದೆ.

ವಿಶ್ವೇಶತೀರ್ಥರು ಹೇಳಿದಂತೆ ಉಪವಾಸ ಕೂರಲು ಹಲವಾರು ಕಾರಣಗಳು ಅಡ್ಡಿ ಬಂದಿರಬಹುದು. ಉಪವಾಸ ಮಾಡಿದರೆ ದೇಹದ ಶಕ್ತಿ ಕುಂದುತ್ತದೆ- ಅಸ್ಪೃಶ್ಯರ ಮೇಲೆ ಎಲ್ಲೇ ದೌರ್ಜನ್ಯ ನಡೆದರೂ ನಾನು ಅಲ್ಲಿ ಹಾಜರಿದ್ದು ಪ್ರತಿಭಟಿಸುತ್ತೇನೆ ಎಂದು ಶ್ರೀಗಳು ಮೈಸೂರಿನಲ್ಲಿ ಅಸ್ಪೃಶ್ಯರ ಕಾಲೋನಿಗೆ ಹೋಗಿದ್ದಾಗ ಘೋಷಿಸಿದ್ದರು. ಉಪವಾಸ ಸತ್ಯಾಗ್ರಹ ಕುಳಿತರೆ ಪ್ರತಿಭಟಿಸಲು ಶಕ್ತಿಯೇ ಇರುವುದಿಲ್ಲವಲ್ಲಾ ಎಂದು ವಿವರಿಸಬೇಕೆಂದಿದ್ದೆ. ಇನ್ನೆಲ್ಲಿ ಅದಕ್ಕೂ ಕೊಂಕು ನುಡಿದ್ಯಾನೋ, ಅಸ್ಪೃಶ್ಯ ಕಾಲೋನಿಗೆ ಹೋಗಿ ಬಂದ ನಂತರ 'ಮೈಲಿಗೆ' ತೊಳೆದುಕೊಳ್ಳಲು ಏನು ಮಾಡಿದರು? 'ಮಡಿ' ಮಾಡಿಕೊಂಡರಲ್ಲವೆ ಎಂಬಂತಹ ಇಕ್ಕಟ್ಟಿನ ಪ್ರಶ್ನೆಗಳಲ್ಲಿ ತಗುಲಿಸಿಯಾನು ಎಂದು ಸುಮ್ಮನಾದೆ.

'ಇರಬಹುದು. ದೇಜಗೌ ಹಾಗಲ್ಲ. ಉಪವಾಸ ಕೂರ್ತೀನಿ ಅಂದ್ರೆ ಕುಂತೇಕುರ್ತಾರೆ' ಎಂದ ಗೆಳೆಯ.

ಹೌದು. ಗೆಳೆಯನ ಮಾತಿನಲ್ಲೂ ಸತ್ಯ ಇತ್ತು. ದೇಜಗೌ ಉಪವಾಸ ಸತ್ಯಾಗ್ರಹ ಮಾಡ್ತೀನಿ ಅಂದಿದ್ದರು. ಹಾಗೆ ಮಾಡಿದರೂ ಕೂಡ. ಇದು ಮೊದಲ ಸಲ ಅಲ್ಲ. ಕಾಲಕಾಲಕ್ಕೆ ಇಂತಹ ಉಪವಾಸ ಸತ್ಯಾಗ್ರಹಗಳನ್ನು ಒಂದು ವ್ರತದಂತೆ ಪರಿಪಾಲಿಸುತ್ತಲೇ ಇರುತ್ತಾರೆ. ಇಷ್ಟು ಮಾತ್ರ ಅಲ್ಲ, ಹಲವು ಬಾರಿ ಆಮರಣಾಂತ ಉಪವಾಸವನ್ನೂ ಕೈಗೊಂಡಿದ್ದಾರೆ! ಇದನ್ನು ಮುಂದುವರಿಸುವ ಎಚ್ಚರಿಕೆಯನ್ನೂ ನೀಡಿದ್ದಾರೆ! ಇತ್ತೀಚಿನ ಸತ್ಯಾಗ್ರಹದಲ್ಲಿ ಮೈಸೂರಿನ ಸಾಹಿತ್ಯ ಮತ್ತು ಸಾಂಸ್ಕೃತಿಕ ಲೋಕದ ಕೆಲವು ದಿಗ್ಗಜರು ಸಾಥ್ ನೀಡಿ ತಮ್ಮ ಸಹಮತ ವ್ಯಕ್ತಪಡಿಸಿದ್ದಾರೆ. ಇವರಲ್ಲಿ ಬಹುಪಾಲು ಒಕ್ಕಲಿಗರು ಎಂದು ಪ್ರತ್ಯೇಕ ಹೇಳಬೇಕಾಗಿಲ್ಲವಷ್ಟೆ!



ಪ್ರಸ್ತುತ ಒಂದು ದಿವಸದ ಉಪವಾಸ ಸತ್ಯಾಗ್ರಹ ಹೂಡಿರುವುದು ಮೈಸೂರು ವಿಶ್ವವಿದ್ಯಾಲಯದ ಘನತೆ ಕಾಪಾಡಲು!

ಏನಾಗಿತ್ತು ಅದರ ಘನತೆಗೆ?

ಹಿಂದಿನ ಕುಲಪತಿಗಳಾದ ಶಶಿಧರ ಪ್ರಸಾದ್ ಅ... ಬೋಧಕ ಸಿಬ್ಬಂದಿ ನೇಮಕಾತಿಯಲ್ಲಿ ಅಕ್ರಮ ಎಸ... ಆರೋಪವಿತ್ತು. ಅವರ ಮೇಲೆ ಶಿಸ್ತಿನ ... ಜರುಗಿಸಬೇಕೆಂದು ಕೆಲವರು ಒತ್ತಾಯಿಸಿ ಪ್ರತಿಭಟಿಸುತ್ತಿ... ಅದರ ವಿರುದ್ಧ ನಾಡೋಜ ಅವರ ಉಪವಾಸ ಸತ್ಯಾ...

ಅಕ್ರಮ ನೇಮಕಾತಿ ಆರೋಪ ಎಸಗಿರುವ ಕುಲಪ... ಮೇಲೆ ಕ್ರಮ ಕೈಗೊಳ್ಳಬಾರದೆ? ಮೈಸ... ವಿಶ್ವವಿದ್ಯಾಲಯದ ಘನತೆ ಇದರಿಂದ ಹೆಚ್ಚುತ್ತಿರಲಿಲ್ಲ...

ಹಾಗಲ್ಲ, ವಿಶ್ರಾಂತ ಕುಲಪತಿಗೆ ಶಿಕ್ಷೆ ಮಾಡಿದ... ಮೈಸೂರು ವಿಶ್ವವಿದ್ಯಾಲಯಕ್ಕೇ ಕಳಂಕ ಹಚ್ಚಿದಂತೆ... ಯಾಕೆಂದರೆ ಕುಲಪತಿಗಳಾದವರು ವೃತ್ತಿ ಪ್ರಾವೀಣ್ಯ... ಇರುವವರು.

ಅವರ ನಿವೃತ್ತಿ ನಂತರ ಕ್ರಮ ಜರುಗಿಸುವುದು ವ್ಯವಸ್ಥೆಗೆ ಶೋಭೆ ತರುವುದಿಲ್ಲ. ರಾಜ್ಯದ ಬಹುತೇಕ ಕುಲಪತಿಗಳ ಮೇಲೆ ಇಂತಹ ಆರೋಪ ಇದೆ. ಅವರ ಮೇಲೆಲ್ಲ ಕ್ರಮ ಜರುಗಿಸಬೇಕಾಗುತ್ತೆ! ಇದು ಅಸಾಧ್ಯ ಎಂದು ಕುಲಾಧಿಪತಿಗಳೂ ಆದ ರಾಜ್ಯಪಾಲರು ವ್ಯಾಖ್ಯಾನಿಸಿದ್ದಾರೆ!

ಹಾಗಾದರೆ ಕುಲಪತಿಗಳಾದವನು ಅಕ್ರಮ ಎಸಗಿದರೆ ಶಿಕ್ಷೆಯೇ ಇಲ್ಲವೆ? ಇಂತಹ ತೀರ್ಮಾನ ವಿಶ್ವವಿದ್ಯಾಲಯಗಳಲ್ಲಿ ಭ್ರಷ್ಟತೆಗೆ ಪ್ರೋತ್ಸಾಹಿಸಿದಂತಲ್ಲವೆ?

ಇದು ಇರಬಹುದು. ಎಲ್ಲಾ ವಿಶ್ರಾಂತ ಕುಲಪತಿಗಳನ್ನು ಬಿಟ್ಟು ಇವರ ಮೇಲೆ ಏಕೆ ಎಲ್ಲರ ಕಣ್ಣು? ಉತ್ತರ ಸ್ಪಷ್ಟವಾಗಿದೆ.

ಅವರು ನಿರ್ದಿಷ್ಟ ಜಾತಿಗೆ ಸೇರಿದವರು

ಹಾಗಿದ್ದಲ್ಲಿ ಎಲ್ಲ ಭ್ರಷ್ಟ ವಿಶ್ರಾಂತ ಕುಲಪತಿಗಳ ವಿರುದ್ಧವೂ ಕ್ರಮ ಜರುಗಿಸುವ... ಒತ್ತಾಯಿಸಬಹುದಲ್ಲ?

ಅದನ್ನೂ ಮಾಡುತ್ತಾರಂತೆ. ಈಗಿನ ತುತ... ಅಂದರೆ ನಾಡೋಜ, ಕರ್ನಾಟಕ ರತ್ನ ಬಿರುದಾಂಕಿತ ದೇಜಗೌ ಅವರು ಸುಪುತ್ರ ದ... ಶಶಿಧರ ಪ್ರಸಾದ್ ಅವರಿಗೆ ಆಗಬಹುದಾದ ಅನ್ಯಾಯದ ವಿರುದ್ಧ ಜಾತಿಯ ಸಂಘಟನೆಗೆ ಕಾರ್ಯೋನ್ಮುಖರಾಗುತ್ತಾರಂತೆ!

ಜಾತಿ ವ್ಯವಸ್ಥೆಯ ಕ್ರೌರ್ಯದ ಬಗ್ಗೆ ತಿಳಿ... ಹೇಳಿ ಎಲ್ಲಾ ವಿಧವಾದ ಅನ್ಯಾಯಗಳ ವಿ... ಸಿಡಿದೇಳುವಂತೆ ಪ್ರೇರೇಪಿಸಬೇಕಾದ ಪ್ರಾಧ್ಯಾಪಕರು ಹಾಗೂ ಸಾಹಿತಿಗಳು ಅಕ್ರಮ ಎಸಗಿದ್ದಾರೆಂಬ ಆರೋಪ ಇರುವ ಒಬ್ಬರನ್ನು ರಕ್ಷಿಸಲು ಇಡೀ ಜನಾಂಗಕ್ಕೇ ಅನ್ಯಾಯವಾಗಿದೆ ಎಂದು ಹುಯಿಲೆಬ್ಬಿ... ಜನಾಂಗದ ಒಗ್ಗೂಡುವಿಕೆಗೆ ಪ್ರಯತ್ನಿಸುತ್ತೇವೆಂದು ಹೇಳುತ್ತಿರುವುದು ವಿಶೇಷವೇ ಸರಿ! 'ಜನಾಂಗಧ್ರುವೀಕರಣ' ಬಗ್ಗೆ ಮುಂದಾಗಿರುವ ಇಂತಹ ಪ್ರಚಂಡರ ಗರಡಿಯಲ್ಲಿ ಬೆಳೆದ ಯುವಜನತೆಯ ಮುಂದಿನ ಹಾದಿ.....!

# ಸತಿಸಹಗಮನ ಜಾರಿಗೆ ಬಂದೀತು, ಎಚ್ಚರ!

ಇಂಥ ದೇಜಗೌ ಬಗ್ಗೆ ಕುವೆಂಪು ಹೇಗೆ ಸುಮ್ಮನಿದ್ದರು ಅಂತ ಆಶ್ಚರ್ಯವಾಗುತ್ತದೆ. ಅವರನ್ನೇ ನಂಬಿಸಿದ್ದ ಈ ವ್ಯಕ್ತಿ ಅದಿನ್ನೆಂತಹ ನಾಟಕವಾಡಿರಬೇಕು? ಕುವೆಂಪು ಅವರು ಇವತ್ತು ಬದುಕಿದ್ದರೆ ಈತನ ನರಿಬುದ್ಧಿಯ ಬಗ್ಗೆ ಒಂದು ಮಹಾ ಕಾದಂಬರಿಯನ್ನೇ ರಚಿಸುತ್ತಿದ್ದರೇನೋ.

ಅಂದಹಾಗೆ ಟಾಲ್‌ಸ್ಟಾಯ್ ಅವರ 'ಅನ್ನಾ ಕರೇನೀನಾ' ಕಾದಂಬರಿಯನ್ನು ಅಷ್ಟು ಸುಂದರವಾಗಿ ಅನುವಾದಿಸಿದ್ದು ಇದೇ ದೇಜಗೌ ಅಂತಲೂ ಆಶ್ಚರ್ಯವಾಗುತ್ತಿದೆ.

-ರಂಗಸ್ವಾಮಿ, ಮೈಸೂರು

## ಹೊಗಳಿಕೆ ತೆಗಳಿಕೆ

ದೇವೇಗೌಡರ ಪುತ್ರ ವ್ಯಾಮೋಹ ಮತ್ತು ಬಂಗಾರಿಯ ಕಪಿಚೇಷ್ಟೆಗಳಿಂದಾಗಿ, ಕರ್ನಾಟಕಕ್ಕೆ ಅಟಕಾಯಿಸಿದ ಚೆಡ್ಡಿಗಳು ನಿಧಾನವಾಗಿ ತಮ್ಮ ಲಾಡಿಯನ್ನು ಸಡಿಲಗೊಳಿಸುತ್ತಿದ್ದಾರೆ. ಗೋಹತ್ಯೆ ನಿಷೇಧದಂಥ ಭಾವನಾತ್ಮಕ ವಿಷಯವನ್ನೆತ್ತಿಕೊಂಡು, ರಾಜ್ಯಪಾಲ ಮತ್ತು ರಾಷ್ಟ್ರಪತಿಯವರ ವಿರುದ್ಧ ಪ್ರತಿಭಟಿಸುತ್ತಿರುವ ಇವರು ನಮ್ಮ ಪ್ರಜಾಪ್ರಭುತ್ವಕ್ಕೆ ಸೆಡ್ಡು ಹೊಡೆದಿದ್ದಾರೆ.

ಸೃಷ್ಟಿನಿಯಮದ ವಿರುದ್ಧವಾಗಿ ಜಾನುವಾರು ಹತ್ಯೆಯನ್ನು ನಿಷೇಧಿಸಿ, ಇಡೀ ಪ್ರಾಣಿಲೋಕದ ಆಹಾರ ಚಕ್ರ(Food Cycle)ವನ್ನೇ ಬುಡಮೇಲು ಮಾಡಹೊರಟಿದ್ದಾರೆ. ಇವರಿಗೆ ಜಾನುವಾರುಗಳ ಮೇಲೆ ನೈಜ ಕಾಳಜಿ ಇದೆಯೆಂದು ಭಾವಿಸಿದರೆ ಅದು ಮೂರ್ಖತನವಾಗುತ್ತದೆ. ಅಯೋಧ್ಯೆ, ಬಾಬಾಬುಡನ್‌ಗಿರಿಗಳಂತೆ ಇದೂ ಕೂಡಾ ಮುಗ್ಧರನ್ನು ಭಾವೋದ್ರೇಕಗೊಳಿಸಿ ಮತ ಸೆಳೆಯುವ ತಂತ್ರವಷ್ಟೆ.

ಕಳೆದ ಎರಡು ವರ್ಷದಿಂದ ಇವರು ಮಾಡಿರುವ ರಾಡಿ ನೋಡಿ:

1. ಸಾರ್ವಜನಿಕರ ತೆರಿಗೆ ಹಣವನ್ನು ಪರಾವಲಂಬಿ ಮಠಾಧೀಶರಿಗೆ ಧಾರೆಯೆರೆದಿದ್ದು.
2. ಜನಮಾನಸದ ಗೋಕರ್ಣ ದೇಗುಲವನ್ನು ಕೌಬಾಯ್ ಕಳ್ಳನಿಗೆ ಒಪ್ಪಿಸಿದ್ದು.
3. ಹಿಂದೂ ಮತಾಂಧರ ಮೇಲಿನ ಕೇಸುಗಳನ್ನು ವಾಪಸ್ ಪಡೆದಿದ್ದು.
4. ನಮ್ಮ ನಾಡಿನ ಗಡಿಯನ್ನೇ ಅಳಿಸಿ, ಅಪಾರ ಕಬ್ಬಿಣದ ಅದಿರನ್ನು ಕದ್ದು ಮಾರಿದ ರೆಡ್ಡಿಗಳನ್ನು ತಲೆಮೇಲಿಟ್ಟು ಮೆರೆಸುತ್ತಿರುವುದು.
5. ದಾಸರು, ಶರಣರು, ಸೂಫಿಸಂತರ ನಮ್ಮ ಈ ನಾಡಿನಲ್ಲಿ ಕೇಸರಿ ಜಾಡ್ಯವನ್ನು ಹರಡುತ್ತಿರುವುದು.

ಒಂದು ವೇಳೆ ದುರ್ದೈವಶಾತ್, ಚೆಡ್ಡಿಗಳ ಬಯಕೆಯಂತೆ ಜಾನುವಾರು ಹತ್ಯೆ ನಿಷೇಧ ಕಾನೂನು ಜಾರಿಗೆ ಬಂದರೆ ಅದರಿಂದ ಪುಳಕಿತಗೊಂಡು, ಮುಂದೆ ಕೆಳಗಿನ ಕಾರ್ಯಕ್ರಮಗಳನ್ನು ತರಲು ಯತ್ನಿಸಬಹುದು.

1. ಸಂಸ್ಕೃತ ಭಾಷೆಯನ್ನು ಆಡಳಿತ ಭಾಷೆಯನ್ನಾಗಿಸುವುದು.
2. ಸತಿಸಹಗಮನವನ್ನು ಕಡ್ಡಾಯಗೊಳಿಸುವುದು.
3. ರಾಷ್ಟ್ರಗೀತೆಯ ಬದಲು ಗಾಯತ್ರಿ ಮಂತ್ರವನ್ನು ಕಡ್ಡಾಯ ಜಪಿಸುವಂತೆ ಮಾಡುವುದು.
4. ಚೆಡ್ಡಿಗಳ ಕಣ್ಮಣಿಗಳಾದ ಪೇಜಾವರ, ಚಿಮೂ, ಭೈರಪ್ಪರಿಗೆ ಕರ್ನಾಟಕ ರತ್ನ, ನಾಡೋಜ ಇತ್ಯಾದಿ ಕೊಡಿಸುವುದು.
5. ಸರ್ಕಾರಿ ಕಚೇರಿಗಳಲ್ಲಿ ನಕಲಿ ದೇಶಭಕ್ತನಾದ ಹೆಡಗೇವಾರ್‌ಗಳ ಫೋಟೋಗಳನ್ನು ನೇತುಹಾಕುವುದು.

-ಪ್ರೊ.ಪ್ರಕಾಶ್ ಬಿಸ್ನಾಗರ, ಬೆಂಗಳೂರು

## ಜೋಕ್ಸ್

ಹೆಂಡತಿ: ನಿಮಗೆ ಲವ್ ಮಾಡೋದಕ್ಕೆ ಬರೋದಿಲ್ಲ.

ಗಂಡ: ಓ! ಹಾಗಾದರೆ ಮೂರು ಮಕ್ಕಳನ್ನು ನೀನು ಕಂಪ್ಯೂಟರ್‌ನಿಂದ ಡೌನ್‌ಲೋಡ್ ಮಾಡಿದೆಯಾ?

ಹೆಂಡತಿ: ಇಲ್ಲ, ನಿಮ್ಮ ಫ್ರೆಂಡ್‌ನ ಪೆನ್ ಡ್ರೈವ್‌ನಿಂದ ಕಾಪಿ ಮಾಡಿದೆ!

*****

ಯಡಿಯೂರಪ್ಪ ಮೆಂಟಲ್ ಆಗೋದು ಯಾವಾಗ?

ರೆಡ್ಡಿ ಗ್ಯಾಂಗ್ ಕಾಂಗ್ರೆಸ್ ಸೇರಿದಾಗ.

ಇಲ್ಲ, ಇಲ್ಲ!

ದೇವೇಗೌಡರು ಬಿಜೆಪಿ ಸೇರಿದಾಗ.

ಇಲ್ಲ, ಇಲ್ಲ!

ಮತ್ತೆ ಇನ್ಯಾವಾಗ?

ಶೋಭಕ್ಕ ರಾಖಿ ಕಟ್ಟಿದಾಗ!


# ಜೋಗಯ್ಯನ ಜೋಡಿ ಹಿಂದಿ ಜೋಗತಿ

ಕೊನೆಗೂ 'ಜೋಗಯ್ಯ'ನಿಗೆ 'ಜೋಗತಿ' ಸಿಕ್ಕೇಬಿಟ್ಟಳು! ಆಕೆಯ ಹೆಸರು ...ತ್ ಕೌರ್ ಅತ್ವಾಲ್. ಈಕೆ ಈಗ ಶಿವರಾಜ್‌ಕುಮಾರ್ ಅಭಿನಯದ ...ನೇ ಚಿತ್ರವಾದ 'ಜೋಗಯ್ಯ' ಚಿತ್ರದಲ್ಲಿ ನಾಯಕಿಯಾಗಿ ನಟಿಸಲಿದ್ದಾಳೆ.

...ಳೆದ ಒಂದು ವರ್ಷದಿಂದ 'ಜೋಗಯ್ಯ'ನಿಗೆ ಬಾಲಿವುಡ್ ನಾಯಕಿಯೇ ... ಎಂದು ನಿರ್ದೇಶಕ ಪ್ರೇಮ್ ಓಡಾಡುತ್ತಿದ್ದರು. ಹಾಗಂತ ... ಶಿಷ್ಯರು ಆಗಾಗ್ಗೆ ಸುದ್ದಿಯನ್ನು ತೇಲಿಬಿಡುತ್ತಿದ್ದರು. ಹೀಗಾಗಿ ...ರಾಜ್‌ಕುಮಾರ್‌ಗೆ ಜೋಡಿಯಾಗಿ ಮೊದಲು ಕೇಳಿಬಂದ ...ು ಅಮಿಷ ಪಾಟೀಲ್. ಅದಾದ ಸ್ವಲ್ಪ ಸಮಯದಲ್ಲಿ ...ು ಹೆಸರು ತೆರೆಮರೆಗೆ ಸರಿಯಿತು. ಅಮಿಷ ಬದಲಿಗೆ ...ಂಕ ಚೋಪ್ರಾಳೇ 'ಜೋಗಯ್ಯ'ನಿಗೆ ಜೋಡಿಯಾಗಲಿದ್ದಾಳೆ ... ಸುದ್ದಿಯೂ ಗಾಂಧಿನಗರದಲ್ಲಿ ಒಂದು ರೌಂಡ್ ಹಾಕಿತು. ... ಅದರ ಹಿಂದೆಯೇ "ಪ್ರಿಯಾಂಕಳಿಗೆ ಡೇಟ್ಸ್ ಪ್ರಾಬ್ಲಮ್ ... ಅವಳ ಬದಲಿಗೆ ರಾಣಿ ಮುಖರ್ಜಿ ಬಹುತೇಕ ಫಿಕ್ಸ್ ...ಾಳೆ" ಎಂಬ ಸುದ್ದಿಯೂ ಹರಿದಾಡಿತು.



...ದರೆ ಆನಂತರ ಮತ್ತೆ ಅಪಸ್ವರದ ಮಾತುಗಳು ಕೇಳಿಬಂದವು. ... ಮುಖರ್ಜಿಯ ಬಾಯ್‌ಫ್ರೆಂಡ್ ನಿರ್ದೇಶಕ ಚೋಪ್ರಾ ಆಕೆಗೆ ಕನ್ನಡದಲ್ಲಿ ...ಲು ಇನ್ನು ಗ್ರೀನ್‌ಸಿಗ್ನಲ್ ಕೊಟ್ಟಿಲ್ಲವಂತೆ" ಎಂಬ ಮಾತುಗಳವು. ಅಲ್ಲಿಗೆ ... ಮುಖರ್ಜಿಯ ಕನ್ನಡ ಎಂಟ್ರಿ ಸುದ್ದಿಯೂ ಮಾಯವಾಯಿತು. ಆಗ ...ವುಡ್ ಬೆಡಗಿ ಕಂಗನಾ ರಾವತ್ ಬಗ್ಗೆಯೂ ಮಾತುಗಳು ಕೇಳಿಬಂದವು.



ಹೀಗೆ ಕಳೆದ ಒಂದು ವರ್ಷದಲ್ಲಿ ಶಿವಣ್ಣನ 100ನೇ ಚಿತ್ರಕ್ಕೆ 100 ನಾಯಕಿಯರ ಹೆಸರುಗಳು ಕೇಳಿಬಂದಿರ ಬಹುದು. ಆದರೆ ಇದ್ಯಾವ ಹೆಸರುಗಳನ್ನು ಸ್ವತಃ ನಿರ್ದೇಶಕ ಪ್ರೇಮ್ ನೇರವಾಗಿ ಮಾಧ್ಯಮದ ಮುಂದೆ ಹೇಳಿರಲಿಲ್ಲ, ಬದಲಾಗಿ ತನ್ನ ಶಿಷ್ಯಂದಿರ ಮುಖಾಂತರ ಪರೋಕ್ಷವಾಗಿ ಈ ಸುದ್ದಿಗಳು ಪತ್ರಿಕೆಗಳಲ್ಲಿ, ಚಾನೆಲ್‌ಗಳಲ್ಲಿ ಬರುವಂತೆ ನೋಡಿಕೊಂಡಿದ್ದರು. ಹೀಗೆ ಗಿಮಿಕ್ ರಾಜ ಪ್ರೇಮ್ 'ಜೋಗಯ್ಯ' ಚಿತ್ರಕ್ಕಾಗಿ ಬಾಲಿವುಡ್ ಬೆಡಗಿಯ ಬೆನ್ನಟ್ಟಿದ್ದು ರೋಮಾಂಚನಾಕಾರಿ ಸುದ್ದಿಗಳಾಗಿ ಮಾರ್ಪಾಡಾಗುತ್ತಿದ್ದವು. ಇವೆಲ್ಲವೂ ತನ್ನ ಚಿತ್ರಕ್ಕೆ ಪುಕ್ಕಟೆ ಪಬ್ಲಿಸಿಟಿ ತರುತ್ತಿದ್ದವು ಎಂಬುದನ್ನು ಅರಿಯದಷ್ಟು ದಡ್ಡನಲ್ಲ ಪ್ರೇಮ್.

ಈ ಮಧ್ಯೆ 'ಜೋಗಯ್ಯ' ಚಿತ್ರದ ಮುಹೂರ್ತವನ್ನು ಪ್ರೇಮ್ ತುಂಬಾ ಅದ್ಧೂರಿಯಾಗಿ ಮಾಡಿದರು. ತೆಲುಗಿನ ಮೆಗಾಸ್ಟಾರ್ ಚಿರಂಜೀವಿ, ತಮಿಳಿನ ಸೂರ್ಯ ಮತ್ತು ವಿಜಯ್ ಈ ಸಮಾರಂಭಕ್ಕೆ ಬಂದು ಶುಭ ಹಾರೈಸಿದರು. ಅದನ್ನು ನೋಡಿ ಪುಳಕಿತರಾದ ಶಿವಣ್ಣನ ಅಭಿಮಾನಿಗಳು ಪ್ರೇಮ್ ಖಂಡಿತವಾಗಿಯೂ ಬಾಲಿವುಡ್‌ನ ಬೆಡಗಿಯನ್ನೇ ಈ ಚಿತ್ರಕ್ಕೆ ತರುತ್ತಾರೆಂದು ಸಂಭ್ರಮಿಸಲು ಆರಂಭಿಸಿದರು.

ಆದರೆ ಕೊನೆಗೆ ಈಗ ಶಿವಣ್ಣನ 100ನೇ ಚಿತ್ರಕ್ಕೆ ಪ್ರೇಮ್ ಹುಡುಕಿ ತಂದಿರುವ ನಾಯಕಿ ಯಾರು ಗೊತ್ತೆ? ಆಕೆ ನಟಿಸಿದ ಚಿತ್ರಗಳೆಷ್ಟು ಗೊತ್ತೆ? ಸುಮಿತ್ ಕೌರ್ ಇಲ್ಲಿಯ ತನಕ ನಟಿಸಿರುವುದು ಒಂದೇ ಒಂದು ಹಿಂದಿ ಚಿತ್ರದಲ್ಲಿ ಮಾತ್ರ. ಅದೂ ಬೋರ್ಡ್‌ಗಿಲ್ಲದ ಚಿತ್ರ. ಆಕೆಯ ಬಯೋಡಾಟಾವನ್ನು ಹೇಳುವುದಾದರೆ 'ಮಾಡೆಲಿಂಗ್ ಜಗತ್ತಿನಿಂದ ಸಿನಿಮಾರಂಗಕ್ಕೆ ಬಂದಿರುವವಳು' ಎಂದು ನಾಲ್ಕು ಪದಗಳಲ್ಲಿ ಮುಗಿಸಬಹುದು.

ಅವಳು ಯಾವ್ಯಾವ ಪ್ರಾಡೆಕ್ಟ್‌ಗಳಿಗೆ ಬ್ರ್ಯಾಂಡ್ ಅಂಬಾಸಡರ್ ಆಗಿದ್ದಳು ಎಂಬ ಬಗ್ಗೆಯೂ ಮಾಹಿತಿ ಇಲ್ಲ. ಅಂದರೆ ಆಕೆ ಅನಾಮಿಕಳು, ಚಿತ್ರರಂಗದಲ್ಲಿ ಅಂಬೆಗಾಲಿಡುತ್ತಿರುವ ಹೊಸಬಳು ಎಂದು ಓದುಗರು ಅರ್ಥೈಸಿಕೊಳ್ಳಬೇಕಾಗಿದೆ.

'ಜೋಗಿ' ಚಿತ್ರದ ಸಂದರ್ಭದಲ್ಲೂ ಪ್ರೇಮ್ ಇದೇ ರೀತಿಯ ಗಿಮಿಕ್ ಮಾಡಿದ್ದರು. ಆಗಲೂ ಅಷ್ಟೇ, ಶಿವಣ್ಣನಿಗೆ ಬಾಂಬೆ ಹುಡುಗಿಯರು ನಾಯಕಿಯರಾಗಿ ಬರುತ್ತಾರೆ ಎಂದು ಪ್ರೇಮ್ ಹವಾ ಎಬ್ಬಿಸಿದ್ದರು. ಆ ಹವಾಕ್ಕೆ ಗಾಂಧಿನಗರದ ಜನ ಮತ್ತು ಶಿವಣ್ಣನ ಅಭಿಮಾನಿಗಳು ಮರುಳಾಗಿದ್ದರು. ಕೊನೆಗೆ 'ಜೋಗಿ'ಗೆ ನಾಯಕಿಯಾದದ್ದು ಜೆನ್ನಿಫರ್ ಕೊತ್ವಾಲ್ ಎಂಬ ಮಾಡೆಲಿಂಗ್ ಕ್ಷೇತ್ರದ ಹುಡುಗಿ.

ಅಂದರೆ, ಸಿನಿಮಾ ಪ್ರಾರಂಭಿಸುವ ಮುನ್ನವೇ ಅದರಲ್ಲಿ ಯಾರು ನಾಯಕಿ ಆಗಿರುತ್ತಾರೆಂಬ ಊಹೆಯಲ್ಲೇ ಟನ್‌ಗಟ್ಟಲೆ ಪುಕ್ಕಟೆ ಪಬ್ಲಿಸಿಟಿಯನ್ನು ಪಡೆಯುವ ಕಲೆಯನ್ನು ಪ್ರೇಮ್ ರಕ್ತಗತ ಮಾಡಿಕೊಂಡಿದ್ದಾರೆ.

ಸಾಧಾರಣವಾಗಿ ಬಾಲಿವುಡ್ ನಾಯಕಿಯರ ಕಾಲ್‌ಶೀಟ್ ಅಷ್ಟು ಸುಲಭವಾಗಿ ಅಲ್ಪ ಸಮಯದ ಅವಧಿಯಲ್ಲಿ ಸಿಗುವುದಿಲ್ಲ. ಅದಕ್ಕೆ ಕನಿಷ್ಠವೆಂದರೂ ಒಂದು-ಒಂದೂವರೆ ವರ್ಷದ ಮೊದಲೇ ಅವರ ಕಾಲ್‌ಶೀಟ್‌ಗಾಗಿ ಗಾಳ ಹಾಕಬೇಕು. ಅದಾದನಂತರ ಅವರು ಕನ್ನಡದಲ್ಲಿ ನಟಿಸಬೇಕಾದರೆ ಅವರಿಗೆ ವಿಶೇಷವಾದ ಮೊತ್ತ ಮತ್ತು ವಿಶಿಷ್ಟವಾದ ಪಾತ್ರದ ಆಮಿಷವನ್ನು ಒಡ್ಡಬೇಕು. ಹಾಗಿದ್ದರೆ ಮಾತ್ರ ಜನಪ್ರಿಯತೆಯ ತುತ್ತತುದಿಯಲ್ಲಿರುವ ಬಾಲಿವುಡ್ ನಾಯಕಿಯರು ಗಾಂಧಿನಗರಕ್ಕೆ ಬರುತ್ತಾರೆಯೇ ವಿನಃ ಅವರ್‍ಯಾರೂ ಇಲ್ಲಿಗೆ ಸುಮ್ಮಸುಮ್ಮನೆ ಬರುವುದಿಲ್ಲ. ಈ ಹಿಂದೆ ಜೂಹಿ ಚಾವ್ಲಾ 'ಕಯಾಮತ್ ಸೆ ಕಯಾಮತ್ ತಕ್' ಎಂಬ ಚಿತ್ರದಲ್ಲಿ ನಟಿಸುವ ಮುನ್ನ ರವಿಚಂದ್ರನ್ ಕೈಗೆ ಸಿಕ್ಕಿದ್ದಳು. ಅನಂತರ ಹಿಂದಿಯಲ್ಲಿ 'ಯಕಾಮತ್ ಸೆ ಕಯಾಮತ್ ತಕ್' ಸೂಪರ್ ಹಿಟ್ ಚಿತ್ರವಾದರೂ, ಹಾಗೆಯೇ ಆಕೆ ನಯಿಸಿದ್ದ ಕನ್ನಡ ಚಿತ್ರ 'ಪ್ರೇಮಲೋಕ' ಕೂಡ ಸೂಪರ್ ಹಿಟ್ ಆಗಿದ್ದರೂ ಆಕೆ ರವಿ ಪಾಲಿಗೆ ಗಗನಕುಸುಮವಾದಳು.

ಜೂಹಿಯಷ್ಟೇ ಕನ್ನಡ ಚಿತ್ರರಂಗದಲ್ಲಿ ಸುದ್ದಿ ಮಾಡಿದ ಇನ್ನೊಬ್ಬಳು ಬೆಡಗಿ ಎಂದರೆ ಶಿಲ್ಪಾ ಶೆಟ್ಟಿ. ಆದರೆ ಶಿಲ್ಪಾ ಶೆಟ್ಟಿ ಗಾಂಧಿನಗರಕ್ಕೆ ಕಾಲಿಡುವ ಹೊತ್ತಿಗೆ ಬಾಲಿವುಡ್‌ನಲ್ಲಿ ಆಕೆ ಯಾರಿಗೂ ಬೇಡವಾಗಿದ್ದಳು. ಇವರಿಬ್ಬರ ಹೊರತಾಗಿ ಮುಂಬೈಯ ದೊಡ್ಡ ಬೆಡಗಿ ಕನ್ನಡದಲ್ಲಿ ನಟಿಸಿದ ಉದಾಹರಣೆಗಳು ಕಡಿಮೆ.

ಹಾಗಂತ ಬಾಲಿವುಡ್ ಬೆಡಗಿಯರು ಕನ್ನಡದಂತಹ ಪ್ರಾದೇಶಿಕ ಭಾಷೆಯಲ್ಲಿ ನಟಿಸುವುದಿಲ್ಲವೆಂದರ್ಥವಲ್ಲ. ಕನ್ನಡದವಳೇ ಆದ ವಿಶ್ವ ಸುಂದರಿ ಐಶ್ವರ್ಯ ರೈ ಬೆಂಗಾಲಿ, ಮಲೆಯಾಳಂ ಮತ್ತು ತಮಿಳು ಚಿತ್ರಗಳಲ್ಲಿ ನಟಿಸಿಲ್ಲವೇ?

ಅಂದರೆ ಒಬ್ಬ ನಿರ್ದೇಶಕ, ಒಂದು ಅದ್ಭುತವಾದ ಪಾತ್ರವನ್ನು ಸೃಷ್ಟಿಸಿದರೆ ಮಾತ್ರ ಇಂತಹ ಬಾಲಿವುಡ್ ನಾಯಕಿಯರನ್ನು ಗಾಂಧಿನಗರಕ್ಕೆ ಕರೆತರಲು ಸಾಧ್ಯ. ಇಲ್ಲಿಯೂ ಮರಸುತ್ತುವ ಪಾತ್ರಗಳಲ್ಲಿ ನಟಿಸುವುದಾದರೆ ಅವರು ಮುಂಬೈನಲ್ಲೇ ಸುತ್ತುತ್ತಾರೆಯೇ ವಿನಃ ಕನ್ನಡದ ಮರಕ್ಕೆ ಯಾಕೆ ಸುತ್ತುಹಾಕುತ್ತಾರೆ? ಕನ್ನಡದಲ್ಲಿ ಅಂತಹ ಕ್ರಿಯಾಶೀಲ ನಿರ್ದೇಶಕರು ಇದ್ದಾರೆಯೇ? ಎಂಬ ನಮ್ರ ವಿನಯ ಪೂರ್ವ ಪ್ರಶ್ನೆ ನಮ್ಮದು.

• ಶೆಣೈ

shenoylankesh@gmail.com

# ವಿಷ್ಣು ಬರ್ತ್ ಡೇ


## ನೆನೆದವರು ಮತ್ತು ಮರೆತವರು

ಅವರು ಈ ಸಂದರ್ಭದಲ್ಲಿ ಇದ್ದಿದ್ದರೆ ಅದರ ಖದರೇ ಬೇರೆ ಇರುತ್ತಿತ್ತು. ಆದರೆ ವಿಷ್ಣು ಅಷ್ಟು ಬೇಗ ಎಲ್ಲರನ್ನೂ ಬಿಟ್ಟು ದೂರ ಹೋಗುತ್ತಾರೆ ಎಂದು ಯಾರು ತಾನೇ ಭಾವಿಸಿದ್ದರು?

ಈ ಬಾರಿ ವಿಷ್ಣು ಅವರ ಹುಟ್ಟುಹಬ್ಬ ಅವರ ಅಭಿಮಾನಿಗಳ ಪಾಲಿಗೆ ಅತ್ಯಂತ ಸಂತೋಷದ ಕ್ಷಣವಾಗಿರುತ್ತಿತ್ತು. ಯಾಕೆಂದರೆ ವಿಷ್ಣು ಬದುಕಿದ್ದರೆ ಇದು ಅವರ 60ನೇ ಹುಟ್ಟು ಹಬ್ಬವಾಗುತ್ತಿತ್ತು. ಆದರೂ ಭಾರತಿ ವಿಷ್ಣುವರ್ಧನ್ ಮತ್ತು ಅಳಿಯ ಅನಿರುದ್ಧ್ ಸೆಪ್ಟೆಂಬರ್ 18ರಂದು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ವಿಷ್ಣು ಹುಟ್ಟಿದ ಹಬ್ಬವನ್ನು ನೆನಪಿನ ರೂಪದಲ್ಲಿ ಆಚರಿಸಲು ಹೊರಟಿದ್ದಾರೆ.

ಗರುಡ ಮಾಲ್‌ನ ಐನಾಕ್ಸ್ ಥಿಯೇಟರ್‌ನಲ್ಲಿ 17, 18 ಮತ್ತು 19ರಂದು ವಿಷ್ಣು ಚಿತ್ರೋತ್ಸವವನ್ನು ಹಮ್ಮಿಕೊಂಡಿದ್ದಾರೆ. ಈ ಮೂರು ದಿನಗಳ ಕಾಲ ವಿಷ್ಣು ವೃತ್ತಿ ಜೀವನದ ಹನ್ನೆರಡು ಉತ್ತಮ ಚಿತ್ರಗಳು ಪ್ರದರ್ಶನಗೊಳ್ಳಲಿವೆ. ಈ ಚಿತ್ರೋತ್ಸವವನ್ನು ರಾಜಕಾರಣಿಗಳ ಬದಲು ದಿ.ಪುಟ್ಟಣ್ಣನವರ ಪತ್ನಿ ಕೈಯಲ್ಲಿ ಉದ್ಘಾಟಿಸಲು ನಿರ್ಧರಿಸಿದ್ದಾರೆ. ಇದು ವಿಷ್ಣು ಸಿನಿಮಾ ಜೀವನಕ್ಕೆ ನಾಂದಿ ಹಾಡಿದ ಪುಟ್ಟಣ್ಣನವರಿಗೆ ನೀಡುವ ಗೌರವವೂ ಹೌದು ಎನ್ನುತ್ತಾರೆ ಭಾರತಿ ವಿಷ್ಣುವರ್ಧನ್. ಅಂದ ಹಾಗೆ ಕೊನೆ ದಿನ ಶತ್ರುಘ್ನ ಸಿನ್ಹಾ ಮತ್ತು ವಿಷ್ಣು ಆಪ್ತಮಿತ್ರ ಅಂಬರೀಶ್ ಮುಖ್ಯ ಅತಿಥಿಗಳಾಗಿ ಕಾಣಿಸಿಕೊಳ್ಳಲಿದ್ದಾರೆ.





ಮುಖ್ಯವಾದ ಸುದ್ದಿಯೆಂದರೆ ಈ ಚಿತ್ರಗಳಿಗೆ ಯಾವುದೇ ಟಿಕೆಟ್‌ಗಳಿರುವುದಿಲ್ಲ. ಪ್ರತಿ ಚಿತ್ರಕ್ಕೆ ಸಂಬಂಧಪಟ್ಟ ನಿರ್ದೇಶಕರು ಮತ್ತು ಒಂದಿಬ್ಬರು ನಟನಟಿಯರನ್ನು ಥಿಯೇಟರ್‌ನಲ್ಲೇ ಸನ್ಮಾನಿಸುವ ಕಾರ್ಯಕ್ರಮವನ್ನೂ ಹಾಕಿಕೊಂಡಿದ್ದೇವೆ ಎಂದರು ವಿಷ್ಣು ಅಳಿಯ ಅನಿರುದ್ಧ್. "ನನ್ನ ಅಪ್ಪಾಜಿ ವೃತ್ತಿ ಜೀವನ ಮಿನುಗುವಂತೆ ಮಾಡಿದ ತಂತ್ರಜ್ಞರಿಗೆ ನಾವು ಕುಟುಂಬದವರು ಸಲ್ಲಿಸುವ ಪುಟ್ಟ ಪ್ರೀತಿಯ ಕಾಣಿಕೆ ಇದು" ಎಂದರು ಅನಿರುದ್ಧ್.

ವಿಷ್ಣು ಹುಟ್ಟಿದ ಸೆಪ್ಟೆಂಬರ್ 18ರಂದು ಭಾರತಿ ವಿಷ್ಣುವರ್ಧನ್ ಸಮೇತ ಅವರ ಕುಟುಂಬದ ಸದಸ್ಯರೆಲ್ಲರೂ ಅಭಿಮಾನ್ ಸ್ಟುಡಿಯೋದಲ್ಲಿರುವ ವಿಷ್ಣು ಸಮಾಧಿ ಬಳಿ ಇರುತ್ತಾರಂತೆ. ತಮ್ಮ ಆರಾಧ್ಯ ದೈವವನ್ನು ಪ್ರತಿವರ್ಷ ನೋಡಲು ಬರುತ್ತಿದ್ದ ಅಭಿಮಾನಿಗಳು ಈ ಬಾರಿ ಭಾರವಾದ ಹೃದಯದಿಂದ ಬರುತ್ತಾರೆ. ಅವರಿಗೆ ನಿರಾಶೆಯಾಗಬಾರದು ಎಂಬ ಕಾರಣಕ್ಕಾಗಿ ವಿಷ್ಣು ಕುಟುಂಬದ ಸದಸ್ಯರು ಅವರ ಜೊತೆ ಇರಲು ನಿರ್ಧರಿಸಿದ್ದಾರೆ.

ಆದರೆ ಈತನಕ ಫಿಲ್ಮ್ ಚೇಂಬರ್‌ನವರಾಗಲಿ, ಕಲಾವಿದರ ಸಂಘದವರಾಗಲೀ ವಿಷ್ಣು ನೆನಪನ್ನು ಮಾಡುವ ಬಗ್ಗೆ ಯಾವ ಸುದ್ದಿಯೂ ಕೇಳಿಬಂದಿಲ್ಲ. ಕನ್ನಡ ಚಿತ್ರರಂಗದ ಹುಟ್ಟುಗುಣವೇ ಇದು. ನರಸಿಂಹರಾಜು ಅವರನ್ನು ಅವರ ಮೊಮ್ಮಕ್ಕಳೇ ನೆನಪಿಸಿಕೊಳ್ಳಬೇಕು. ಲೋಕೇಶ್ ನೆನಪನ್ನು ಗಿರಿಜಾ ಲೋಕೇಶ್ ಅವರೇ ಮಾಡಿಕೊಳ್ಳಬೇಕು. ಈಗ ಅದೇ ರೀತಿ ವಿಷ್ಣು ನೆನಪನ್ನು ಅವರ ಕುಟುಂಬದವರೇ ಮಾಡುತ್ತಿದ್ದಾರೆ.

ಹೇಗಿದೆ ನೋಡಿ ನಮ್ಮ ಚಿತ್ರರಂಗ.

# ಉತ್ತರ ಕುಮಾರನ 'ಶೌರ್ಯ' ದರ್ಶನ!

...ರಿದ್ಯಾಕೋ ಗೊತ್ತಿಲ್ಲ, ಕೆಲವರು ಎಲ್ಲೋ ನವೆಯಾದರೆ, ಇನ್ನೆಲ್ಲೋ ಕೆರೆದುಕೊಂಡು, ...ನ್ನೆಲ್ಲೋ ಗಾಯ ಮಾಡಿಕೊಂಡುಬಿಡುತ್ತಾರೆ!

...ಹಾ! ದರ್ಶನ್‌ನನ್ನು ನೋಡಿದರೆ ಯಾರಿಗಾದರೂ ಹಾಗನ್ನಿಸದೇ ಇರಲು ...ಿಲ್ಲ.

...ನ್ನ ಫ್ಯಾಮಿಲಿ ಪ್ರಾಬ್ಲಮ್ಮಿಗೂ, ತೋಪೆದ್ದು ಹೋಗುತ್ತಿರುವ ಸಿನಿಮಾಗಳ ...ಗೂ ಪತ್ರಕರ್ತರೇ ಕಾರಣ ಅನ್ನೋಹಾಗೆ ಮೊನ್ನೆ 'ಶೌರ್ಯ' ಚಿತ್ರದ ಪತ್ರಿಕಾಗೋಷ್ಠಿ... ದರ್ಶನ್ ಮನಬಂದಂತೆ ಮಾತಾಡಿದ್ದಾರೆ. ಅದೂ ಕುಡಿದ ಅಮಲಿನಲ್ಲಿ...


...ತ ನಟಿಸಿರುವ 'ಶೌರ್ಯ' ಬಿಡುಗಡೆಯಾದ ಮೇಲೆ ಎಲ್ಲ ಪತ್ರಿಕೆಗಳೂ ಆ ...ಸಿನಿಮಾವನ್ನು ಬೈದು ಬರೆದಿದ್ದಕ್ಕೆ ದರ್ಶನ್‌ಗೆ ಮಾಧ್ಯಮಗಳ ವಿರುದ್ಧ ಕೋಪ ...ಿದೆ.

...ರ್ವ ವ್ಯಕ್ತಿ ಸಾರ್ವಜನಿಕ ವ್ಯಕ್ತಿ ಆದರೆ ಆತನನ್ನು ಕುರಿತ ಪರ್ಸನಲ್ ಅಥವಾ ...ರ್ಸನಲ್ ಸುದ್ದಿಗಳಲ್ಲಿ ಮಾಧ್ಯಮಗಳೂ ವರದಿ ಮಾಡುವುದು ಸಹಜ. ಹಾಗಂತ ... ಪತ್ರಿಕಾ ಸಮೂಹದತ್ತ ದರ್ಶನ್ ತನ್ನ ಉದ್ದ ನಾಲಿಗೆ ಚಾಚುವುದು ...? ಹೀಗಾಗಿ ಈಗ ಇಡೀ ಮಾಧ್ಯಮ ದರ್ಶನ್ ವಿರುದ್ಧ ತಿರುಗಿಬಿದ್ದು ...ದರಲ್ಲಿ ಹಿಗ್ಗಾ ಮುಗ್ಗಾ ಗೂಸಾ ಕೊಡುತ್ತಿವೆ.

...ೊದಲು ಸೀರಿಯಲ್ಲು, ಸಿನಿಮಾಗಳಲ್ಲಿ ಸಣ್ಣಪುಟ್ಟ ಪಾತ್ರ ಮಾಡಿಕೊಂಡು ...ತ್ತಿದ್ದ ಇದೇ ದರ್ಶನ್ ತನ್ನ ಬಗ್ಗೆ ಹೊಗಳಿ ಬರೆಸಿಕೊಳ್ಳಲು ಒಂದಷ್ಟು ...ರ ಮನೆ ಸುತ್ತ ಉರುಳು ಸೇವೆ ಮಾಡಿದ್ದೂ ಇದೆ. ಇಂಥ ದರ್ಶನ್ ಈಗ 'ಈ ಜರ್ನಲಿಸ್ಟುಗಳನ್ನು ನನ್ನ ಮನೆ ಕಾಂಪೌಂಡಿನೊಳಗೂ ಬಿಟ್ಟುಕೊಳ್ಳುವುದಿಲ್ಲ' ಎಂಬ ದುರಹಂಕಾರದ ಮಾತುಗಳನ್ನಾಡುತ್ತಿದ್ದಾರೆ. 'ಪತ್ರಕರ್ತರು ನನ್ನ ಸಿನಿಮಾಗಳ ಬಗ್ಗೆ ಒಳ್ಳೆಯ ಮಾತೇ ಬರೆಯೊಲ್ಲ, ಪತ್ರಿಕಾಗೋಷ್ಠಿಗಳಲ್ಲಿ ಬಂದು ನಮ್ಮನ್ನೇ ಪ್ರಶ್ನಿಸುತ್ತಾರೆ. ಬೇರೆ ಭಾಷೆಯ ಚಿತ್ರರಂಗದಲ್ಲಿ ಕಲಾವಿದರು ಹೇಳಿದ್ದನ್ನು ಮಾತ್ರ ಕೇಳಿಸಿಕೊಳ್ಳುತ್ತಾರೆ. ಯಾರೂ ಪ್ರಶ್ನಿಸುವುದಿಲ್ಲ' ಎಂದು ಅಡಸಾ ಬಡಸಾ ಮಾತಾಡಿದ್ದಾರೆ.

### ದರ್ಶನ್ ಯಾಕೆ ಹೀಗಾದರು?

ನಿಜಕ್ಕೂ ನೋಡಿದರೆ ದರ್ಶನ್‌ಗೆ ಒಳ್ಳೆ ಸಿನಿಮಾಗಳಲ್ಲಿ ನಟಿಸಬೇಕು, ನೆನಪಿನಲ್ಲಿ ಉಳಿಯುವಂಥ ಕಲಾವಿದನಾಗಬೇಕು ಎಂಬ ಬಯಕೆಯೇ ಇದ್ದಂತಿಲ್ಲ. ಈತನದ್ದೇನಿದ್ದರೂ ಕಮರ್ಷಿಯಲ್ ಮೆಂಟಾಲಿಟಿ. ತನಗೆ ದುಡ್ಡು ಕೊಟ್ಟ್ರೆ ಚೆಡ್ಡಿಯಲ್ಲೂ ನಟಿಸಲು ಸಿದ್ಧ ಎಂದು ಇದೇ ದರ್ಶನ ಹಿಂದೊಮ್ಮೆ ಘೋಷಿಸಿದ್ದೂ ಇದೆ. ಹೀಗೆ ಕಾಸು ಮಾಡುವುದನ್ನೇ ಪರಮೋದ್ದೇಶವಾಗಿಸಿಕೊಂಡಿರುವ ದರ್ಶನ್ ನಿರ್ಮಾಪಕರಿಗೆ ಕೊಡುವ ಕಾಟ ಅಷ್ಟಿಷ್ಟಲ್ಲ.



ಸಮಯಕ್ಕೆ ಸರಿಯಾಗಿ ಪೇಮೆಂಟ್ ಕೈಸೇರದಿದ್ದರೆ ಆ ಸಿನಿಮಾ ಕತೆ ಮುಗಿದಂತೆಯೇ. ಇದಕ್ಕೆ ಇತ್ತೀಚಿನ ಉದಾಹರಣೆ: 'ಬಾಸ್' ಚಿತ್ರದ ನಿರ್ಮಾಪಕ ರಮೇಶ್ ಯಾದವ್ ತನಗೆ ಬಾಕಿ ದುಡ್ಡು ಕೊಡಲಿಲ್ಲ ಎಂಬ ಕಾರಣಕ್ಕೆ ಚಿತ್ರೀಕರಣಗೊಂಡಿದ್ದ ಹಾಡುಗಳ ರೀಲ್‌ಅನ್ನು ದರ್ಶನ್ ತನ್ನ ಮನೆಗೆ ಹೊತ್ತೊಯ್ದಿದ್ದು.

ಕನ್ನಡ ಚಿತ್ರರಂಗ ಎಂತೆಂಥ ಮೇರು ನಟರನ್ನು ಕಂಡಿದೆ. ಅವರ್‍ಯಾರೂ ಸಹ ಪತ್ರಕರ್ತರ ಮುಂದೆ ಇಷ್ಟು ತುಚ್ಛವಾಗಿ ನಡೆದುಕೊಂಡಿರಲಿಲ್ಲ. ಅದಷ್ಟು ಬೇಗ ದರ್ಶನ ಮೆಚೂರ್ ಆಗಿ ಚಿಂತಿಸುವುದನ್ನು, ವರ್ತಿಸುವುದನ್ನು, ಮಾತಾಡುವುದನ್ನು ಕಲಿತುಕೊಳ್ಳುವಂತಾಗಲಿ, ಮಾಧ್ಯಮಗಳ ಮುಂದೆ ತನ್ನ ಮರ್ಯಾದೆಯನ್ನು ಉಳಿಸಿಕೊಳ್ಳುವಂತಾಗಲಿ......

• ಅರುಣೋದಯ

Regd.No.KA/RNP/BGS/2036/2008-10 Posted at : GPO, Bangalore-01. R B P LANKESH, Kannada Weekly Price Rs. 12/- 15-09-2010 RNI No. KARKAN2005/14



## ಫ್ಲೈಯಿಂಗ್ ಸ್ಟಾರ್

ಕಳೆದ ಮಂಗಳವಾರ ನಾಯಕಿ ರಮ್ಯಾ ಇಡೀ ದಿನ ಬೇರೆ ಬೇರೆ ಚಾನೆಲ್‌ಗಳ ಕಚೇರಿಯಲ್ಲೇ ಕಾಲ ಕಳೆದರು. ಅರ್ಥಾತ್ ರಮ್ಯಾ ಇಡೀ ದಿನ ಚಾನೆಲ್‌ಗಳಿಗೆ ಸಂದರ್ಶನ ನೀಡುತ್ತಾ ಹೋದರು. "ಈ ರೀತಿ ನಾನು ಒಂದು ದಿನ ರಜ ಹಾಕಿ ಸಂದರ್ಶನ ನೀಡುತ್ತಿರುವುದು ಇದೇ ಮೊದಲ ಬಾರಿ" ಎಂದರು ರಮ್ಯಾ. ಇದಕ್ಕೆ ಕಾರಣವೂ ಇದೆ; ಅಂದೇ ರಾತ್ರಿ ರಮ್ಯಾ ಅಮೆರಿಕಾಕ್ಕೆ ಹಾರಿ ಹೋದರು.

ಮುಂದಿನ ಒಂದು ತಿಂಗಳ ಕಾಲ ಆಕೆ ಅಮೆರಿಕಾದಲ್ಲಿ ಸುತ್ತಾಡಲಿದ್ದಾರಂತೆ. "ನಾನು ಚಿತ್ರೋದ್ಯಮಕ್ಕೆ ಬಂದು ಎಂಟು ವರ್ಷಗಳು ಕಳೆದುಹೋದವು. ಒಂದು ದಿನವೂ ರಜ ತೆಗೆದುಕೊಂಡಿಲ್ಲ. ವಿದೇಶಗಳಿಗೆ ಶೂಟಿಂಗ್‌ಗೆ ಹೋದರೂ ನಮಗೆ ಬೇಕಾದಂತೆ ಮಜಾ ಮಾಡಲು ಆಗುತ್ತಿರಲಿಲ್ಲ. ಆ ಕಾರಣಕ್ಕಾಗಿಯೇ ಇನ್ನು ಒಂದು ತಿಂಗಳ ಕಾಲ ನಾನು ನನಗೆ ಇಷ್ಟಬಂದಂತೆ ಅಮೆರಿಕಾದಲ್ಲಿ ಸುತ್ತಾಡಿ, ನನ್ನ ಹೊಸಮನೆಗೆ ಶಾಪಿಂಗ್ ಮಾಡಬೇಕು ಅಂದುಕೊಂಡಿದ್ದೇನೆ" ಅಂದರು ರಮ್ಯ.

ಹಾಗೆ ನೋಡಿದರೆ, ರಮ್ಯಾ ಮುಂದಿನ ಎರಡು ತಿಂಗಳುಗಳ ಕಾಲ ಗಾಂಧಿನಗರದಲ್ಲಿ ಕಾಲೂರುವ ಸಾಧ್ಯತೆಯೇ ಕಡಿಮೆ. ಏಕೆಂದರೆ ಅಮೆರಿಕಾದಲ್ಲಿ ಸುತ್ತಾಡಿದ ನಂತರ ಆಕೆ ಅಲ್ಲಿಂದ ನೇರವಾಗಿ ದಕ್ಷಿಣ ಆಫ್ರಿಕಾದಲ್ಲಿ ನಡೆಯಲಿರುವ ಕ್ರಿಕೆಟ್ ನೋಡಲು ಹೋಗುತ್ತಾಳೆ. ಅಲ್ಲಿಂದ ಇಂಡಿಯಾಕ್ಕೆ ಬಂದನಂತರ ಈ ಮಂಡ್ಯದ ಹುಡುಗಿ 'ದಂಡಂ ದಶಗುಣಂ' ಮತ್ತು 'ಸಂಜು ವೆಡ್ಸ್ ಗೀತಾ' ಚಿತ್ರಕ್ಕಾಗಿ ಎರಡು ಬಾರಿ ಮತ್ತೆ ವಿದೇಶಕ್ಕೆ ಹಾರಿಹೋಗಲಿದ್ದಾಳೆ.

ಇವೆಲ್ಲಾ ಕಾರಣಕ್ಕಾಗಿ ರಮ್ಯಾಳಿಗೆ 'ಫ್ಲೈಯಿಂಗ್ ಸ್ಟಾರ್' ಎಂಬ ಹೊಸ ಬಿರುದು ಅಭಿಮಾನಿಗಳಿಂದ ದೊರೆತಿದೆ.

# ಕಡೆಗೂ ಬಂದೇಬಿಟ್ಟ ಜೊತೆಗಾರ



ಇದು ಕೇವಲ ಎರಡು ವರ್ಷಗಳ ಹಿಂದಿನ ಮಾತು...

ಕನ್ನಡ ಚಿತ್ರರಂಗದ ಮಟ್ಟಿಗೆ ದೊಡ್ಡ ಆಡಿಯೋ ಕಂಪೆನಿಯದು. ಜೊತೆಗೆ ಸಿನಿಮಾ ನಿರ್ಮಾಣ ಸಂಸ್ಥೆಯೂ ಹೌದು. ನೂರಾರು ಜನ ಕೆಲಸಗಾರರು, ಅವರಿಗೆಲ್ಲ ಕೈತುಂಬ ಕೆಲಸ, ಕಂಪನಿಗೆ ಬಂದುಹೋಗುವ ವರಿಗೂ ಅದ್ದೂರಿ ಆತಿಥ್ಯ ಉದ್ಯೋಗಿಗಳೂ ಸೇರಿದಂತೆ ಬಂದ ಎಲ್ಲ ಅತಿಥಿಗಳಿಗೂ ಮಧ್ಯಾಹ್ನದ ಸುಖ ಭೋಜನ ವ್ಯವಸ್ಥೆ....

ಇಂತಹ ಅನ್ನದಾತರಾಗಿದ್ದ ನಿರ್ಮಾಪಕನ ಹೆಸರು ಅಶ್ವಿನಿ ರಾಮ್‌ಪ್ರಸಾದ್!

ಆದರೆ ಇವತ್ತು ರಾಮ್‌ಪ್ರಸಾದ್ ಎಲ್ಲವನ್ನೂ ಕಳೆದುಕೊಂಡು ಬರಿಗೈ ಆಗಿದ್ದಾರೆ. 'ಜೋಗಿ' ಚಿತ್ರದಿಂದ ಬರೋಬ್ಬರಿ ಹನ್ನೆರಡು ಕೋಟಿ ದುಡಿದು ಅದೃಷ್ಟವಂತ ನಿರ್ಮಾಪಕ ಎನಿಸಿಕೊಂಡಿದ್ದ ರಾಮ್‌ಪ್ರಸಾದ್ ಆನಂತರ 'ಪ್ರೀತಿ ಏಕೆ ಭೂಮಿ ಮೇಲಿದೆ' ಚಿತ್ರವನ್ನು ನಿರ್ಮಿಸಿದರು. ಆ ಚಿತ್ರದ ನಿರ್ದೇಶಕ ಪ್ರೇಮ್‌ನನ್ನೇ ಹೀರೋ ಮಾಡಿದ್ದೇ ತಪ್ಪಾಯಿತು.



ಪರಿಣಾಮವಾಗಿ ರಾಮ್‌ಪ್ರಸಾದ್ ಎಂಬ ಕೋಟಿ ನಿರ್ಮಾಪಕ ಅಕ್ಷರಶಃ ದಿವಾಳಿಯಾಗಿಬಿಟ್ಟರು. ನಂತರ ರಾಮ್‌ಪ್ರಸಾದ್ ನಿರ್ಮಿಸಿದ 'ಜೊತೆಗಾರ' ಬ್ಯಾಂಕ್ ಸಾಲದ ಸಮಸ್ಯೆಯಲ್ಲಿ ಸಿಲುಕಿ ಅದರ ಬಿಡುಗಡೆಯ ದಿನವೇ ರದ್ದಾಯಿತು. ಅದೇ ವೇಳೆಗೆ ಸಾಲ ಕೊಟ್ಟಿದ್ದವರೆಲ್ಲರೂ ತರಹೇವಾರಿಯಲ್ಲಿ ಅಮರಿಕೊಂಡರು. ರಾಮ್ ಪ್ರಸಾದ್ ಬಾಧೆಯ ಮೇಲೆ ಬಾಧೆ ಅನುಭವಿಸಬೇಕಾಯಿತು. ಸಿನಿಮಾ ಮಾಡಲು ತೆಗೆದುಕೊಂಡಿದ್ದ ಸಣ್ಣ ಮಟ್ಟದ ಸಾಲ ಬೆಳೆದು ಬೆಳೆದೂ ಬೆಟ್ಟವಾಯಿತು. ಅಸಲಿಗಿಂತ ಬಡ್ಡಿಯೇ ದೊಡ್ಡದಾಯಿತು; ಇಪ್ಪತ್ತು ಪರ್ಸೆಂಟ್ ಬಡ್ಡಿ ತಿಂದ ಫೈನಾನ್ಶಿಯರುಗಳ ಜೇಬೂ ಭರ್ತಿಯಾಯಿತು. ಇದೇ ವೇಳೆಗೆ ಕನ್ನಡ ಚಿತ್ರರಂಗ ಆಡಿಯೋ ಮಾರ್ಕೆಟ್‌ಅನ್ನೂ ಕಳೆದುಕೊಂಡಿದ್ದರಿಂದ ರಾಮ್‌ಪ್ರಸಾದ್ ಪಾಲಿಗೆ ಅಲ್ಲೂ ಸಹ ಏನೂ ಗಿಟ್ಟಲಿಲ್ಲ...

ಸತತ ಎರಡು ವರ್ಷಗಳ ಕಾಲ ಇಂತಹ ನರಕಯಾತನೆಯನ್ನು ಅನುಭವಿಸಿದ ರಾಮ್‌ಪ್ರಸಾದ್ ಈಗ ಮತ್ತೆ ಫೀಲ್ಡಿಗಿಳಿದಿದ್ದಾರೆ. ಇಲ್ಲಿಯತನಕ ಡಬ್ಬಾದಲ್ಲಿ ಕುಂತಿದ್ದ 'ಜೊತೆಗಾರ'ನಿಗೆ ಮತ್ತಷ್ಟು ಪಾಲಿಷ್ ಮಾಡಿ, ಒಂದು ಎಕ್ಸ್‌ಟ್ರಾ ಹಾಡನ್ನೂ ಸೇರಿಸಿ ಇದೇ ತಿಂಗಳ ಹತ್ತನೇ ತಾರೀಖು ಬಿಡುಗಡೆ ಮಾಡುತ್ತಿದ್ದಾರೆ. ಒಂದು ವೇಳೆ ಸೆಪ್ಟೆಂಬರ್ 15ರ ಒಳಗೆ ಸಿನಿಮಾ ಬಿಡುಗಡೆ ಮಾಡದಿದ್ದರೆ ಕರಾರಿನ ಪ್ರಕಾರ ಸಿನಿಮಾ ಹಕ್ಕು ಐಡಿಬಿಐ ಬ್ಯಾಂಕ್ ಪಾಲಾಗುವುದು ಖಚಿತ. ಹೀಗಾಗಿ ಸಾಲಸೋಲ ಮಾಡಿ, ಇದ್ದಬದ್ದ ಹಣವನ್ನೆಲ್ಲಾ ಬಳಿದು 'ಜೊತೆಗಾರ'ನ ಬಿಡುಗಡೆಗೆ ಸುರಿದಿದ್ದಾರೆ.



ಅದೇ ಹತ್ತನೇ ತಾರೀಖಿನಂದೇ ಗೋಲ್ಡು ಗಣೇಶನ 'ಏನೋ ಒಂಥರಾ' ಕೂಡಾ ಬಿಡುಗಡೆಯಾಗುತ್ತಿದೆ. 'ಒಂದು ವಾರ ಮುಂದೆ ಬಿಡುಗಡೆ ಮಾಡಿ, ನಮ್ಮ ಪ್ರೇಕ್ಷಕರು ಡಿವೈಡ್ ಆಗಿಬಿಡುತ್ತಾರೆ' ಎಂದು ರಾಮ್ ಪ್ರಸಾದ್ ಗೋಗರೆದರೂ 'ಒಂಥರಾ' ನಿರ್ಮಾಪಕ ಚಂದ್ರಶೇಖರ್ ಹಠ ಹಿಡಿದು ಅವತ್ತೇ ತಮ್ಮ ಚಿತ್ರವನ್ನೂ ತೆರೆಗೆ ತರುತ್ತಿದ್ದಾರೆ. ಯೋಗರಾಜ ಭಟ್ಟರ 'ಪಂಚರಂಗಿ'ಯೂ 'ಜೊತೆಗಾರ'ನಿಗೆ ಪ್ರತಿಸ್ಪರ್ಧಿಯಾಗುತ್ತಿದೆ. ಹೀಗಾಗಿ ಅಶ್ವಿನಿ ಪ್ರಸಾದ್ ಈಗ ಕೊಂಚ ಆತಂಕದಲ್ಲೇ ಇದ್ದಾರೆ. ಮೊದಲಿನಿಂದಲೂ ರಾಮ್‌ಪ್ರಸಾದ್‌ಗೆ ಬೆನ್ನೆಲುಬಾಗಿರುವವರು ಅವರ ಸಹೋದರ ಪಚ್ಚಿ, ಹೇಗಾದರೂ ಮಾಡಿ ಈ ಬಾರಿ ತನ್ನ ಅಣ್ಣನನ್ನು ಸಾಲದಿಂದ ಮುಕ್ತವಾಗಿಸಬೇಕು ಎಂದು ತೀರ್ಮಾನಿಸಿರುವ ಪಚ್ಚಿ ಸಿನಿಮಾ ರಿಲೀಸ್ ಮಾಡಿಸುವ ಎಲ್ಲ ಹೊಣೆಯನ್ನೂ ತಾವೇ ಹೊತ್ತಿದ್ದಾರೆ.

'ಜೊತೆಗಾರ' ಚಿತ್ರದ ಬಿಡುಗಡೆ, ಸೋಲು, ಗೆಲುವು ಬರೀ ರಾಮ್‌ಪ್ರಸಾದ್ ಭವಿಷ್ಯದ ಮೇಲಷ್ಟೇ ನಿಂತಿಲ್ಲ, ಈ ಸಿನಿಮಾದ ಗೆಲುವು ನಾಯಕ ನಟ 'ನೆನಪಿರಲಿ' ಪ್ರೇಮ್ ಮತ್ತು ನಾಯಕಿ ರಮ್ಯಾ ಪಾಲಿಗೂ ಅನಿವಾರ್ಯವಾಗಿದೆ.

ಕಳೆದ ನಾಲ್ಕು ವರ್ಷಗಳಿಂದ ಗೆಲುವಿನ ಮುಖವನ್ನೇ ನೋಡದ ಪ್ರೇಮ್ ಭವಿಷ್ಯ 'ಜೊತೆಗಾರ'ನ ಬಿಡುಗಡೆಯ ನಂತರ ಬದಲಾಗಬೇಕಿದೆ. ರಮ್ಯಾಳಿಗೂ ಅಷ್ಟೇ. ಕಳೆದ ಒಂದು ವರ್ಷದಲ್ಲಿ ಆಕೆ ನಟಿಸಿದ 'ಜಸ್ಟ್ ಮಾತ್ ಮಾತಲಿ' ಚಿತ್ರವೊಂದನ್ನು ಬಿಟ್ಟರೆ ಆಕೆಯ ಬೇರಾವ ಚಿತ್ರಗಳೂ ರಿಲೀಸ್ ಆಗಿಲ್ಲ. ಹೀಗಾಗಿ ಚಿತ್ರಪ್ರೇಮಿಗಳು ರಮ್ಯಾಳನ್ನು ಮರೆತೇಹೋದಂತಾಗಿದೆ.

ಒಂದಂತೂ ಸತ್ಯ, ಗಾಂಧಿನಗರದಲ್ಲಿದ್ದು, ಸಿನಿಮಾವನ್ನೇ ಜೀವನವನ್ನಾಗಿಸಿಕೊಂಡ ಬಹುತೇಕ ಪ್ರೊಫೆಷನಲ್ ನಿರ್ಮಾಪಕರು ಇಂದು ಬೀದಿಗೆ ಬಿದ್ದಂತಾಗಿದ್ದಾರೆ. ಯಾವತ್ತಿಗೂ ತಮ್ಮ ಅದ್ದೂರಿತನಕ್ಕೇ ಹೆಸರಾದ ಎನ್.ಎಂ. ಸುರೇಶ್ ಸಿನಿಮಾಗಳ ಮೇಲೆ ಕೋಟಿ ಕೋಟಿ ಸುರಿದು ದಿನೇದಿನೇ ಸಾಲದ ಭಯದಲ್ಲಿ ಕಾಲ ಕಳೆಯುವಂತಾಗಿದೆ. ಮೊನ್ನೆಮೊನ್ನೆಯಷ್ಟೇ ಬಿಡುಗಡೆಯಾದ 'ಚೆಲುವೆಯೇ ನಿನ್ನೆ ನೋಡಲು' ಚಿತ್ರ ಸಿಕ್ಕಾಪಟ್ಟೆ ರಿಚ್ ಆಗಿದ್ದರೂ ಅದು ಸುರೇಶ್ ಅವರಿಗೆ ಅಸಲು ತರುವುದು ಅಸಾಧ್ಯ ಎಂದು ಗಾಂಧಿನಗರ ಹೇಳುತ್ತಿದೆ. ಇನ್ನು 'ಗಂಡುಗಲಿ' ನಿರ್ಮಾಪಕ ಕೊಬ್ರಿ ಮಂಜು ಪಾಡೂ ಅಷ್ಟೇ. ಇವರು ಇತ್ತೀಚೆಗೆ ನಿರ್ಮಿಸಿದ ಬಹುತೇಕ ಚಿತ್ರಗಳು ಬಾಕ್ಸ್ ಆಫೀಸ್‌ನಲ್ಲಿ ನೆಲಕಚ್ಚಿವೆ.

ಹೀಗೆ ಸಿನಿಮಾವನ್ನೇ ನಂಬಿರುವ ನಿರ್ಮಾಪಕರು ನಿರ್ನಾಮವಾದರೆ ಕನ್ನಡ ಚಿತ್ರರಂಗ ಮತ್ತು ಅದನ್ನು ನಂಬಿರುವ ತಂತ್ರಜ್ಞರ ಪರಿಸ್ಥಿತಿಯಾದರೂ ಏನಾಗಬೇಡ? ಕಲಾವಿದರು ಮತ್ತು ಕಾರ್ಮಿಕರ ಮನೆಯಲ್ಲಿ ಒಲೆ ಉರಿಯಬೇಕಾದರೆ, ಅನ್ನದಾತ ಪ್ರೇಕ್ಷಕರು ನಮ್ಮ ನಿರ್ಮಾಪಕರ ಮೇಲೆ ಒಂದಿಷ್ಟಾದರೂ ಕರುಣೆ ತೋರಬೇಕಿದೆ. ಆ ಮೂಲಕ ರಾಮ್‌ಪ್ರಸಾದ್, ಸುರೇಶ್, ಕೊಬ್ರಿ ಮಂಜುರಂಥ ನಿರ್ಮಾಪಕರನ್ನು ಗಟ್ಟಿಯಾಗಿ ಉಳಿಸಿಕೊಳ್ಳಬೇಕಿದೆ...

● ಅರುಣ್.ಜಿ
arunodayagc@gmail.com



## ಚೂರು ಸಹಕರಿಸಿದ ಪ್ರೇಮ್

ನಿರ್ಮಾಪಕ ರಾಮ್‌ಪ್ರಸಾದ್ 'ಜೋಗಿ' ಪ್ರೇಮ್‌ಗೆ ಮೇಲಿಂದ ಮೇಲೆ ಸಹಕಾರ ನೀಡುತ್ತಲೇ ಬಂದಿದ್ದರು. 'ಜೋಗಿ'ಯಲ್ಲಿ ಪ್ರೇಮ್‌ಗೆ ಸಲ್ಲಬೇಕಿದ್ದ ಎಲ್ಲ ಬಾಬ್ತೂ ಪ್ರಾಮಾಣಿಕವಾಗಿ ಸಂದಾಯವಾಗಿತ್ತು. 'ಜೋಗಿ'ಯ ಯಶಸ್ಸಿನ ಖುಷಿಯಲ್ಲಿ ಪ್ರಸಾದ್ 'ಪ್ರೀತಿ ಏಕೆ' ಚಿತ್ರಕ್ಕೆ ಯಾವ ಕೊರತೆಯೂ ಆಗದಹಾಗೆ ಹಣವನ್ನು ನೀರಿನ ಹಾಗೆ ಚೆಲ್ಲಿದ್ದರು. ಅದೇ ಹೊತ್ತಿಗೆ ಹಸೆಮಣೆ ಏರಿದ ಪ್ರೇಮ್ ಮದುವೆ ಖರ್ಚಿಗೆ ಐವತ್ತು ಲಕ್ಷದ ದೊಡ್ಡ ಮೊತ್ತವನ್ನು ರಾಮ್‌ಪ್ರಸಾದ್ ಸಮರ್ಪಿಸಿದ್ದರು. ಈ ಎಲ್ಲದರ ಋಣಭಾರದಲ್ಲಿದ್ದ ಪ್ರೇಮ್ 'ಜೊತೆಗಾರ'ನಿಗೆ ಒಂದಿಷ್ಟು ಸಹಕರಿಸಿದ್ದಾರೆ.

ಸದ್ಯ ಪ್ರೇಮ್ 'ಜೋಗಯ್ಯ' ಚಿತ್ರ ನಿರ್ದೇಶನದಲ್ಲಿ ಬ್ಯುಸಿ ಆಗಿದ್ದರೂ ಸಹ 'ಜೊತೆಗಾರ' ಚಿತ್ರಕ್ಕಾಗಿ ಒಂದು ಹಾಡನ್ನು ನಿರ್ದೇಶಿಸಿ ರಾಮ್‌ಪ್ರಸಾದ್‌ಗೆ ಸಹಾಯ ಮಾಡಿದ್ದಾರೆ.






PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44